ಸಂಪುಟ: ೦೬/ ಸಂಚಿಕೆ: ೨೪೩/ರವಿವಾರ ದಿನಾಂಕ: ೨೪-೧೧-೨೦೨೪/ ಪುಟ: ೬/ ಬೆಲೆ ೨-೦೦

ಸತ್ಯಕ್ಕೆ ಕಿರಣ ಸುಳ್ಳಿಗೆ ಕಿಡಿ

ಕಛೇರಿ ದೂರವಾಣಿ ಸಂಖ್ಯೆ 0831-3564491

# ಬೆಳಗಿನ ಸೂರ್ಯೋದಯ

ಕನ್ನಡ ಪ್ರಾದೇಶಿಕ ದಿನಪತ್ರಿಕೆ

ಬೆಳಗಾವಿ ■ ಧಾರವಾಡ ■ ಬಾಗಲಕೋಟ ■ ವಿಜಯಪುರ ■ ಗದಗ ■ ಕೊಪ್ಪಳ ■ ಹಾವೇರಿ ■ ಕಾರವಾರ

ಸಂಪಾದಕರು : ಗುರುರಾಜ ಈರಪ್ಪಾ ಕದಮ, Editor : GURURAJ IRAPPA. KADAM Cell : 9620099959

Volume : 06/ ISSUE : 243/ SUNDAY Date : 24-11-2024/ RNI No. KARKAN/2019/77640/ Postal Reg No. PMG/KA/NK/BM/135/21-24 / POST AT Vantamury Colony Post Office / email : belaginasuryodaya@gmail.com / Page : 6 / Rs. 2.00

### ॥ ಸಪ್ತಋಷಿವಾಣಿ ॥

ಬದುಕಿನಲ್ಲಿ ಸತ್ಯವು ಕೆಲವೊಮ್ಮೆ ಕಹಿಯನ್ನು ಅನುಭವಿಸಬಹುದು, ಆದರೆ ಭ್ರಮೆಗಳ ಜಗತ್ತಿನಲ್ಲಿ ಎಡವಿ ಬೀಳುವುದಕ್ಕಿಂತ ವಾಸ್ತವದೊಂದಿಗೆ ಜೀವಿಸೊದು ಉತ್ತಮ.

**ಧಾರ್ಮಿಕ ಮಾರ್ಗದರ್ಶಕ**
**ಸಂತೋಷ ಆಚಾರ್ಯ, ಉಡುಪಿ**

## ರೇಣುಕಾಸ್ವಾಮಿ ಕೊಲೆ ಪ್ರಕರಣ ಹೆಚ್ಚುವರಿ ಚಾರ್ಜ್‌ಶೀಟ್ ಸಲ್ಲಿಕೆ

**ಬೆಂಗಳೂರು** : ರೇಣುಕಾಸ್ವಾಮಿ ಕೊಲೆ ಪ್ರಕರಣ ಸಂಬಂಧ ಇಲ್ಲಿನ ಕಾಮಾಕ್ಷಿಪಾಳ್ಯ ಠಾಣಾ ಪೊಲೀಸರು, 1,300 ಪುಟಗಳ ಹೆಚ್ಚುವರಿ ಚಾರ್ಜ್ ಶೀಟ್ ಅನ್ನು 57ನೇ ಸಿಸಿಎಚ್ ನ್ಯಾಯಲಯಕ್ಕೆ ಸಲ್ಲಿಕೆ ಮಾಡಿದ್ದಾರೆ. ಪ್ರಮುಖವಾಗಿ ಎಫ್‌ಎಸ್‌ಎಲ್ ವರದಿ, ಸಾಕ್ಷ್ಯಗಳ ಹೇಳಿಕೆಗಳು, ಆರೋಪಿ ಪುನೀತ್ ಮೊಬೈಲ್ ನಿಂದ ರಿಟ್ರೀವ್ ಮಾಡಲಾದ 8 ಫೋಟೊಗಳು ಸೇರಿದಂತೆ ಮಹತ್ವದ ಅಂಶಗಳನ್ನು ಒಳಗೊಂಡಿರುವ ಹೆಚ್ಚುವರಿ ಚಾರ್ಜ್ ಶೀಟ್ ಈಗ ಸಲ್ಲಿಕೆ ಆಗಿದೆ ಎಂದು ಮೂಲಗಳು ತಿಳಿಸಿವೆ.

ಬೆನ್ನುಹುರಿ ನೋವಿನಿಂದ ಬಳಲುತ್ತಿದ್ದು, ಅಗತ್ಯ ಚಿಕಿತ್ಸೆ ಪಡೆಯಲು ಜಾಮೀನು ಮಂಜೂರು ಮಾಡಬೇಕು ಎಂದು ಅರ್ಜಿಯಲ್ಲಿ ದರ್ಶನ್ ಕೋರಿದ್ದರು. ಬಳಿಕ ಆರೋಗ್ಯ ತಪಾಸಣೆಗಾಗಿ ಹೈಕೋರ್ಟ್ 6 ವಾರಗಳ ಕಾಲ ಷರತ್ತುಬದ್ಧ ಮಧ್ಯಂತರ ಜಾಮೀನು ಮಂಜೂರು ಮಾಡಿದೆ. ಇದರ ನಡುವೆ ಹೆಚ್ಚುವರಿ ಚಾರ್ಜ್ಶೀಟ್ ಸಲ್ಲಿಕೆ ಮಾಡಲಾಗಿದೆ.

### ಚಳಿಗಾಲ ಅಧಿವೇಶನ: ವಿವಿಧ ಸಮಿತಿಗಳ ಸಭೆ

## ಸಮರ್ಪಕ ವ್ಯವಸ್ಥೆ ಕಲ್ಪಿಸಲು ಸಚಿವ ಸತೀಶ್ ಜಾರಕಿಹೊಳಿ ಸೂಚನೆ

**ಬೆಳಗಾವಿ,** ವಿಧಾನಮಂಡಳ ಚಳಿಗಾಲ ಅಧಿವೇಶನ ಡಿ.9 ರಿಂದ ನಡೆಯಲಿದೆ. ಪ್ರತಿವರ್ಷದಂತೆ ಅಚ್ಚುಕಟ್ಟಾಗಿ ನಡೆಸುವ ನಿಟ್ಟಿನಲ್ಲಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ವಸತಿ, ಸಾರಿಗೆ ಮತ್ತು ಊಟೋಪಹಾರ ಸೇರಿದಂತೆ ಯಾವುದೇ ಅನಾನುಕೂಲ ಆಗದಂತೆ ಕ್ರಮ ವಹಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಹಾಗೂ ಲೋಕೋಪಯೋಗಿ ಇಲಾಖೆಯ ಸಚಿವರಾದ ಸತೀಶ್ ಜಾರಕಿಹೊಳಿ ತಿಳಿಸಿದರು.

ವಿಧಾನಮಂಡಳ ಚಳಿಗಾಲ ಅಧಿವೇಶನದ ಪೂರ್ವಸಿದ್ಧತೆ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಕಚೇ-ರಿಯ ಸಭಾಂಗಣದಲ್ಲಿ ಶನಿವಾರ(ನ.23) ಜರುಗಿದ ವಿವಿಧ ಉಪ ಸಮಿತಿಗಳ ಅಧ್ಯಕ್ಷರುಗಳು ಹಾಗೂ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಊಟೋಪಹಾರ ಕಲ್ಪಿಸುವವರಿಗೆ ಮುಂಚಿತವಾಗಿಯೇ ಆದೇಶ ನೀಡುವ ಮೂಲಕ ಉತ್ತಮ ವ್ಯವಸ್ಥೆಯನ್ನು ಖಚಿತಪಡಿಸಬೇಕು. ಇದರೊಂದಿಗೆ ತುರ್ತು ಚಿಕಿತ್ಸೆಗೆ ಅನುಕೂಲವಾಗುವಂತೆ ವೈದ್ಯಕೀಯ ತಂಡಗಳು ಮತ್ತು ಅಂಬ್ಯುಲೆನ್ಸ್ ಗಳನ್ನು ನಿಯೋಜಿಸಬೇಕು ಎಂದು ತಿಳಿಸಿದರು.

ಸುವರ್ಣ ವಿಧಾನಸೌಧದ ಒಳಗಡೆಯ ಕಾರಿಡಾರ್ ಗಳಲ್ಲಿ ಹಾಗೂ



ಮೊಗಸಾಲೆಯಲ್ಲಿ ಪಾವತಿ ಆಧಾರದ ಮೇಲೆ ವಿವಿಧ ಬಗೆಯ ಚಹಾ ಹಾಗೂ ಅಲ್ಪೋಪಹಾರ ವ್ಯವಸ್ಥೆ ಕಲ್ಪಿಸುವಂತೆ ಸಚಿವರು ತಿಳಿಸಿದರು.

ಇದಲ್ಲದೆ ಪ್ರತಿಭಟನಾ ಸ್ಥಳಗಳ ನಿರ್ವಹಣೆ ಹಾಗೂ ಸೂಕ್ತಭದ್ರತೆ ಬಗ್ಗೆಯೂ ಅಗತ್ಯ ಕ್ರಮ ವಹಿಸುವಂತೆ ತಿಳಿಸಿದರು.

ನಗರದ ರಸ್ತೆಗಳು ಸೇರಿದಂತೆ ನಗರ ಪ್ರವೇಶಿಸುವ ರಸ್ತೆಗಳ ದುರಸ್ತಿ ಕಾರ್ಯವನ್ನು ಕೂಡಲೇ ಕೈಗೆತ್ತಿಕೊಂಡು ಆದಷ್ಟು ಬೇಗನೇ ಪೂರ್ಣಗೊಳಿಸಬೇಕು ಎಂದು ಲೋಕೋಪಯೋಗಿ ಇಲಾಖೆ ಹಾಗೂ ಪಾಲಿಕೆಯ ಅಧಿಕಾ-ರಿಗಳಿಗೆ ಸಚಿವ ಸತೀಶ್ ಜಾರಕಿಹೊಳಿ ನಿರ್ದೇಶನ ನೀಡಿದರು. ವಸತಿ, ಸಾರಿಗೆ ಹಾಗೂ ಊಟೋಪಹಾರ ವ್ಯವಸ್ಥೆ ಸೇ-ರಿದಂತೆ ಸುಗಮ ಅಧಿವೇಶನಕ್ಕಾಗಿ ಹತ್ತು ಸಮಿತಿಗಳನ್ನು ರಚಿಸಲಾಗಿದೆ. ಕಳೆದ ಬಾರಿಯಂತೆ ವಿವಿಧ ಸ್ಥಳಗಳಲ್ಲಿ ಊಟದ ವ್ಯವಸ್ಥೆಯನ್ನು ಮಾಡಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಹೇಳಿದರು.

ಹೈಸ್ಪೀಡ್ ಸಾಮರ್ಥ್ಯದ ಅಂತರ್ಜಾಲ ಸಂಪರ್ಕ; ಕಂಪ್ಯೂಟರ್, ಲೇಖನ ಸಾಮಗ್ರಿಗಳು ಸೇರಿದಂತೆ ಎಲ್ಲ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ.

ಇದಲ್ಲದೇ ಪ್ರತಿವರ್ಷದಂತೆ ಅಧಿವೇಷನದಲ್ಲಿ ಭಾಗವಹಿಸುವ ಅಧಿಕಾರಿಗಳು, ಸಿಬ್ಬಂದಿ ಮತ್ತು ಕಲಾಪ ವೀಕ್ಷಣೆಗೆ ಆಗಮಿಸುವ ಸಾರ್ವಜನಿಕರಿಗೆ ಪಾಸ್ ವ್ಯವಸ್ಥೆ ಮಾಡಲಾಗುತ್ತಿದೆ.

ಸುವರ್ಣ ಸೌಧದ ಮುಖ್ಯ ಪ್ರವೇಶ ದ್ವಾರದಿಂದ ಒಳಗಡೆ ಆವರಣದವರೆಗೆ ಸಾರ್ವಜನಿಕರಿಗೆ ಕರೆದೊಯ್ಯಲು ಉಚಿತ ಬಸ್ ವ್ಯವಸ್ಥೆ ಕೂಡ ಈ ಬಾರಿ ಕಲ್ಪಿಸಲು ನಿರ್ಧರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ, ಅಂ-ದಾಜು 6 ಸಾವಿರ ಜನ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸುವ ಮೂಲಕ ಪ್ರತಿವರ್ಷದಂತೆ ಬಿಗಿ ಭದ್ರತೆ ಕಲ್ಪಿಸಲಾಗುವುದು ಎಂದು ವಿವರಿಸಿದರು.

ಸುವರ್ಣಸೌಧದ ಸುತ್ತಮುತ್ತಲಿನ ಪ್ರತಿಭಟನಾ ಸ್ಥಳಗಳಲ್ಲೂ ಅಗತ್ಯ ಬಂದೋಬಸ್ತ್ ಮಾಡಲಾಗುವುದು. ಇದಲ್ಲದೇ ಸಾರಿಗೆ ನಿರ್ವಹಣೆಗೂ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಅಧಿವೇಶನ ಬಂದೋಬಸ್ತಿಗೆ ಆಗಮಿಸುವ ಐದಾರು ಸಾವಿರ ಪೊಲೀಸ್ ಹಾಗೂ ಕೆ.ಎಸ್.ಆರ್.ಪಿ. ಸಿಬ್ಬಂದಿಗೆ ಅಗತ್ಯ ವಸತಿ ಮತ್ತು ಊಟೋಪಹಾರದ ವ್ಯವಸ್ಥೆ ಮಾಡಲಾಗುವುದು ಎಂದು ಬೆಳಗಾವಿ ಉಪ ಪೊಲೀಸ್ ಆಯುಕ್ತ ರೋಹನ್ ಜಗದೀಶ್ ವಿವರಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ, ಪಾಲಿಕೆ ಆಯುಕ್ತೆ ಶುಭಾ, ಜಿಲ್ಲಾ ಪಂಚಾಯತಿ ಮುಖ್ಯ ಯೋಜನಾ ನಿರ್ದೇಶಕ ಗಂಗಾಧರ ದಿವಟರ, ಕಾಡಾ ಆಡಳಿತಾಧಿಕಾರಿ ಸತೀಶಕುಮಾರ್, ಲೊಕೋಪಯೋಗಿ ಇಲಾಖೆ ಅಭಿಯಂತರ ಸೊಬರದ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಲ್ಲಿಕಾರ್ಜುನ ಕಲಾದಗಿ, ಆಹಾರ ಇಲಾಖೆಯ ಉಪ ನಿರ್ದೇಶಕ ಮಲ್ಲಿಕಾರ್ಜುನ ನಾಯಕ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಜ-ರಿದ್ದರು.

## ಸುಳ್ಳು ಆರೋಪಗಳನ್ನು ಮೆಟ್ಟಿನಿಂತು ದಿಗ್ವಿಜಯ ಸಾಧಿಸಿದ್ದೇವೆ : ಮುಖ್ಯಮಂತ್ರಿ



**ಬೆಂಗಳೂರು** : "ಇದು ಕಾಂಗ್ರೆಸ್ ಪಕ್ಷದ ಸತ್ಯ ಮತ್ತು ಬಿಜೆಪಿ-ಜೆಡಿಸ್ ಪಕ್ಷಗಳ ಸುಳ್ಳುಗಳ ನಡುವಿನ ಚುನಾವಣೆಯಾಗಿತ್ತು. ಸತ್ಯ ಗೆದ್ದಿದೆ. ವಿರೋಧ ಪಕ್ಷಗಳ ನಿರಂತರ ಅಪಪ್ರಚಾರ, ಸುಳ್ಳು ಆರೋಪಗಳನ್ನು ಮೆಟ್ಟಿನಿಂತು ನಾವು ಸಾಧಿಸಿರುವ ಈ ಗೆಲುವು ದಿಗ್ವಿಜಯವಾಗಿ ಕಾಣುತ್ತಿದೆ" ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಶನಿವಾರ ಗೃಹ ಕಚೇರಿ ಕೃಷ್ಣಾದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಜಯಭೇರಿ ಬಾರಿಸಿದ್ದಾರೆ. ಇದು ರಾಜ್ಯ ಸರಕಾರದ ಸಾಧನೆ, ಕಾಂಗ್ರೆಸ್ ಪಕ್ಷದ ಸಿದ್ಧಾಂತ ಮತ್ತು ನಮ್ಮ ಕಾರ್ಯಕರ್ತರ ಅವಿರತ ಶ್ರಮದ ಗೆಲುವು ಎಂದು ಬಣ್ಣಿಸಿದರು.

ಈ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಿಗೆ ಮತನೀಡಿ, ಆಶೀರ್ವದಿಸಿದ ಶಿಗ್ಗಾಂವಿ, ಸಂಡೂರು ಹಾಗೂ ಚನ್ನಪಟ್ಟಣದ ಮತದಾರರಿಗೆ ನನ್ನ ಅನಂತ ಧನ್ಯವಾದಗಳು. ವಿಧಾನಸಭೆಗೆ ಪ್ರವೇಶಿಸಿರುವ ನಮ್ಮ ಅಭ್ಯರ್ಥಿಗಳಾದ ಯಾಸೀರ್ ಅಹ್ಮದ್ ಖಾನ್ ಪಠಾಣ್, ಅನ್ನಪೂರ್ಣ ತುಕಾರಾಮ್ ಹಾಗೂ ಸಿ.ಪಿ.ಯೋಗೇಶ್ವರ್‌ಗೆ ಅಭಿನಂದನೆಗಳು ಎಂದು ಮುಖ್ಯಮಂತ್ರಿ ಹೇಳಿದರು.

ಈ ಗೆಲುವು ನಮ್ಮ ಸರಕಾರದ ಮೇಲಿನ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದೆ. ನಮ್ಮ ಸರಕಾರದ ಸಾಧನೆಗಳನ್ನು ಜನ ಬೆಂಬಲಿಸುತ್ತಲೇ ಬಂದಿದ್ದಾರೆ. ನಾನು ದಂತಗೋಪುರದಲ್ಲಿ ಕೂತವನಲ್ಲ, ನಿರಂತರವಾಗಿ ಜನರ ಜೊತೆ ಒಡನಾಟ ಇಟ್ಟುಕೊಂಡವನು, ಗ್ಯಾರಂಟಿ ಯೋಜನಗಳ ಫಲಾನುಭವಿಗಳು ಖುಷಿಯಾಗಿದ್ದಾರೆ ಎಂದು ಅವರು ತಿಳಿಸಿದರು.

ಬಿಜೆಪಿ ಮತ್ತು ಜೆಡಿಎಸ್ ನಾಯಕರು ಮಾಧ್ಯಮಗಳ ಮೂಲಕ ಗ್ಯಾರಂಟಿ ಯೋಜನೆಗಳ ಬಗ್ಗೆ ಅಪಪ್ರಚಾರ ಮಾಡುತ್ತಿದ್ದರು. ಸ್ವತಃ ಪ್ರಧಾನಿ ಮೋದಿ ನಮ್ಮ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಬಗ್ಗೆ ಸುಳ್ಳು ಹೇಳಿದರು. ಮಹಾರಾಷ್ಟ್ರದಲ್ಲಿ ಸುಳ್ಳು ಜಾಹೀರಾತು ನೀಡಿದ್ದರು. ಇದಕ್ಕೆಲ್ಲ ಜನ ಉತ್ತರ ಕೊಟ್ಟಿದ್ದಾರೆ ಎಂದು ಮುಖ್ಯಮಂತ್ರಿ ಹೇಳಿದರು. ಈ ಬಾರಿ ನಾನು ಮುಖ್ಯಮಂತ್ರಿಯಾದ ನಂತರ ನನ್ನ ಮತ್ತು ನಮ್ಮ ಸರಕಾರದ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಾ ನನ್ನ ಚಾರಿತ್ರ್ಯ ಹನನ ಮಾಡುವ ಪ್ರಯತ್ನವನ್ನು ಬಿಜೆಪಿ ಮತ್ತು ಜೆಡಿಎಸ್ ನಾಯಕರು ಮಾಡುತ್ತಾ ಬಂದಿದ್ದಾರೆ.

(ಕೊನೆಯ ಪುಟಕ್ಕೆ)

## ಬ್ರಹ್ಮನ ಪ್ರಪಂಚಕ್ಕಿಂತ ಕವಿಯ ಕವನ ಶ್ರೇಷ್ಠ ; ಡಾ. ತೋಂಟದ ಸಿದ್ದರಾಮ ಶ್ರೀಗಳು



**ಬೆಳಗಾವಿ;** ಬ್ರಹ್ಮನ ನಿರ್ಮಾಣದ ಪ್ರಪಂಚಕ್ಕಿಂತ ಕವಿಯ ನಿರ್ಮಾಣದ ಕವನ ಅತ್ಯಂತ ಶ್ರೇಷ್ಠವಾಗಿರುತ್ತದೆ ಎಂದು ಗದುಗಿನ ತೋಂಟದಾರ್ಯ ಮಠದ ಜಗದ್ಗುರು ಡಾ.ಸಿದ್ದರಾಮ ಶ್ರೀಗಳು ನುಡಿದರು.

ಅವರು ಬೆಳಗಾವಿಯಲ್ಲಿ ಡಾ ಶಿವಾನಂದ ಮೂಲಿಮನಿ ಅವರ "ಮಿಂಚು" ಕವನ ಸಂಕಲನವನ್ನು ಬಿಡುಗಡೆಗೊಳಿಸಿ ಮಾತನಾಡುತ್ತಿದ್ದರು. ಸೀಮೆ ಇಲ್ಲದ ಪ್ರಪಂಚ ಎಂದರೆ ಅದು ಕಾವ್ಯ ಪ್ರಪಂಚ ಅದು ಅಪಾರವಾದದ್ದು ತನಗೆ ಬೇಕಾದಂತೆ ಕಾವ್ಯ ಸೃಷ್ಟಿ ಮಾಡುವ ಸ್ವಾತಂತ್ರ್ಯ ಕವಿಗಳಿಗೆ ಇದೆ ಡಾ.ಶಿವಾನಂದ ಮೂಲಿಮನಿಯವರು ಹೃದಯದ ಭಾವನೆಗಳನ್ನು ಮಿಂಚುಗಳ ಮೂಲಕ ಬೆಳಕಾಗಿಸಿದವರು, ಹೃದಯದ ಭಾವನೆಗಳಿಗೆ ಅಭಿವ್ಯಕ್ತಿ ನೀಡಿ ಕವನಗಳನ್ನಾಗಿಸಿದವರು.

ಕವಿ ಬ್ರಹ್ಮನಿದ್ದಂತೆ ಬ್ರಹ್ಮನಿಗಿಂತ ಕವಿ ಶ್ರೇಷ್ಠ ಎಂದವರು ಹೇಳಿದರು.

ಭೌತಿಕ ಪ್ರಪಂಚದಲ್ಲಿ ಆರು ರಸಗಳಿದ್ದರೆ ಕವಿಯ ಪ್ರಪಂಚದಲ್ಲಿ ನವರಸಗಳಿವೆ. ಇದರಿಂದ ಕಾವ್ಯ ಪ್ರಪಂಚ ಸಮೃದ್ಧಗೊಂಡಿದೆ ಅದಕ್ಕೆಂದೆ ಕಾವ್ಯ ಪ್ರಪಂಚಕ್ಕೆ ಮಹತ್ವ ಕಾವ್ಯ ದುಃಖದಲ್ಲೂ ಕೂಡ ಓದುವ ಸುಖವನ್ನು ಕೊಡುವಂತಹದ್ದು ಅದಕ್ಕೆಂದೇ ಹೇಳುತ್ತಾರೆ ರವಿ ಕಾಣದನ್ನು ಕವಿ ಕಾಣುತ್ತಾನೆಂದು ಕವನಗಳ ಮೂಲಕ ಆನಂದ ಹೊಂದಬಹುದು ಮಾರ್ಗದರ್ಶನ ಮಾಡುವ ಕಾರ್ಯವನ್ನು ಕವನಗಳು ಮಾಡುತ್ತವೆ 100 ಮೂರ್ಖ ಮಕ್ಕಳಿಗಿಂತ ಒಬ್ಬ ಗುಣವಂತ ಮಗ ಸಾಕು ಎನ್ನುವ ನಾಣ್ನುಡಿಯಂತೆ ನೂರು ಕೃತಿಗಳಿಗಿಂತ ಒಂದು ಅತ್ಯುತ್ತಮ ಕೃತಿ ಮುಖ್ಯ, ಜನಪರ ಕಾಳಜಿಗಾಗಿ ಕಾವ್ಯ ರಚನೆಯಾಗಿದೆ, ಕೇವಲ ಕವಿಯಾಗಲೆಂದು ಬರೆದ ಕೃತಿ ಇದಲ್ಲ ತಮ್ಮ ಭಾವನೆಗಳನ್ನು ಅಭಿವ್ಯಕ್ತಗೊಳಿಸಿ ಶಬ್ದಗಳ ರೂಪದಲ್ಲಿ ಕವನ ರಚನೆ ಸುಲಭವಲ್ಲ .ದುಃಖದಲ್ಲೂ ಆನಂದ ಭಾಷ್ಪ ಬರುವಂಥ ಕವನಗಳ ರಚನೆ ಇದಾಗಿದೆ . ಮೂಲಿಮನಿಯವರ ಕೃತಿಗಳು ಸೀಮಿತ ಅದರಲ್ಲೂ "ಮಿಂಚು" ಬೆಳಗುವ ಚಂದ್ರನಂತೆ ಇದೆ ಎಂದು ಬಣ್ಣಿಸಿದರು.

ಕಾರ್ಯಕ್ರಮದ ಸಮ್ಮುಖದಲ್ಲಿದ್ದ ಬೆಳಗಾವಿಯ ಕಾರಂಜಿ ಮಠದ ಶ್ರೀ.ಗುರುಸಿದ್ಧ ಮಹಾಸ್ವಾಮೀಜಿಯವರು ಆಶೀರ್ವಚನ ನೀಡಿ ಮಿಂಚು ಕವನ ಸಂಕಲನದಲ್ಲಿ ಹಿಂದಿನ ಸಾಮಾಜಿಕ ರೀತಿ ನೀತಿ ಶಿಕ್ಷಕರ ರೀತಿ ನೀತಿ ಮತ್ತು ಇಂದಿನವರ ರೀತಿ ನೀತಿಗಳ ಕುರಿತು ಸಾಮಾಜಿಕ ಕಾಳಜಿ ವ್ಯಕ್ತವಾಗಿದೆ ಎಂದರು.

ಕೃತಿ ಪರಿಚಯ ಮಾಡಿದ ನಿವೃತ್ತ ಪ್ರಾಚಾರ್ಯ ಡಾ. ಸಿ.ಕೆ.ನಾಮಲಗಿ ಮತ್ತು ಪ್ರೊಫೆಸರ್ ಕೆ.ಎಸ್. ಕೌಜಲಗಿ ಅವರುಗಳು ಮಾತನಾಡಿ ಹಿಂದಿನ ಕಾಲದ ಶಿಕ್ಷಕರು ರಾಜ-ಕಾರಣಿಗಳನ್ನು ಒಲೈಸುವ ಕಾರ್ಯ ಮಾಡಲಿಲ್ಲ , ಅಧಿಕಾರಿಗಳ ಹಿಂದೆ ತಿರುಗಲಿಲ್ಲ, ನಿಸ್ವಾಥ-ರ್ ಸೇವೆಯನ್ನು ತಮ್ಮ ಪಾಡಿಗೆ ತಾವು ಮಾಡಿ ಗೌರವಕ್ಕೆ ಪಾತ್ರರಾದರು. ಇಂದು ಅದು ಆಗುತ್ತಿಲ್ಲ ಅತ್ಯಂತ ಕೆಟ್ಟ ರಾಜಕಾರಣ ನಡೆಯುತ್ತಿದೆ ಎಂದರು.

ಕೃತಿಯಲ್ಲಿನ ಕವನಗಳ ವಿಮರ್ಶೆಯನ್ನು ಮಾಡಿದ ಅವರು ಇತ್ತೀಚಿನ ದಿನಗಳಲ್ಲಿನ ಅತ್ಯುತ್ತಮ ಕೃತಿ ಇದಾಗಿದೆ ಎಂದು ಬಣ್ಣಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿವೃತ್ತ ಪ್ರಾಚಾರ್ಯ ಎಂ.ಆರ್. ಉಳ್ಳೇಗಡ್ಡಿ ವಹಿಸಿದ್ದರು ಇದೇ ಸಂದರ್ಭದಲ್ಲಿ ಇಬ್ಬರೂ ಶ್ರೀಗಳು ಕೃತಿಯ ಲೇಖಕ ಶಿವಾನಂದ ಮೂಲಿಮನಿ ದಂಪತಿಗಳನ್ನು ಸತ್ಕರಿಸಿದರು. ಶ್ರೀಮತಿ ನೈನಾ ಗಿರಿಗೌಡರ ವಚನ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮವನ್ನು ಪ್ರೊ. ಎ.ಕೆ. ಪಾಟೀಲ್ ನಿರ್ವಹಿಸಿದರು, ಶಿವಾನಂದ ಮೂಲಿಮನಿ ಸ್ವಾಗತಿಸಿದರು, ಮೋಹನ ಗುಂಡ್ಲೂರ್ ಅತಿಥಿಗಳ ಪರಿಚಯ ಮಾಡಿದರು.

### ಸರ್ವರ ಒಗ್ಗಟ್ಟಿನಿಂದಲೇ ಮೂರು ಕ್ಷೇತ್ರಗಳಲ್ಲಿ ಗೆಲುವು: ಸಚಿವ ಸತೀಶ್ ಜಾರಕಿಹೊಳಿ

## ಶಿಗ್ಗಾಂವಿ ಅಭ್ಯರ್ಥಿ ಗೆಲ್ಲಿಸಿದ್ದರಿಂದ ಡಬಲ್ ಪ್ರಮೋಶನ್- ಅಹಿಂದ ಮತಗಳನ್ನು ಒಗ್ಗೂಡಿಸಿದ್ದರಿಂದ ಜಯ

**ಬೆಳಗಾವಿ:** ಕಾಂಗ್ರೆಸ್ ಸರ್ಕಾರದ ಅಭಿವೃದ್ಧಿ, ಗ್ಯಾರಂಟಿ ಯೋಜನೆಗಳು ಸೇರಿದಂತೆ ನಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಲೇಬೇಕೆಂಬ ಕಾರ್ಯಕರ್ತರ ಛಲದಿಂದಾಗಿ ಮೂರು ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರು ಹೇಳಿದರು.

ರಾಜ್ಯದಲ್ಲಿ ನಡೆದ ಮೂರು ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಸಾಧಿಸಿದ ಹಿನ್ನೆಲೆಯಲ್ಲಿ ನಗರದ ಕಾಂಗ್ರೆಸ್ ಕಚೇರಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮೂರು ಕ್ಷೇತ್ರಗಳ ಗೆಲುವಿಗಾಗಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಸೇರಿದಂತೆ ಸಚಿವರು, ಶಾಸಕರು, ಕಾರ್ಯಕರ್ತರು ಒಗ್ಗಟ್ಟಾಗಿದ್ದರಿಂದ ನಮ್ಮ ಅಭ್ಯರ್ಥಿಗಳಿಗೆ ಗೆಲುವಾಗಿದೆ ಎಂದು ತಿಳಿಸಿದರು.

ಶಿಗ್ಗಾಂವಿ, ಚನ್ನಪಟ್ಟಣದಲ್ಲಿ ನಾವು ಗೆಲ್ಲಲು ಆಗಲ್ಲ. ಸಂಡೂರು ಕ್ಷೇತ್ರದಲ್ಲಿ ಮಾತ್ರ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಲು ಸಾಧ್ಯವಿದೆ ಎಂದು ಸರ್ವೇಗಳಲ್ಲಿ, ಮುಖಂಡರ ಭಾವನೆ ಆಗಿ-ತ್ತು. ಶಿಗ್ಗಾಂವಿಯಲ್ಲಿ ಐದು ಬಾರಿ ಸೋಲಲು ನಾಯಕತ್ವದ ಕೊರತೆ ಇತ್ತು. ಆದರೆ ಸಚಿವ ಶಿವಾನಂದ ಪಾಟೀಲ್, ನಾವು ಸೇರಿದಂತೆ ಅನೇಕರು ಹಿಂದೂ-ಮುಸ್ಲಿಂ ಭಾವನೆಯನ್ನು ಹೊಗಲಾಡಿಸಿ, ಅಹಿಂದ ಮತಗಳನ್ನು ಒಗ್ಗೂಡಿಸಿದ್ದರಿಂದ ಶಿಗ್ಗಾಂವಿ ಕಾಂಗ್ರೆಸ್



ಅಭ್ಯರ್ಥಿ ಗೆಲುವಿಗೆ ಅನುಕೂಲವಾಯಿತು ಎಂದರು.

ಪ್ರತಿ ಚುನಾವಣೆಯಲ್ಲಿ ಧಾರ್ಮಿಕ ಭಾವನೆಗಳನ್ನು ಇಟ್ಟುಕೊಂಡು ಬಿಜೆಪಿಯವರು ಚುನಾವಣೆ ಗೆಲ್ಲುತ್ತಿದ್ದರು.

ಆದರೆ ಈ ಬಾರಿ ನಮ್ಮ ಕಾರ್ಯಕರ್ತರು ಅದಕ್ಕೆ ಅವಕಾಶ ನೀಡಲಿಲ್ಲ. ಹೀಗಾಗಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಗೆಲುವಾಗಿದೆ. ಚಿಕ್ಕೋಡಿಯಲ್ಲಿ ಗೆದ್ದ ಹಾಗೆ ಶಿಗ್ಗಾಂವಿಯನ್ನು ಗೆದ್ದಿದ್ದೇವೆ. ನಮ್ಮ ಚುನಾವಣೆ ಮಾಡಿದ ಹಾಗೇ ಮತ್ತೊಬ್ಬರ ಚುನಾವಣೆ ಮಾಡಬೇಕು. ಅಂದಾಗ ಮಾತ್ರ ಗೆಲುವು ಸಾಧ್ಯವಿದೆ. ಶಿಗ್ಗಾಂವಿ ಕ್ಷೇತ್ರದ ಉಸ್ತುವಾರಿಯಾಗಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಿದ್ದರಿಂದ ನನಗೂ ಡಬಲ್ ಪ್ರಮೋಶನ್ ಸಿಕ್ಕಿದೆ ಎಂದು ಹೇಳಿದರು.

ಇವಿಎಂನಲ್ಲಿ ಅಡ್ಜಸ್ಟ್‌ಮೆಂಟ್ ಮಾಡ್ತಿದ್ದಾರೆ: ಮಹಾರಾಷ್ಟ್ರದಲ್ಲಿ ಮಹಾ ವಿಕಾಸ್ ಅಘಾಡಿ ಒಕ್ಕೂಟಕ್ಕೆ ಸೋಲಾದ ಬೆನ್ನಲ್ಲೇ ಇವಿಎಂ ಮೇಲೆ ಸಚಿವ ಸತೀಶ್ ಜಾರಕಿಹೊಳಿ ಸಂಶಯ ವ್ಯಕ್ತಪಡಿಸಿದರು.

ಇವಿಎಂ ಮಷೀನ್ ಇರುವವರೆಗೂ ಈ ರೀತಿ ಎಲ್ಲಾ ಆಗುತ್ತದೆ. ಇವಿಎಂ ಬಗ್ಗೆ ಸಾಕಷ್ಟು ಅನುಮಾನ ಇದೆ. ಸಾಕಷ್ಟು ಕಡೆಗಳಲ್ಲಿ ಇವಿಎಂ ಬಗ್ಗೆ ಚರ್ಚೆ ಆಗುತ್ತಿದೆ. ಒಂದು ಕಡೆ ಕೊಡ್ತಾರೆ, ಇನ್ನೊಂದು ಕಡೆ ಕಸಿದುಕೊಳ್ತಾರೆ. ಜಮ್ಮು ನಮಗೆ ಕೊಟ್ಟರೂ, ಹರಿಯಾಣವನ್ನು ಬಿಜೆಪಿಯವರು ತೆಗೆದುಕೊಂಡರು. ಈ ರೀತಿ ಗೀವ್ & ಟೇಕ್ ಪಾಲಿಸಿ ಮಾಡ್ತಿದ್ದಾರೆ.

ಅವರಿಗೆ ಬೇಕಾದದ್ದನ್ನು ತೆಗೆದುಕೊಳ್ತಾರೆ, ಬೇಡದ್ದನ್ನ ಬಿಡ್ತಾರೆ. ಇವಿಎಂನಲ್ಲೂ ಅಡ್ಜಸ್ಟ್ಮೆಂಟ್ ಇದೆ ಎಂದು ಅವರು ಗಂಭೀರ ಆರೋಪ ಮಾಡಿದರು.

ಈ ಸಂದರ್ಭದಲ್ಲಿ ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಗ್ರಾಮೀಣ ಜಿಲ್ಲಾಧ್ಯಕ್ಷ ವಿನಯ ನಾವಲಗಟ್ಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಎಂ.ಜೆ, ಮುಖಂಡರಾದ ಸಿದ್ದಿಕ ಅಂಕಲಗಿ, ಸೈಯದ್ ಮನ್ಸೂರ್, ರಾಜಾ ಸಲೀಂ, ಅರುಣ ಕಟಾಂಬಳೆ ಇದ್ದರು.

### ತಾಲೂಕು ಮಟ್ಟದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ

## ಸಾರ್ವಜನಿಕ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಿ : ಅಶೋಕ ದುಡಗುಂಟಿ ಸೂಚನೆ

**ಯರಗಟ್ಟಿ :** ತಾಲೂಕು ಮಟ್ಟದ ಅಧಿಕಾರಿಗಳು ಸಮನ್ವಯದೊಂದಿಗೆ ಕಾರ್ಯನಿರ್ವಹಿಸುವುದರ ಮೂಲಕ ಸಾರ್ವಜನಿಕರ ಸಮಸ್ಯೆಗಳ ತ್ವ-ರಿತ ಪರಿಹಾಕ್ಕೆ ಮುಂದಾಗಬೇಕು. ತಾಲೂಕುಗಳ ಅಭಿವೃದ್ಧಿಯಲ್ಲಿ ಕಾರ್ಯನಿರ್ವಾಹಕ ಅಧಿಕಾ-ರಿಗಳ ಪಾತ್ರ ಮಹತ್ವದಾಗಿದ್ದು, ತಮ್ಮ ಜವಾಬ್ದಾರಿ ಅರಿತು ಸಮರ್ಪಕವಾಗಿ ಕೆಲಸ ಮಾಡಬೇಕು ಎಂದು ಯರಗಟ್ಟಿ ತಾಲೂಕಾ ಉಸ್ತುವಾರಿ ಅಧಿಕಾರಿ ಅಶೋಕ ದುಡಗುಂಟಿ ಅವರು ತಿಳಿಸಿದರು.

ಪಟ್ಟಣದ ಸರಕಾರಿ ಶಾಲಾ ಸಭಾಂಗಣದಲ್ಲಿ ಜರುಗಿದ ತಾಲೂಕು ಮಟ್ಟದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಾಲೂಕು ಮಟ್ಟದ ಅಧಿಕಾರಿಗಳು ತಮ್ಮ ತಾಲೂಕು ವ್ಯಾಪ್ತಿಯಲ್ಲಿ ನಿಯಮಿತವಾಗಿ ಸಂಚರಿಸಿ ತಮ್ಮ ಇಲಾಖೆಗಳಿಂದ ಜರುಗುತ್ತಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿ ಕಾಮಗಾರಿಗಳನ್ನು ಕಾಲಮಿತಿಯೊಳಗಾಗಿ ಪೂರ್ಣಗೊಳಿಸುವಂತೆ ಕ್ರಮ ವಹಿಸುವದರ ಜೊತೆಗೆ ತಾಲೂಕುಗಳ ಅಭಿವೃದ್ಧಿಗೆ ಮುಂದಾಗುಂತೆ ತಿಳಿಸಿದರು.

ಈಗಾಗಲೇ ಪ್ರತಿ ತಾಲೂಕುಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಿಸಿಲಾಗಿದ್ದು, ಆಯಾ ನೋಡಲ್ ಅಧಿಕಾರಿಗಳು ಪ್ರತಿ ಮಾಹೆ ತಪ್ಪದೇ ತಾಲೂಕುಗಳಿಗೆ ಭೇಟಿ ನೀಡಿ ನಿಯಮಿತವಾಗಿ ಸಭೆ ಜರುಗಿಸಿ ವರದಿ ಸಲ್ಲಿಸಬೇಕು. ಮುಖ್ಯಮಂತ್ರಿಗಳ ಜನಸ್ಪಂದನ ಕಾರ್ಯಕ್ರಮದಲ್ಲಿ ಸ್ವೀಕೃತವಾಗುವ ದೂರುಗಳನ್ನು ಆಯಾ ಇಲಾಖಾ ಅಧಿಕಾರಿಗಳು ಕೂಡಲೆ ಸ್ಪಂದಿಸಿ ಪರಿಹಾರ ಕಲ್ಪಿಸಬೇಕು.

ವಿವಿಧ ಇಲಾಖೆಗಳ ವಸತಿ ನಿಲಯಗಳಲ್ಲಿನ ವಿಧ್ಯಾರ್ಥಿಗಳಿಗೆ ಪಾವತಿಸಬೇಕಾದಂತಹ ವಿಧ್ಯಾರ್ಥಿ ವೇತನ ಪಾವತಿಗೆ ಕೂಡಲೆ ಕ್ರಮವಹಿಸಬೇಕು. ವಿಧ್ಯಾರ್ಥಿಗಳ ಆಧಾರ ಸೀಡಿಂಗ್ ಪ್ರಕ್ರಿಯೆ ಕೂಡಲೇ ಪೂರ್ಣಗೊಳಿಸಿ. ಹದಿನೈದು ದಿನದೊಳಗಾಗಿ ಬಾಕಿ ಇರುವ ವಿದ್ಯಾರ್ಥಿ ವೇತನ ಪಾವತಿಗೆ ಕ್ರಮ ವಹಿಸಬೇಕು.

ವಸತಿ ನಿಲಯಗಳಲ್ಲಿ ಯಾವುದೇ ಗೊಂದಲಗಳಾಗದಂತೆ ನಿಗಾವಹಿಸಬೇಕು. ತಾಲೂಕಿನ ಎಲ್ಲ ವಸತಿ ನಿಲಯಗಳ ವಾರ್ಡನಗಳ ಸಭೆ ಜರುಗಿಸಿ ಕಾಲಮಿತಿಯೊಳಗಾಗಿ ವಿದ್ಯಾರ್ಥಿಗಳ ಆರೋಗ್ಯದ ಬಗ್ಗೆ ಹಾಗೂ ಕುಡಿಯುವ ನೀರಿನಬಗ್ಗೆ ಗಮನಹರಿಸಬೇಕು ವಸತಿ ನಿಲಯಗಳಲ್ಲಿನ ಸೌಕರ್ಯಗಳ ಕುರಿತು ಸಂಬಂಧಿಸಿದ ನೋಡಲ್ ಅಧಿಕಾರಿಗಳು ನಿಯಮಿತವಾಗಿ ಭೇಟಿ ನೀಡಿ ಪರಿಶೀಲಿಸಬೇಕು.

ತಾಲೂಕು ಕೇಂದ್ರಗಳಲ್ಲಿ ಹೊಸದಾಗಿ ಮಂಜೂರಾಗಿರುವ ವಸತಿ ನಿಲಯಗಳ ಪ್ರಾರಂಭಕ್ಕೆ ಸ್ವಂತ ಕಟ್ಟಡ ಇಲ್ಲದೇ ಇರುವ ಪಕ್ಷದಲ್ಲಿ ಬಾಡಿಗೆ ಕಟ್ಟಡವನ್ನು ಪಡೆದು ಪ್ರಾರಂಭಿಸಲು ಕ್ರಮ ಜರುಗಿಸಬೇಕು. ಈಗಾಗಲೇ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ನಿಲಯಗಳ ಬಾಡಿಗೆಯನ್ನು ಆಯಾ ತಿಂಗಳಿನಲ್ಲಿ ಪಾವತಿಗೆ ಕ್ರಮ ವಹಿಸಬೇಕು. ಎಲ್ಲ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಶುದ್ಧ ಕುಡಿಯುವ ನೀರು ಪೂರೈಕೆ ಆಗಬೇಕು ಈ ಕುರಿತು ಸಂಬಂಧಿಸಿದ ನೋಡಲ್ ಅಧಿಕಾರಿಗಳು ಗಮನ ಹರಿಸಬೇಕು ಎಂದು ಯರಗಟ್ಟಿ ತಾಲೂಕಾ ಉಸ್ತುವಾರಿ ಅಧಿಕಾರಿ ಅಶೋಕ ದುಡಗುಂಟಿ ನಿರ್ದೇಶನ ನೀಡಿದರು.

ಕುಡಿಯುವ ನೀರು ಪರೀಕ್ಷೆಗೆ ನಿರ್ದೇಶನ:

ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಸಬರಾಜು ಮಾಡಲಾಗುತ್ತಿರುವ ಕುಡಿಯುವ ನೀರಿನ



ಪರೀಕ್ಷೆಗಳನ್ನು ನಿಯಮಿತವಾಗಿ ಜರುಗಿಸಬೇಕು. ಕುಡಿಯುವ ನೀರು ಸರಬರಾಜುಗೆ ಸಂಬಂಧಿಸಿದಂತೆ ಈಗಾಗಲೇ ತಾಲೂಕು ಮಟ್ಟದ ಟಾಸ್ಕ ಫೋರ್ಸ ಸಮಿತಿ ರಚಿಸಲಾಗಿದ್ದು, ತಾಲೂಕು ಮಟ್ಟದಲ್ಲಿ ಕೂಡ ಸಮಿತಿಗಳನ್ನು ರಚಿಸಿ ನೀರು ಪರೀಕ್ಷೆ, ತೆಗೆದುಕೊಂಡ ಕ್ರಮಗಳ ಕುರಿತು ಸಮಗ್ರ ವರದಿ ನೀಡಬೇಕು ಎಂದು ಶಿಂಥೆ ಹೇಳಿದರು.

ನೀರು ಪರೀಕ್ಷೆ ನಂತರ ನೀರು ಕುಡಿಯಲು ಯೋಗ್ಯವಿಲ್ಲದಿದ್ದರೆ ಅಂತಹ ನೀರಿನ ಮೂಲಗಳ ಹತ್ತಿರ ಕೆಂಪು ಅಕ್ಷರಗಳಲ್ಲಿ ಸೂಚನಾ ಫಲಕವನ್ನು ಅಳವಡಿಸಬೇಕು. ಈ ಕಾರ್ಯದಲ್ಲಿ ಆರೋಗ್ಯ ಇಲಾಖೆ, ತಾಲೂಕು ಪಂಚಾಯ ಹಾಗೂ ಗ್ರಾಮ ಪಂಚಾಯತಗಳು ಸಮನ್ವಯದೊಂದಿಗೆ ಕಾರ್ಯನಿರ್ವಹಿಸಬೇಕು.

ಮೇಲ್ಮಟ್ಟದ ಜಲಸಂಗ್ರಹಾಗಾರಗಳ ಸ್ವಚ್ಛತೆಗೆ ಹೆಚ್ಚಿನ ಗಮನ ಹರಿಸಬೇಕು. ನೀರಿನ ಮೂಲಗಳ ಮೂಲಕ ನೇರವಾಗಿ ಪೂರೈಕೆ ಆಗುವ ನೀರನ್ನು ಕಡ್ಡಾಯವಾಗಿ ಪರೀಕ್ಷೆಗೊಳಪಡಿಸಿ ಕುಡಿಯಲು ಯೋಗ್ಯವಿದ್ದಲ್ಲಿ ಮಾತ್ರ ಅಂತಹ ನೀರನ್ನು ಪೂರೈಸಬೇಕು ಕಲುಷಿತ ನೀರು ಪೂರೈಕೆಗೆ ಸಂಬಂಧಿಸಿದಂತೆ ಯಾವುದೇ ದೂರುಗಳು ಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವದು ಎಂದು ಎಚ್ಚರಿಕೆ ನೀಡಿದರು.

ಅಂಗನವಾಡಿ ಕೇಂದ್ರಗಳ ಸ್ಥಳಾಂತರಕ್ಕೆ ಸೂಚನೆ:

ಶಿಥಿಲಾವಸ್ಥೆಯಲ್ಲಿರುವಂತಹ ಅಂಗನವಾಡಿ ಕಟ್ಟಡಗಳಲ್ಲಿ ಯಾವುದೇ ಕಾರಣಕ್ಕೂ ತರಗತಿಗಳನ್ನು ನಡೆಸಬಾರದು. ಅಂಗನವಾಡಿಗಳು ಖಾಸಗಿ ಒಡೆತನದ ಕಟ್ಟಡಗಳಲ್ಲಿ ನಡೆಯುತ್ತಿದ್ದರೆ ಅಂತಹ ಅಂಗನವಾಡಿ ಕೇಂದ್ರಗಳನ್ನು ಸರಕಾರಿ ಕಟ್ಟಡಗಳಿಗೆ ಸ್ಥಳಾಂತರಿಸಬೇಕು ಎಂದು ಅಶೋಕ ದುಡಗುಂಟಿ ಅವರು ಅಧಿಕಾರಿಗಳಿಗೆ ತಿಳಿಸಿದರು.

ಸರಕಾರಿ ಶಾಲೆಯಲ್ಲಿ ಸುಸಜ್ಜಿತ ಕೋಣೆ ಹಾಗೂ ಮೂಲಸೌಕರ್ಯಗಳನ್ನು ಪರಿಶೀಲಿಸಿ ಸ್ಥಳಾಂತರಿಸಲು ಪ್ರಥಮಾದ್ಯತೆ ನೀಡಬೇಕು. ಯಾವುದೇ ಶಾಲೆಗಳಲ್ಲಿ ಸ್ಥಳಾವಕಾಶ ಇದ್ದರೂ ಸಹ ಅಂಗನವಾಡಿ ಕೇಂದ್ರ ಪ್ರಾರಂಭಕ್ಕೆ ಸ್ಥಳಾವಕಾಶ ನೀಡಲು ನಿರಾಕರಿಸುವ ಮುಖ್ಯೋಪಾಧ್ಯಯರ ವಿರುದ್ಧ ಕ್ರಮ ಜರುಗಿಸಲಾಗುವದು ಎಂದು ಎಚ್ಚರಿಕೆ ನೀಡಿದರು.

ಪ್ರತಿ ತಿಂಗಳ ಮೂರನೇ ಶನಿವಾರದಂದು ಎಲ್ಲ ತಾಲೂಕು ಮಟ್ಟದಲ್ಲಿ ಸಭೆ ಜರುಗಿಸಿ ನೋಡೆಲ್ಲ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಿಗೆ ಭೆಟಿ ನೀಡಿ ಪಾಲಕರ ಸಭೆಯ ಕುರಿತು ವರದಿ ಸಲ್ಲಿಸಬೇಕು. ತಾಲೂಕಿನ ಎಲ್ಲ ಅಂಗನವಾಡಿ ಕೇಂದ್ರಗಳ ಸುತ್ತಮುತ್ತಲಿನ ಸ್ವಚ್ಛತೆಗೆ ಹೆಚ್ಚಿನ ಒತ್ತು ನೀಡಬೇಕು ಅಲ್ಲದೇ ಕೇಂದ್ರದ ಹತ್ತಿರ ಸಿ.ಸಿ. ರಸ್ತೆ ಹಾಗೂ ಚರಂಡಿಗಳ ನಿರ್ಮಾಣಕ್ಕೆ ಕ್ರಿಯಾ ಯೋಜನೆ ಸಲ್ಲಿಸಲು ಸೂಚಿಸಿದರು.

**ಡೆಂಗ್ಯೂ ನಿಯಂತ್ರಣಕ್ಕೆ ಕ್ರಮ:** ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಡೆಂಗ್ಯೂ ನಿಯಂಯ್ರಣ-ಕ್ಕೆ ಅಗತ್ಯದ ಎಲ್ಲ ಕ್ರಮಗಳನ್ನು ಜರುಗಿಸಬೇಕು. ಈ ನಿಟ್ಟಿನಲ್ಲಿ ಆರೋಗ್ಯ ಇಲಾಖೆ, ತಾಲೂಕು ಪಂಚಾಯತ ಹಾಗೂ ಇತರ ಎಲ್ಲ ಇಲಾಖೆಗಳು ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಬೇಕು. ಡೆಂಗ್ಯೂ ಜ್ವರ ನಿಯಂತ್ರಣಕ್ಕೆ ಸಾರ್ವಜನಿಕರು ಕೈಗೊಳ್ಳಬೇಕಾದ ಮುಂಜಾಗೃತಾ ಕ್ರಮಗಳ ಕು-ರಿತು ಪರಿಣಾಮಕಾರಿಯಾಗಿ ಜಾಗೃತಿ ಮೂಡಿಸಲು ಆರೋಗ್ಯ ಇಲಾಖೆಯ ಜೊತೆಗೆ ತಾಲೂಕು ಪಂಚಾಯತಗಳು ಕ್ರಮ ವಹಿಸಬೇಕು. ಆಯುಷ್ಮಾನ ಮಂದಿರ ಹಾಗೂ ನಮ್ಮ ಕ್ಲಿನಿಕ್ ನಿರ್ಮಾಣಕ್ಕೆ ಬೇಕಾದಂತಹ ನಿವೇಶನವನ್ನು ಆದಷ್ಟು ಶೀಘ್ರವೇ ಗುರುತಿಸಲು ಸೂಚಿಸಿದರು.

**ಶಾಲಾ ಕಟ್ಟಡಗಳ ದುರಸ್ತಿ ಪೂರ್ಣಗೊಳಿಸಲು ಸೂಚನೆ:**

ತಾಲೂಕಿನಲ್ಲಿ ಈಗಾಗಲೇ ಪ್ರಗತಿಯಲ್ಲಿರುವ ಶಾಲಾ ಕಟ್ಟಡಗಳ ನಿರ್ಮಾಣ ಹಾಗೂ ದುರಸ್ತಿ ಕಾರ್ಯಗಳು ಬರುವ ಡಿಸೆಂಬರ್ ಮಾಹೆಯೊಳಗಾಗಿ ಪೂರ್ಣಗೊಳಿಸಲು ಸಂಬಂಧಿಸಿದ ಏಜೆನ್ಸಿಗಳಿಗೆ ಸೂಚನೆ ನೀಡಿದರು ಹಾಗೂ ಶಾಲಾ ಮಕ್ಕಳಿಗೆ ಮೊಟ್ಟೆ ನೀಡುವ ಬಗ್ಗೆ ಚರ್ಚಿಸಲಾಯಿ ವಿದ್ಯಾರ್ಥಿಗಳಿ ಗುಣ್ಣಮಟ್ಟದ ಮೊಟ್ಟೆ ಮತ್ತು ಮಧ್ಯಾಹ್ನ ಬಿಸಿ ಊಟ ನೀಡಲು ಸೂಚಿಸಿದರ.

ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ತಾ.ಪಂ.ಕಾರ್ಯ ನಿರ್ವಾಹಕ ಅಧಿಕಾರಿಗಳು ನಿಯಮಿತವಾಗಿ ಭೆಟಿ ನೀಡಿ ಶೀಘ್ರವೆ ಕಾಮಗಾ-ರಿಗಳು ಪೂರ್ಣಗೊಳ್ಳುವಂತೆ ನಿಗಾವಹಿಸಬೇಕು. ನರೇಗಾ ಯೋಜನೆಯಡಿ ಶಾಲೆಗಳಲ್ಲಿ ಶೌಚಾಲಯ ನಿರ್ಮಾಣಕ್ಕೆ ಕ್ರಮ ಜರುಗಿಸಬೇಕು ಎಂದರು.

ಸಭೆಯಲ್ಲಿ ಯರಗಟ್ಟಿ ತಹಶೀಲ್ದಾರ ಎಮ್. ಎನ್. ಮಠದ ಸವದತ್ತಿ ತಹಶೀಲ್ದಾರ ಮಲ್ಲಿಕಾರ್ಜುನ ಹೆಗ್ಗಣ್ಣವರ, ತಾ.ಪಂ. ಇಓ ಆನಂದ ಬಡಕುಂದ್ರಿ, ಕ್ಷೇತ್ರ ಶಿಕ್ಷಣಾಧಿಕಾರಿ ಮೋಹನ ದಂಡಿನ, ಪ. ಪಂ. ಮುಖ್ಯಾಧಿಕಾರಿ ಡಿ. ಎನ್. ತಹಶೀಲ್ದಾರ, ಪಿಎಸ್ಐ ಎಲ್. ಬಿ. ಮಾಳಿ, ಆರ್‌ಡ್ಲೂಎಸ್ ಎಇಇ ಬಸವರಾಜ ಅಯ್ಯನಗೌಡ್ರ, ಅಕ್ಷರದಾಸೋಹ ಸಹಾಯಕ ನಿರ್ದೇಶಕಿ ಶ್ರೀಮತಿ ಮೈತ್ರಾದೇವಿ ವಸ್ತ್ರದ, ಅರಣ್ಯ ಇಲಾಖೆ ನಿಹಾ ತೋರಗಲ್, ಪಶು ವೈದ್ಯಾಧಿಕಾರಿ ಡಾ. ಎಂ. ವ್ಹಿ. ಪಾಟೀಲ, ಮುಖ್ಯ ವೈದ್ಯಾಧಿಕಾರಿ ಡಾ. ಬಿ. ಎಸ್. ಬಳ್ಳೂರ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಆರ್. ಆರ್. ಕುಲಕರ್ಣಿ, ಬಿಸಿಎಂ ಇಲಾಖೆ ಅಧಿಕಾರಿ ಶ್ರೀಮತಿ ರತ್ನಾ ಕದಂ, ಕೃಷಿ ಅಧಿಕಾರಿ ಶಿವಪ್ರಕಾಶ ಪಾಟೀಲ, ಅಭಕಾರಿ ಇಲಾಖೆ ಅಧಿಕಾರಿ ಜಯರಾಮ ಹೆಗಡೆ ತೋಟಗಾರಿಕೆ ಅಧಿಕಾರಿ ಪ್ರಕಾಶ ಪಾಟೀಲ ಸೇ-ರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಹಾಜ-ರಿದ್ದರು.

# ಸೋಲಿನಿಂದ ಸ್ಫೂರ್ತಿ ಪಡೆದು ಸಾಧನೆ ಮಾಡಲು ಕರೆ



ರಾಮದುರ್ಗ : ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ನಿರಂತರ ಅಧ್ಯಯನ ಮಾಡಲು ಮಾನಸಿಕವಾಗಿ ಸದೃಢರಾಬೇಕು. ಹಿಂದುಳಿದ, ಆರ್ಥಿಕವಾಗಿ ದುರ್ಬಲರಾಗಿರುವ ಗ್ರಾಮೀಣ ಪ್ರದೇಶದ

ವಿದ್ಯಾರ್ಥಿಗಳು ಕೀಳರಿಮೆ ಬಿಟ್ಟು ಸೋಲಿನಿಂದ ಪಾಠ ಕಲತು ಸ್ಪೂರ್ತಿ ಪಡೆದು ತಮ್ಮ ಗುರಿಯ ಕಡೆಗೆ ಗಮನ ಹರಿಸಿ, ಸಾಧನೆ ಮಾಡಬೇಕು ಎಂದು ಗ್ರೇಡ್ 2 ತಹಶೀಲ್ದಾರ್ ಸಿದ್ಧಾರೂಢ ಬನ್ನಿಕೊಪ್ಪ ಹೇಳಿದರು.

ಪಟ್ಟಣದ ವಿದ್ಯಾ ಪ್ರಸಾರಕ ಸಮಿತಿಯ ಸಿ.ಎಸ್. ಬೆಂಬಳಗಿ ಕಲಾ, ಶಾ.ಎಂ.ಆರ್. ಪಾಲರೇಶಾ ವಿಜ್ಞಾನ ಹಾಗೂ ಜಿ.ಎಲ್. ರಾಠಿ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಜರುಗಿದ ಪ್ರಸಕ್ತ ಶೈಕ್ಷಣಿಕ ಸಾಲಿನ ಕ್ರೀಡಾ ಹಾಗೂ ವಿವಿಧ ಸಂಘಗಳ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ಪದವಿ ಶಿಕ್ಷಣದ ಅವಧಿಯಲ್ಲೇ ಯೋಚಿಸುವ ಪರಿಯನ್ನು ಬದಲಿಸಿಕೊಳ್ಳಬೇಕು. ಯಾವುದೇ ಯಶಸ್ಸು ಪರಿಶ್ರಮವಿಲ್ಲದೇ ತ್ವರಿತವಾಗಿ ಸಿಗದು. ಪ್ರತಿದಿನ ಪುನರಾವರ್ತಿತವಾಗಿ ಅಧ್ಯಯನ ಮಾಡುವುದರ ಜೊತೆಗೆ ಸಮಯ ಪಾಲನೆ ಮತ್ತು ಆತ್ಮವಿಶ್ವಾಸವನ್ನು ಮೈಗೂಡಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ವಿದ್ಯಾ ಪ್ರಸಾರಕ ಸಮಿತಿಯ ಅಧ್ಯಕ್ಷ ಟಿ. ದಾಮೋದರ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರಾಚಾರ್ಯ ಡಾ. ಪಿ.ಬಿ. ತೆಗ್ಗಿಹಳ್ಳಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಮಖಾನಾ ಉಪಾಧ್ಯಕ್ಷ ಎಸ್.ಐ. ಮಳಗಲಿ ಪರಿಚಯಿಸಿದರು. ಡಾ. ಎಂ.ಎನ್. ಶಿದ್ಧಗಿರಿ ಮತ್ತು ಡಾ. ವಿ.ಎಂ. ಜಬಡೆ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಲೋಕೇಶ ಮಾಳಿ ವಂದಿಸಿದರು.

## ರಾಮದುರ್ಗ: ಜ್ಞಾನದಿಂದ ಮಾತ್ರ ಸಾಧನೆ ಮಾಡಲು ಸಾಧ್ಯವಿದೆ- ಯುವ ಲೇಖಕಿ ಆನಿಕಾ



ರಾಮದುರ್ಗ : ನಿರಂತರ ಓದು ಸಾಧನೆಗೆ ಸಹಕಾರಿಯಾಗಲಿದೆ. ಶಿಕ್ಷಣ ಮನುಷ್ಯನನ್ನು ವಿನಮ್ರನನ್ನಾಗಿ ಮಾಡುತ್ತದೆ.

ವಿಧ್ಯೆಯಲ್ಲಿ ವಿನಯತೆ ಅಡಗಿದ್ದು, ಜ್ಞಾನದಿಂದ ಮಾತ್ರ ಸಾಧನೆ ಮಾಡಲು ಸಾಧ್ಯವಿದೆ ಎಂದು ಬೆಂಗಳೂರಿನ ಯುವ ಲೇಖಕಿ ಆನಿಕಾ ಗಜೇಂದ್ರಗಡ ಹೇಳಿದರು. ಪಟ್ಟಣದ ಶ್ರೀಮತಿ ಸುಶೀಲಾತಾಯಿ ವಾಯ್ ಕುಲಗೋಡ ಪಿ.ಯು. ಕಾಲೇಜಿನಲ್ಲಿ "ಮಹಿಳಾ ಸಂಘದ ಕಾರ್ಯಕ್ರಮ"ದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು, ವಿದ್ಯಾರ್ಥಿಗಳು ತಮ್ಮ ಆಸಕ್ತಿ ಖಚಿತಪಡಿಸಿಕೊಂಡು ಆ ದಿಕ್ಕಿನಲ್ಲಿ ಸಾಗಲು ಸತತ ಪ್ರಯತ್ನ, ಪಟ್ಟಲ್ಲಿ ಯಶಸ್ಸು ಕಾಣಬಹುದು ಎಂದ ಅವರು, ಜ್ಞಾನಕ್ಕಿಂತ ಮಿಗಿಲಾದುದು ಮತ್ತೊಂದಿಲ್ಲ ಜ್ಞಾನವು ಮನುಷ್ಯನನ್ನು ಸುಸಂಸ್ಕೃತ ವ್ಯಕ್ತಿಯನ್ನಾಗಿಸುತ್ತದೆ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಆನಿಕಾ ಗಜೇಂದ್ರಗಡ ಸ್ವ ರಚಿತ 'ಯುಫೋನಿ' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು.

ವಿದ್ಯಾ ಪ್ರಸಾರಕ ಸಮಿತಿಯ ಸದಸ್ಯರಾದ ಪಿ.ಎಂ. ಜಗತಾಪ ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾ ಪ್ರಸಾರಕ ಸಮಿತಿಯ ಕೊಡುಗೆ ಅಮೂಲ್ಯವಾಗಿದೆ. ಸಂಸ್ಥೆಯಲ್ಲಿ ಅನೇಕ ಪ್ರತಿಭಾವಂತರು ಶಿಕ್ಷಣ ಪಡೆದು ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ವಿದ್ಯಾ ಪ್ರಸಾರಕ ಸಮಿತಿಯ ಅಧ್ಯಕ್ಷ ಟಿ. ದಾಮೋದರ ಮಾತನಾಡಿದರು. ಡಾ. ಪಿ.ಬಿ.ತೆಗ್ಗಿಹಳ್ಳಿ ಪುಸ್ತಕದ ವಿಷಯಗಳ ಕುರಿತು ಮಾಹಿತಿ ನೀಡಿದರು.

ವಿನಾಯಕ ಗಜೇಂದ್ರಗಡ, ಎಂ.ಎಚ್.ರಾಠೋಡ, ಬಿ.ವಾಯ್.ತಳವಾರ, ರಾಮವ್ವ ಪೂಜಾರ ಸೇ-ರಿದಂತೆ ಇತರರಿದ್ದರು.

ಪ್ರಾಚಾರ್ಯ ಎಂ.ಬಿ.ಪಾಟೀಲ ಸ್ವಾಗತಿಸಿ ಪರಿಚಯಿಸಿದರು. ಬಿ.ಆರ್. ಪಮ್ಮಾರ ಹಾಗೂ ಎಸ್. ಎಂ. ಕರಿಕಟ್ಟಿ ನಿರೂಪಿಸಿದರು.

ಎಸ್.ಆರ್.ಗೋಲನ್ನವರ ಬಹುಮಾನ ವಿತರಣಾ ಕಾರ್ಯಕ್ರಮ ನಡೆಸಿದರು. ಕುಮಾರಿ ನಿವೇದಿತಾ ಪಾಟೀಲ ವಂದಿಸಿದರು.



**ರಾಯಬಾಗ: ತಾಲೂಕಿನ ದಿಗ್ಗೆವಾಡಿಯಲ್ಲಿ 2022-23 ನೇ ಸಾಲಿನ ವಸತಿ ಯೋಜನೆಯಡಿ ಮಂಜೂರಾದ 61 ಮನೆಗಳ ಕಾರ್ಯಾದೇಶ ಪತ್ರಗಳನ್ನು ಶಾಸಕ ಡಿ.ಎಮ್.ಐಹೊಳೆಯವರು ಫಲಾನುಭವಿಗಳಿಗೆ ಶನಿವಾರ ವಿತರಿಸಿದರು.**

**ಗ್ರಾ.ಪಂ ಅಧ್ಯಕ್ಷ ರವಿ ಚೌಗಲಾ, ರಮೇಶ್ ಐನಾಪುರೆ, ಸಿ.ಬಿ.ಕೆ.ಎಸ್.ಎಸ್.ಕೆ ನಿರ್ದೇಶಕ ಮಲ್ಲಪ್ಪ ಮೈಶಾಳೆ, ಅಪ್ಪಾಸಾಹೇಬ ಮೈಶಾಳೆ, ಗಂಗಾಧರ ಮೈಶಾಳೆ,ಪ್ರಕಾಶ ಮಿರ್ಜೆ, ಬಸವರಾಜ ಡೊಣವಾಡೆ, ಸಂಜಯ್ ಮೈಶಾಳೆ, ಮಹಾಂತೇಶ ಚೌಗಲಾ, ಬಾಳಾಸಾಹೇಬ ಜಮಾದಾರ,ಬೊಲಾ ಕಡಾಳೆ, ಪರುಶುರಾಮ ಕಾಂಬಳೆ, ಮಹಾದೇವ ಕಾಂಬಳೆ, ಅಜಿತ ಸಲಗರೆ, ಕೇದಾರಿ ಸಲಗರೆ, ಅಶೋಕ ಮೈಶಾಳೆ, ಗಜೇಂದ್ರ ಜಲಾಲಪೂರೆ, ಶೇಖರ ಕಾಂಬಳೆ, ಆಸ್ಕರ್ ಜಮಾದಾರ, ಚಾಂದಸಾಹೇಬ ಧಪೇದಾರ, ಮಹಾದೇವ ಕೋಳಿ, ಮೊಸಾಅಲಿ ಜಮಾದಾರ ಹಾಗೂ ಫಲಾನುಭವಿಗಳು ಇದ್ದರು.**




**ತಾಲೂಕಿನ ಕುನ್ನಾಳ ಪಿಎಂಶ್ರೀ ಸರಕಾರಿ ಶಾಲೆಯ ವಿದ್ಯಾರ್ಥಿಗಳು ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯಗಳ ಕುರಿತು ಸಮಗ್ರ ಮಾಹಿತಿ ಪಡೆಯುವುದಕ್ಕಾಗಿ ಶಿಗ್ಗಾವಿ ತಾಲೂಕಿನ ತಿಮ್ಮಾಪೂರ ಬಳಿ ಇರುವ ಎಂ.ಎಸ್. ವಿಜ್ಞಾನ ಮತ್ತು ತಂತ್ರಜ್ಞಾನ ಪಾರ್ಕಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು.**

## ಪ್ರತಿಭಾ ಕಾರಂಜಿಯಲ್ಲಿ ಜಿಲ್ಲಾ ಮಟ್ಟಕ್ಕೆ ಆಯ್ಕೆ




ರಾಯಬಾಗ: 2024-25ನೇ ಸಾಲಿನ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಮೇಖಳಿ ಗ್ರಾಮದ ಆದರ್ಶ ವಿದ್ಯಾಲಯ (ಆರ್ ಎಂ ಎಸ್ ಎ) ಶಾಲೆಯ 7ನೇ ತರಗತಿ ವಿದ್ಯಾರ್ಥಿನಿ ಸುಪ್ರಿಯ ಮುತಾರೆ ಚಿತ್ರಕಲಾ ಸ್ಪರ್ಧೆಯಲ್ಲಿ ಮತ್ತು 9ನೇ ತರಗತಿ ವಿದ್ಯಾರ್ಥಿನಿ ಶ್ರಾವಣಿ ದೇಸಾಯಿ ಹಿಂದಿ ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಇವರನ್ನು ಎಸ್ ಡಿ ಎಂ ಸಿ ಅಧ್ಯಕ್ಷರು, ಸದಸ್ಯರು, ಶಾಲಾ ಮುಖ್ಯೋಪಾಧ್ಯಾಯರು, ಶಿಕ್ಷಕರು ಅಭಿನಂದಿಸಿದ್ದಾರೆ.

ಈ ವಿದ್ಯಾರ್ಥಿನಿಯರಿಗೆ ಚಿತ್ರಕಲಾ ಶಿಕ್ಷಕಿ ಆಶಾರಾಣಿ ನಡೋಣಿಯವರು ಮಾರ್ಗದರ್ಶನ ನೀಡಿದ್ದರು.

### ಉದ್ಯೋಗ ಖಾತ್ರಿ, ಸ್ವಚ್ಛ ಭಾರತ ಮಿಷನ್ ಯೋಜನೆ ಪ್ರಗತಿ ಪರಿಶೀಲನಾ ಸಭೆ

# ಶೌಚಾಲಯ ಬಳಕೆಗೆ ಜಾಗೃತಿ ಅಗತ್ಯ : ಸಿಇಓ ಕುರೇರ



**ಬಾಗಲಕೋಟೆ:** : ಕೆಲವೊಂದು ಮನೆಗಳಲ್ಲಿ ಶೌಚಾಲಯ ಇದ್ದರೂ ಉಪಯೋಗ ಮಾಡುತ್ತಿಲ್ಲ. ಅಂತಹ ಕಡೆಗಳಲ್ಲಿ ಜಾಗೃತಿ ಮೂಡಿಸುವ ಮೂಲಕ ಶೌಚಾಲಯ ಬಳಕೆ ಮಾಡುವಂತೆ ಮಾಡಬೇಕೆಂದು ಜಿ.ಪಂ ಸಿಇಓ ಶಶಿಧರ ಕುರೇರ ಅಧಿಕಾರಿಗಳು ಸೂಚಿಸಿದರು.

ಜಿಲ್ಲಾ ಪಂಚಾಯತ ನೂತನ ಸಭಾಭವನದಲ್ಲಿ ಪಂಚಾಯತ್ ರಾಜ್, ಮಹಾತ್ಮಾಗಾಂಧಿ ಉದ್ಯೋಗ ಖಾತ್ರಿ ಯೋಜನೆ, ಸ್ವಚ್ಛ ಭಾರತ ಮಿಷನ್ ಹಾಗೂ ವಸತಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಗ್ರಾಮದ ಜನರಿಗೆ ನೈರ್ಮಲ್ಯ ಹಾಗೂ ನೀರಿನ ಬಳಕೆ ಕುರಿತು ಮಾಹಿತಿ ನೀಡಬೇಕು. ಅಂದಾಗ ಮಾತ್ರ ಸ್ವಚ್ಛವಾದ ಗ್ರಾಮ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಅಂಗನವಾಡಿ ಕೇಂದ್ರಗಳಲ್ಲಿ ಶೌಚಾಲಯಗಳು ಮಕ್ಕಳ ಸ್ನೇಹಿ ಯಾಗಿರುವಂತೆ ನೋಡಿಕೊಳ್ಳಲು ತಿಳಿಸಿದ ಕುರೇರ ಅವರು ಪಂಚಾಯತ ಅಭಿವೃದ್ದಿ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಶಾಲೆಗಳಿಗೆ ಭೇಟಿ ನೀಡಿ ಶಾಲಾ ಶೌಚಾಲಯಗಳಿಗೆ ಒಂದೇ ತರಹದ ಬಣ್ಣ ಇರುವಂತೆ ಮಾಡಲು ತಿಳಿಸಿದರು. ಅಲ್ಲದೇ ಮಕ್ಕಳಿಗೆ ಶೌಚಾಲಯ ಬಳಕೆಯ ಬಗ್ಗೆ ಜಾಗೃತಿ ಮೂಡಿಸಿ ಶಾಲಾ ಮಕ್ಕಳ ಮನೆಯಲ್ಲಿ ಶೌಚಾಲಯ ಇರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು. ಸರ್ವೆ ಕಾರ್ಯ ನಡೆಸಿ ಶೌಚಾಲಯ ಇಲ್ಲದ ಮನೆಗಳಿಗೆ ಶೌಚಾಲಯ ಕಟ್ಟಿಕೊಳ್ಳಲು ಕಾರ್ಯಾದೇಶ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಗ್ರಾಮ ಆರೋಗ್ಯ ಅಭಿಯಾನದಡಿ ಸಂಬಂಧಿಸಿದಂತೆ ದಾಖಲೆ ಇಟ್ಟುಕೊಳ್ಳಬೇಕು. ಕಲಿಕಾ ಕೇಂದ್ರಗಳಾಗಿ ಆಯ್ಕೆಯಾದ ಬೆನಕಟ್ಟಿ ಮತ್ತು ಮುಗುಳಕೋಡ ಗ್ರಾ.ಪಂಗಳಲ್ಲಿ ಜಿಪಿಟಿಎಫ್ ಸಭೆಗಳನ್ನು ಹಮ್ಮಿಕೊಳ್ಳಲು ಸೂಚಿಸಿದರು. ಗ್ರಾಮ ಆರೋಗ್ಯ ಕಾರ್ಯಕ್ರಮದ ವಲಯ ಸಂಯೋಜಕರು ಟಿಬಿ ಮತ್ತು ಆಯ್ಕೆಯಾದ 64 ಗ್ರಾಮ ಪಂಚಾಯತಿಗಳಿಗೆ ಪಂಚಾಯಿತಿ ಅಭಿವೃದ್ದಿ ನಿಧಿಯಲ್ಲಿ ಕ್ಷಯ ರೋಗಿಗಳಿಗೆ ಪೌಷ್ಟಿಕ ಆಹಾರ ವಿತರಣೆ ಮಾಡುವಂತೆ ಹಾಗೂ ತಪಾಸಣಾ ಶಿಬಿರಗಳನ್ನು ಹಮ್ಮಿಕೊಳ್ಳಲು ತಿಳಿಸಿದರು. ಪ್ರತಿ ಗ್ರಾ.ಪಂದಲ್ಲಿ ಇಬ್ಬರು ನಲ್ ಜಲ್ ಮಿತ್ರರಿದ್ದು, ಅವರಿಗೆ ವೇತನ ಪಾವತಿಗೆ ಮಾಡದೇ ಇರುವ ಪಂಚಾಯತಿಗಳು ಪಾವತಿಗೆ ಕ್ರಮವಹಿಸಲು ತಿಳಿಸಿದರು.

ವಸತಿ ಯೋಜನೆಯಡಿ ಪ್ರಸಕ್ತ ಸಾಲಿನ ಪಿಎಂಎವಾಯ್ ಯೋಜನೆಯಡಿ ಕಾಮಗಾರಿ ಆದೇಶವನ್ನು ನೀಡಿ ಪ್ರಥಮ ಕಂತಿನ ಎಫ್‌ಟಿಓ ಮಾಡಲು ಸೂಚಿಸಿದರು. ಇನ್ನು ಪ್ರಾರಂಭವಾಗದೇ ಇರುವ ಮನೆಗಳ ಮಾಹಿತಿಯನ್ನು ನೀಡಿದಲ್ಲಿ ಅವುಗಳ ರದ್ದತಿಗೆ ಕ್ರಮವಹಿಸಲಾಗುತ್ತದೆ. ಲಿಂಟಲ್ ಹಂತದ ಮನೆಗಳನ್ನು ಜನವರಿ ಒಳಗೆ ಪೂರ್ಣಗೊಳ್ಳುವಂತೆ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದರು. ಪ್ರತಿ ಗ್ರಾ.ಪಂ ವ್ಯಾಪ್ತಿಯಲ್ಲಿ ದೇವದಾಸಿ ಮಹಿಳೆಯರು ಇದ್ದಾರೆ. ಅಂತವರಲ್ಲಿ ಯಾರಿಗೆ ಮನೆ ಇಲ್ಲವೋ ಅಂತವರನ್ನು ಸರ್ವೆ ಮಾಡಿ ಮಾಹಿತ ನೀಡಲು ತಿಳಿಸಿದರು.

ಕರ ವಸೂಲಾತಿಯಲ್ಲಿ ಸ್ವಲ್ಪ ಮಟ್ಟಿಗೆ ಸಾಧನೆ ಆಗಿದೆ, ಇನ್ನು ಹೆಚ್ಚಿಗೆ ಆಗಬೇಕು. ಅದಕ್ಕಾಗಿ ವಿಶೇಷ ಅಭಿಯಾನದ ರೂಪದಲ್ಲಿ ಕರ ವಸೂಲಿಗೆ ಕ್ರಮಕೈಗೊಳ್ಳಲು ತಿಳಿಸಿದ ಅವರು ಈ ಅಭಿಯಾನ ಕು-ರಿತು ಐಇಸಿ ಸಮಯೋಜಕರು ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಹೆಚ್ಚು ಹೆಚ್ಚು ಪ್ರಚಾರ ಮಾಡಲು ತಿಳಿಸಿದರು. ಮೊಬೈಲ್ ಟವರ್ ವಸೂಲಾತಿಯಲ್ಲೂ ಕೂಡಾ ಪ್ರಗತಿ ಸಾಧಿಸಬೇಕು ಎಂದರು. ಬಾಪೂಜಿ ಸೇವಾ ಕೇಂದ್ರಗಳು ಜನವರಿಗೆ ಶೇ.100 ರಷ್ಟು ಸೇವೆಯನ್ನು ನೀಡಬೇಕು. ಸಕಾಲ ಅರ್ಜಿ ವಿಲೇವಾರಿಯಲ್ಲಿ ಪ್ರಗತಿ ಇದ್ದು, ಮುಂದಿನ ದಿನಗಳಲ್ಲಿ ತ್ವರಿತವಾಗಿ ಅರ್ಜಿ ವಿಲೆಗೆ ಕ್ರಮವಹಿಸಬೇಕು ಎಂದರು.

ನರೇಗಾ ಯೋಜನೆಯ ಕ್ರೀಯಾ ಯೋಜನೆಗಳು ಕಾಲ ಮಿತಿಯೊಳಗೆ ಪೂರ್ಣಗೊಳಿಸಬೇಕು. ಗ್ರಾಮೀಣ ಕೂಲಿ ಕಾರ್ಮಿಕರಿಗೆ ಸವಳು ಜವಳು ಕ್ರೀಯಾ ಯೋಜನೆಯಡಿ ಹೆಚ್ಚು ಹೆಚ್ಚು ಕೆಲಸಗಳನ್ನು ನೀಡಲು ತಿಳಿಸಿದರು. ಅಟಲ್ ಭೂ ಜಲ್ ಯೋಜನೆಯಡಿ ಚೆಕ್ ಡ್ಯಾಂಗಳು ನಿರ್ಮಾಣ ಆಗಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಲು ತಿಳಿಸಿದರು.

ಸಭೆಯಲ್ಲಿ ಜಿ.ಪಂ ಉಪಕಾರ್ಯದರ್ಶಿ ಎನ್.ವಾಯ್.ಬಸ-ರಿಗಿಡದ, ಮುಖ್ಯ ಯೋಜನಾಧಿಕಾರಿ ಡಾ.ಪುನಿತ್ ಬಿ.ಆರ್ ಸೇರಿದಂತೆ ಆಯಾ ತಾಲೂಕಿನ ಕಾರ್ಯನಿರ್ವಾಹಕ ಅಧಿಕಾ-ರಿಗಳು ಹಾಗೂ ಪಂಚಾಯತ ಅಭಿವೃದ್ದಿ ಅಧಿಕಾರಿಗಳು ಉಪಸ್ಥಿತರಿದ್ದರು.

### ಮಧಬಾವಿಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ

ಮಹಾಲಿಂಗಪುರ: ಸಮೀಪದ ಮಧಬಾವಿಯ ಸರಕಾರಿ ಪ್ರೌಢಶಾಲೆಯ ಆವರಣದಲ್ಲಿ ನ.25ರಂದು ಬೆಳಗ್ಗೆ 9.30 ಕ್ಕೆ ಉಚಿತ ಆರೋಗ್ಯ ತಪಾಸಣ ಶಿಬಿರ ಏರ್ಪಡಿಸಲಾಗಿದೆ. ಕೆಎಲ್‌ಇ ಸಂಸ್ಥೆಯ, ಕೆಎಲ್‌ಇ ವಿಶ್ವವಿದ್ಯಾಲಯ, ಜವಾಹರಲಾಲ ನೆಹರು ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಮತ್ತು ವೈದ್ಯಕೀಯ ಸಂಶೋಧನಾ ಕೇಂದ್ರ ಬೆಳಗಾವಿ ಹಾಗೂ ಕೆಎಲ್‌ಇ ಸಂಸ್ಥೆಯ ಶ್ರೀ ಚನ್ನಗಿರಿಶ್ವರ ಪ್ರಾಸಾಧಿಕ ಕಲಾ, ವಿಜ್ಞಾನ ಮತ್ತು ಡಿ.ಡಿ ಶಿರೋಳ ವಾಣಿಜ್ಯ ಪದವಿ ಮಹಾವಿದ್ಯಾಲಯ, ಮಹಾಲಿಂಗಪುರ ಎನ್‌ಎಸ್‌ಎಸ್ ಮತ್ತು ಯುಥ್ ರೆಡ್ ಕ್ರಾಸ್ ಘಟಕಗಳ ಸಹಯೋಗದಲ್ಲಿ ನಡೆಯಲಿರುವ ಈ ಶಿಬಿರದಲ್ಲಿ ಕೆಎಲ್‌ಇ ಡಾ. ಪ್ರಭಾಕರ ಕೋರೆ ಆಸ್ಪತ್ರೆ ತಜ್ಞ ವೈದ್ಯರಿಂದ ವೈದ್ಯಕೀಯ, ಎಲಬು, ಕೀಲು, ಚಿಕ್ಕ ಮಕ್ಕಳ, ನೇತ್ರ, ಕೀವಿ, ಮೂಗು, ಗಂಟಲು ಚಿಕಿತ್ಸೆಗಳ ಕುರಿತು ಉಚಿತ ತಪಾಸಣೆ ಮಾಡಿ ಔಷಧಿಗಳನ್ನು ನೀಡಲಾಗುವುದು. ಮಧಬಾವಿ ಗ್ರಾಮ ಮತ್ತು ಸುತ್ತಮುತ್ತಲಿನ ಹಳ್ಳಿಗಳ ಜನರು ಈ ಶಿಬಿರದ ಸದುಪಯೋಗ ಪಡೆದುಕೊಳ್ಳಿ, ಆಯುಷ್ಮಾನ ಭಾರತ ಆರೋಗ್ಯ ಕರ್ನಾಟಕ ಯೋಜನೆ-ಬಿಪಿಎಲ್ ಕಾರ್ಡುದಾರ-ರಿಗೆ, ವೈದ್ಯಕೀಯ ವೆಚ್ಚ ಮರುಪಾವತಿ ಯೋಜನೆ, ಆರೋಗ್ಯ ಭಾಗ್ಯ ಯೋಜನೆಗಳ ಅಡಿಯಲ್ಲಿ ಸ್ಪೆಷಾಲಿಟಿ ಹಾಗೂ ಶಸ್ತ್ರ ಚಿಕಿತ್ಸೆಗಳನ್ನು ನೀಡಲಾಗುವುದು ಎಂದು ಪದವಿ ಪ್ರಾಚಾರ್ಯ ಡಾ. ಕೆ. ಎಂ.ಅವರಾದಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಿಗ್ಗಾಂವಿಯಲ್ಲಿ ಪಠಾಣ್ ಗೆಲುವು: ಬೆಳಗಾವಿಯಲ್ಲಿ ಪಟಾಕಿ ಸಿಡಿಸಿ ಸಂಭ್ರಮಿಸಿದ ಕೈ ಕಾರ್ಯಕರ್ತರು



ಬೆಳಗಾವಿ: ಶಿಗ್ಗಾಂವಿ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಯಾಸಿರ್ ಪಠಾಣ್ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಶನಿವಾರ ಬೆಳಗಾವಿ ನಗರದ ಕಾಂಗ್ರೆಸ್ ಕಚೇರಿಯಲ್ಲಿ ಜಿಲ್ಲಾ ಉಸ್ತುವಾರಿ ಹಾಗೂ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಆಗಮಿಸುತ್ತಿದ್ದಂತೆ ಕಾಂಗ್ರೆಸ್ ಕಾರ್ಯಕರ್ತರು ಸಿಹಿ ತಿನ್ನಿಸಿ ಪಟಾಕಿ ಸಿಡಿಸಿ, ಪುಷ್ಪಾರ್ಚನೆ ಮಾಡಿ ನಮ್ಮ ಮುಂದಿನ ಮುಖ್ಯಮಂತ್ರಿ ಎಂದು ಘೋಷಣೆ ಕೂಗಿದರು.

ಈ ವೇಳೆ ಸಚಿವ ಸತೀಶ್ ಜಾರಕಿಹೊಳಿ ಮಾತನಾಡಿ, ಶಿಗ್ಗಾಂವಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಯಾಸೀರ್ ಖಾನ್ ಪಠಾಣ್ ಅವರನ್ನು ಗೆಲ್ಲಿಸಲು ಬೆಳಗಾವಿಯ ಹಲವು ಕಾರ್ಯಕರ್ತರು ಶ್ರಮಿಸಿದ್ದು, ನಿಮ್ಮ ಶ್ರಮಕ್ಕೆ ಇಂದು ಪ್ರತಿಫಲ ದೊರೆತಿದೆ. ಶಿಗ್ಗಾಂವಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಗೆಲುವು ಐತಿಹಾಸಿಕ ಗೆಲುವಾಗಿದೆ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರು ಹೇಳಿದರು.

ಶಿಗ್ಗಾವಿಯಲ್ಲಿ ಅಹಿಂದ ಮತ ಪಡೆಯುವಲ್ಲಿ ನಾವು ಸಫಲರಾಗಿದ್ದೇವೆ. ಸುಮಾರು ಜನ ಚುನಾವಣೆಯಲ್ಲಿ ಭಾಗವಹಿಸಿ, ಕಾಂಗ್ರೆಸ್ ಸರ್ಕಾರದ ಅಭಿವೃದ್ಧಿ ಕೆಲಸಗಳು, ಯೋಜನೆಗಳನ್ನು ಜನಕ್ಕೆ ತಿಳಿಸುವ ಕೆಲಸ ಮಾಡಿದ್ದರಿಂದ ಯಾಸೀರ್ ಖಾನ್ ಪಠಾಣ್ ಅವ-ರಿಗೆ ಜಯ ಸಿಕ್ಕಿದೆ ಎಂದ ಅವರು, ಶಿಗ್ಗಾವಿ ಕ್ಷೇತ್ರದ ಉಪ ಚುನಾವಣೆಯಲ್ಲಿ ಶ್ರಮಿಸಿದ ಸರ್ವರಿಗೂ ಇದೇ ವೇಳೆ ಅಭಿನಂದನೆ ಸಲ್ಲಿಸಿದರು. ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಜಿಲ್ಲಾಧ್ಯಕ್ಷ ವಿನಯ ನಾವಲಗಟ್ಟಿ ಮಾತನಾಡಿ, ಬೇರೆ, ಬೇರೆ ನಾಯಕರು ಸಚಿವ ಸತೀಶ್ ಜಾರಕಿಹೊಳಿ ಅವರ ಕಾರ್ಯವೈಖರಿ ಅನುಸರಿಸಲಿ, ಏಕೆಂದರೆ ಶಿಗ್ಗಾಂವಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವು ಅಸಾಧ್ಯವೆಂಬ ಭಾವನೆ ಎಲ್ಲರಲ್ಲಿ ಇತ್ತು. ಆದರೆ ಆ ಭಾವನೆಯನ್ನು ಹೋಗಲಾಡಿಸಿ, ಕಾಂಗ್ರೆಸ್ ಅಭ್ಯರ್ಥಿ ಯಾಸೀರ್ ಖಾನ್ ಪಠಾಣ್ ಅವರನ್ನು ಗೆಲ್ಲಿಸಿದ್ದಾರೆ ಎಂದರು.

ಮುಗಿಲು ಮುಟ್ಟಿದ ಸಂಭ್ರಮ: ಹಾವೇರಿ ಜಿಲ್ಲೆಯ ಶಿಗ್ಗಾಂವಿಯಲ್ಲಿ ಬಸವರಾಜ ಬೊಮ್ಮಾಯಿ ಅವರಿಂದಾಗಿ ತೆರವಾಗಿದ ಶಾಸಕ ಸ್ಥಾನಕ್ಕೆ ನಡೆದ ಉಪಚುನಾವಣೆಯಲ್ಲಿ ಸಚಿವ ಸತೀಶ ಜಾರಕಿಹೊಳಿ ವಿಶೇಷ ಪ್ರಯತ್ನದಿಂದ ಕೈ ಅಭ್ಯರ್ಥಿ ಯಾಸೀರ್ ಖಾನ್ ಪಠಾಣ್ ಗೆಲುವಾಗಿದ್ದರಿಂದ ಬೆಳಗಾವಿ ಕಾಂಗ್ರೆಸ್ ಭವನ ಎದುರು ಸಚಿವ ಸತೀಶ ಜಾರಕಿಹೊಳಿ ಬೆಂಬಲಿಗರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ ಕಾಂಗ್ರೆಸ್ ಪಕ್ಷಕ್ಕೆ, ಸಿಎಂ ಸಿದ್ದರಾಮಯ್ಯ ಹಾಗೂ ಸಚಿವ ಸತೀಶ್ ಜಾರಕಿಹೊಳಿ ಗೆ ಜೈಕಾರ ಹಾಕಿ ಸಂಭ್ರಮಿಸಿದರು.

# ನಿಜವಾಯ್ತು ರಾಜು ಕಾಗೆ ಭವಿಷ್ಯ

## ಪಂಚ ಗ್ಯಾರಂಟಿಗಳೇ ಮೂರು ಉಪ ಚುನಾವಣೆ ಗೆಲುವಿಗೆ ಶ್ರೀರಕ್ಷೆ



ಮೋಳೆ ;-ರಾಜ್ಯದಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಪರಿಣಾಮವೇ ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ ಗೆಲುವಿಗೆ ಕಾರಣ ಎಂದು ಕಾಗವಾಡ ಶಾಸಕ ರಾಜು ಕಾಗೆ ಹೇಳಿದರು. ಅವರು ಕಾಗವಾಡ ಮತಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ರಸ್ತೆ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡುತ್ತಿದ್ದರು.

ಉಪ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಕಾಂಗ್ರೆಸ್ ಪಕ್ಷದ ಮೇಲೆ ಇಲ್ಲ ಸಲ್ಲದ ಆರೋಪ ಹೊರೆಸಿ ಮತದಾರರಲ್ಲಿ ಗೊಂದಲ ಮೂಡಿಸುವ ಪ್ರಯತ್ನ ಮಾಡಿದರು ಅಷ್ಟೇ ಅಲ್ಲ ಮೂರೂ ಕ್ಷೇತ್ರಗಳಲ್ಲಿಯೂ ಹಣ, ಹೆಂಡ ಹಂಚಿ ಮತದಾರರನ್ನು ಸೆಳೆಯುವ ಯತ್ನ ಮಾಡಿದರು ಆದರೂ ಕೂಡ ಮತದಾರರು ಮಾತ್ರ ಗ್ಯಾರಂಟಿ ಅನುಷ್ಠಾನಕ್ಕೆ ಮೆಚ್ಚಿ ಕಾಂಗ್ರೆಸ್ ಪಕ್ಷದ ಕೈ ಹಿಡಿದಿದ್ದಾರೆ ಎಂದು ರಾಜು ಕಾಗೆ ಹೇಳಿದರು.

ಈ ಮೂರೂ ಕ್ಷೇತ್ರಗಳಲ್ಲಿ ನಾನು ಪ್ರಚಾರಕ್ಕೆ ತೆರಳಿದ್ದಾಗ ಅಲ್ಲಿಯ ಮತದಾರರ ನಾಡಿ ಮಿಡಿತ ಅರಿತಿದ್ದೆ ಹೀಗಾಗಿ ಚುನಾವಣೆ ಪೂರ್ವದಲ್ಲಿಯೇ ಈ ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸುತ್ತಾರೆ ಎಂದು ಹೇಳಿದ್ದೆ ಎಂದ ಅವರು ಕಾಂಗ್ರೆಸ್ ಸರಕಾರದ ಜನಪರ ಮತ್ತು ಅಭಿವೃದ್ಧಿ ಪರ ಕಾರ್ಯಗಳನ್ನು ಮೆಚ್ಚಿ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಕೈ ಹಿಡಿದಿದ್ದಾರೆ ಎಂದು ಹೇಳಿದರು.

ಸಿಎಮ್ ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ರಾಜ್ಯದ ಎಲ್ಲ ಕ್ಷೇತ್ರಗಳ ಅಭಿವೃದ್ಧಿಗೆ 25 ಕೋಟಿ ಅನುದಾನ ಕೊಟ್ಟಿದ್ದು, ಈ ಪೈಕಿ ಕಾಗವಾಡ ಕ್ಷೇತ್ರದಲ್ಲಿ 12.5 ಕೋಟಿ ಅನುದಾನದಲ್ಲಿ ರಸ್ತೆ ಮತ್ತು ಇನ್ನುಳಿದ ಅರ್ಧದಷ್ಟು ಅನುದಾನವನ್ನು ಸಮುದಾಯ ಭವನಗಳ ನಿರ್ಮಾಣ-ಕ್ಕೆ ಬಳಸಿಕೊಳ್ಳಲಾಗುವುದು ಎಂದ ಅವರು ವಿಶೇಷ ಅನುದಾನದಲ್ಲಿ ತೋಟದ ರಸ್ತೆಗಳಿಗೆ ನಾನು ಆದ್ಯತೆ ನೀಡುತ್ತಿರುವೆ. ಇದ-ರಿಂದ ರೈತರಿಗೆ ತಾವು ಬೆಳೆದ ಬೆಳೆಗಳನ್ನು ಮಾರುಕಟ್ಟೆಗೆ ಸಾಗಿಸಲು ಅನಕೂಲವಾಗುತ್ತದೆ ಎಂದು ಹೇಳಿದರು.

ಜಿ.ಪಂ ಅಧಿಕಾರಿ ವೀರಣ್ಣಾ ವಾಲಿ, ಘೂಳಪ್ಪ ಜತ್ತಿ, ಶಿವಾನಂದ ಗೊಲಭಾವಿ, ಪ್ರಕಾಶ ಡೊಳ್ಳಿ, ಶಾಂತಯ್ಯ ಮಠಪತಿ, ಚಂದ್ರಕಾಂತ ಇಮ್ಮಡಿ, ಬಾವು ಪತ್ತಾರ, ವಿಠ್ಠಲ್ ಐಹೊಳೆ, ಸುಕುಮಾರ ಅಣಗಲಿ, ದಿಲೀಪ ಪೂಜಾರಿ, ಅಪ್ಪಾಸಾಬ ಘಟನಟ್ಟಿ, ಕಲ್ಮೇಶ ಬಿಎಅದಾರ, ಸುರೇಶ ಪಾಟೀಲ, ವಿಠ್ಠಲ್ ಖೋತ, ರಾಜು ನೀಲಜ-ಗಿ,ಎ.ಬಿ.ಕೌಲಗುಡ್ಡ ಖೊತ, ಗ್ರಾ.ಪಂ ಸದಸ್ಯ ರೋಹಿತ ಬಡಿಗೇರ, ಗುತ್ತಿಗೆದಾರರಾದ ಇಲಾಯಿ ಬಿರಾದಾರ, ಸುಭಾಷ್ ಪೂಜಾರಿ, ಮುರಗೇಶ ಪಾಟೀಲ್, ಆರ್ ಎಸ್ ಮುತನಾಳ, ಉಮೇಶ ಕುಳ್ಳೊಳ್ಳಿ, ಗಜನನ ಕಾಂಬಳೆ, ಆಸ್ಪಾಕ ಘಟನಟ್ಟಿ, ಶಿವಾನಂದ ಗೊಲಭಾವಿ, ಶಿವಾನಂದ ಹುಚಗೌಡರ.ಸಂ-ಜಯ ಪಾಟೀಲ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಮಿನಿ ಒಲಿಂಪಿಕ್ಸ್‌ನಲ್ಲಿ ಪೃಥ್ವಿ ಸಾಧನೆ



ಮಹಾಲಿಂಗಪುರ : ಸಮೀಪದ ಕೆಸರಗೊಪ್ಪ ಗ್ರಾಮದ ಬಾಲಕಿ ಪೃಥ್ವಿ ಧರೆಪ್ಪ ಬ್ಯಾಕೋಡ 14 ವರ್ಷದೊಳಗಿನ ಬಾಲಕಿಯರ ಮಿನಿ ಒಲಿಂಪಿಕ್ಸ್‌ನ 400ಮೀ ಓಟದಲ್ಲಿ ದ್ವಿತೀಯ ಮತ್ತು 600ಮೀ ಓಟದಲ್ಲಿ ತೃತೀಯ ಸ್ಥಾನ ಗಳಿಸುವ ಮೂಲಕ ಜಿಲ್ಲೆಗೆ ಕೀರ್ತಿ ತಂದಿದ್ದಾಳೆ.

ಕರ್ನಾಟಕ ಒಲಿಂಪಿಕ್ ಸಂಸ್ಥೆ (ಕೆಒಎ) ಆಶ್ರಯದಲ್ಲಿ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಜರುಗಿದ 14 ವರ್ಷದೊಳಗಿನ ಬಾಲಕಿಯರ ರಾಜ್ಯ ಮಟ್ಟದ ಮಿನಿ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಮಾಡಿದ ಸಾಧನೆಗೆ ತರಬೇತುದಾರರು, ಹಿರಿಯ ಕ್ರೀಡಾಪಟುಗಳು, ಗುರುಹಿರಿಯರು ಅಭಿನಂದಿಸಿದ್ದಾರೆ.

## ಆಸಂಗಿ ಉಪ ಚುನಾವಣೆ: ಶಾಂತಿಯುತ ಮತದಾನ-ಶೇ.೬೯.೮೧ ರಷ್ಟು ಮತದಾನ



ರಬಕವಿ-ಬನಹಟ್ಟಿ,ನ23: ತಾಲೂಕಿನ ಆಸಂಗಿ ಗ್ರಾಮ ಪಂಚಾಯಿತಿಯ ವಾರ್ಡ್ ನಂ.3 ರ ಪರಿಶಿಷ್ಠ ಜಾತಿ ಮೀಸಲು ಸ್ಥಾನಕ್ಕೆ ನಡೆದ ನೇರ ಹಣಾಹಣಿಗೆ ಇಂದು ಮತದಾನದ ಮೂಲಕ ಹಣೆಬರಹವನ್ನು ಬರೆಯುವಲ್ಲಿ ಕಾರಣವಾಯಿತು.

ಶಾಂತಿಯುತವಾಗಿ ನಡೆದ ಮತದಾನವು ಬೆಳಿಗ್ಗೆ 7 ರಿಂದ ಸಂಜೆ 5 ಗಂಟೆವರೆಗೆ ವಾರ್ಡ್ ನಂ.3 ರಲ್ಲಿನ ಒಟ್ಟು 981 ಮತಗಳ ಪೈಕಿ 694 ಮತದಾರರು ತಮ್ಮ ಹಕ್ಕು ಚಲಾಯಿಸಿದರು. ಒಟ್ಟು ಶೇ.69.81ರಷ್ಟು ಮತದಾನ ನಡೆದಿದೆ.

# ಲಕ್ಕುಂಡಿ ಗ್ರಾಮಸ್ಥರ ಮನೆ ಮನೆಗೆ ಸಚಿವರ ಮನವಿ ಪತ್ರ ವಿತರಣೆ



ಗದಗ : ಲಕ್ಕುಂಡಿಯ ಪಾರಂಪರಿಕ, ಗತಕಾಲದ,ಐತಿಹಾಸಿಕ ವೈಭವನ್ನು ಪುನರಸ್ಥಾಪಿಸುವ ಉದ್ದೇಶದಿಂದ ಲಕ್ಕುಂಡಿ ಗ್ರಾಮದಲ್ಲಿ ಹಮ್ಮಿಕೊಂಡಿರುವ ಸ್ಮಾರಕಗಳ ಸುಂದರ ಶಿಲ್ಪ ಕಾಲಕೃತಿಗಳ ಪ್ರಾಚ್ಯಾವಶೇಷಗಳ ಅನ್ವೇಷಣೆ ಕಾರ್ಯದಲ್ಲಿ ಪ್ರತಿಯೊಬ್ಬರು ಪಾಲ್ಗೊಂಡು ಪ್ರಾಚ್ಯಾವಶೇಷಗಳ ಸಂಗ್ರಹಣೆ ಮಾಡಿವ ಮೂಲಕ ಲಕ್ಕುಂಡಿಯ ವೈಭವವನ್ನು ಪುನರ್ ಸ್ಥಾಪಿಸೋಣ ಎಂಬ ಜಿಲ್ಲಾ ಉಸ್ತುವಾರಿ ಸಚಿವರ ಮನವಿ ಪತ್ರವನ್ನು ಲಕ್ಕುಂಡಿ ಗ್ರಾಮದ ಪ್ರತಿ ಮನೆ ಮನೆಗೂ ತಲುಪಿಸಿ ಪ್ರಾಚ್ಯಾವಶೇಷಗಳ ಅನ್ವೇಷಣೆ ಕುರಿತು ಅರಿವು ಮುಡಿಸಲಾಯಿತು.

ಈ ಸಂದರ್ಭದಲ್ಲಿ ರಚಿಸಲಾದ ತಂಡದ ಮುಖ್ಯಸ್ಥರು,ಸಚಿವರ ಮನವಿ ಪ್ರತಿಯನ್ನು ಮನೆ ಮನೆಗೆ ತೆರಳಿ ವಿತರಿಸಿದರು.

## ಅಪರಿಚಿತ ವ್ಯಕ್ತಿ ಸಾವು; ವಾರಸುದಾರರ ಪತ್ತೆಗೆ ಮನವಿ

ಕಾರವಾರ – ಅಂದಾಜು 45 ರಿಂದ 50 ವರ್ಷದ ಅಪ–ರಿಚಿತ ಗಂಡಸು, ಎಲ್ಲಿಂದಲ್ಲೋ ಬಂದು ಕಾರವಾರದಲ್ಲಿ ಬಿಕ್ಷೆ ಬೇಡಿ ಎಲ್ಲೆಂದರಲ್ಲಿ ಮಲಗುತ್ತಿದ್ದವನು ಕಾರವಾರ ಲಂಡನ್ ಬ್ರಿಡ್ಜ್ ಕೆಳಗೆ ಅನಾರೋಗ್ಯದಿಂದ ಮಲಗಿರುವ ಸ್ಥಿತಿಯಲ್ಲಿಯೇ ಮೃತಪಟ್ಟಿದ್ದು, ಈವರೆಗೂ ಆತನ ಹೆಸರು, ವಿಳಾಸ ಹಾಗೂ ವಾರಸುದಾರರ ಪತ್ತೆಯಾಗಿದ್ದು ಇರುವುದಿಲ್ಲ.

ಅಪರಿಚಿತ ಶವದ ವಿವರ: ವಯಸ್ಸು ಸುಮಾರು 45–50 ವರ್ಷ ಎತ್ತರ 5.3 ಅಡಿ ಎತ್ತರ, ಸಣಕಲು ದೇಹ, ಕಪ್ಪು ವರ್ಣದವನಾಗಿದ್ದು, ಕಪ್ಪು ಬಣ್ಣದ ಟೀ ಶರ್ಟ್ ಧರಿಸಿರುತ್ತಾನೆ.

ಈ ಮೇಲಿನ ಚಹರೆಯುಳ್ಳ ಮೃತ ದೇಹದ ಗಂಡಸಿನ ಮತ್ತು ವಾರಸುದಾರರು ಮಾಹಿತಿಯಿದ್ದಲ್ಲಿ ಕಾರವಾರ ಶಹರ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ: 8382226333, 9480805245 ನ್ನು ಸಂಪರ್ಕಿಸುವಂತೆ ಕಾರವಾರ ಶಹರ ಪೊಲೀಸ್ ಠಾಣೆಯ ಠಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಹಿರಿಯ ನಾಗರಿಕರಿಗೆ ಕಾನೂನು ಅರಿವು ನೆರವು ಕಾರ್ಯಕ್ರಮಹಿರಿಯ

# ನಾಗರಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಿ -ಮಾಂತೇಶ್ ಎಸ್ ದರಗದ

ಕೊಪ್ಪಳ : ಹಿರಿಯ ನಾಗರಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಿ ಎಂದು ಕೊಪ್ಪಳದ ಹಿರಿಯ ಶ್ರೇಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ್ ಎಸ್ ಧರಗದ್ ಹೇಳಿದರು.

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ರವರ ಸಂಯುಕ್ತಾಶ್ರಯದಲ್ಲಿ ನಗರದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಶನಿವಾರದಂದು ಹಮ್ಮಿಕೊಂಡಿದ್ದ ಹಿರಿಯ ನಾಗರಿಕರಿಗೆ ಕಾನೂನು ಸೇವೆಗಳ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಿರಿಯ ನಾಗರಿಕರಿಗೆ ಯಾವುದೇ ರೀತಿ ತೊಂದರೆಯಾಗದಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ. ಆದ್ದರಿಂದ ಹಿರಿಯ ನಾಗರಿಕರಿಗೆ ಏನಾದರೂ ಸಮಸ್ಯೆ ಆದರೆ ನಮ್ಮ ಜಿಲ್ಲೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ತಾಲೂಕು ಮಟ್ಟದಲ್ಲಿ



ತಾಲೂಕು ಕಾನೂನು ಸೇವೆಗಳ ಪ್ರಾಧಿಕಾರ ಇದೆ. ಹಿರಿಯ ನಾಗರಿಕರಿಗೆ ಏನಾದರು ಸಮಸ್ಯೆ ಇದ್ದರೆ, ಇಲ್ಲಿಗೆ ಬಂದು ಭೇಟಿಯಾಗಿ ನಿಮ್ಮ ಸಮಸ್ಯೆಗಳನ್ನು ಪರಿಹಾರ ಕಂಡುಕೊಳ್ಳಬಹುದು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಪ್ಪಳ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಎ.ವಿ.ಕಣವಿ ಅವರು ವಹಿಸಿದ್ದರು.

ಈ ಸಂದರ್ಭದಲ್ಲಿ ಕೊಪ್ಪಳ ತಾ.ಪಂ ಯೋಜನಾಧಿಕಾರಿ ಆರ್.ಎಚ್ ನದಾಫ್, ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿ ವೆಂಕಟೇಶ್ ದೇಶಪಾಂಡೆ ಸೇರಿದಂತೆ ಇಲಾಖೆ ಸಿಬ್ಬಂದಿಗಳು, ವಿಕಲಚೇತನರು ಹಾಗೂ ಹಿರಿಯನಾಗರಿಕರು ಉಪಸ್ಥಿತರಿದ್ದರು.

**ಚೂರು–ಪಾರು**

## ಮಾಸಾಶವನ್ನು ಪಡೆಯುತ್ತಿರುವ ಕುಸ್ತಿ/ಕ್ರೀಡಾಪಟುಗಳ ಗಮನಕ್ಕೆ

ಗದಗ : ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದಲ್ಲಿ ಭಾಗವಹಿಸಿ ವಿಜೇತರಾದ ಮಾಜಿ ಕುಸ್ತಿ/ಕ್ರೀಡಾಪಟುಗಳಿಗೆ ಮಾಸಾಶನವನ್ನು ನೀಡಲಾಗುತ್ತದೆ.

ಮಾಸಾಶನದಾರರು ತಮ್ಮ ಜೀವಿತ ಪ್ರಮಾಣ ಪತ್ರ, 05 ಪಾಸ್ಪೋರ್ಟ್ ಸೈಜ್ ಪೋಟೋ, ಮತ್ತು ಆಧಾರ ಕಾರ್ಡನೊಂದಿಗೆ ಖುದ್ದಾಗಿ ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣ ಸಲ್ಲಿಸಬಹುದಾಗಿದೆ. ಸಲ್ಲಿಸದೇ ಇದ್ದಲ್ಲಿ ನೀಡುತ್ತಿರುವ ಮಾಸಾಶನವನ್ನು ತಡೆಹಿಡಿಯಲಾಗುವುದು.

ಹೆಚ್ಚಿನ ಮಾಹಿತಿಗಾಗಿ ದೇವೇಂದ್ರಪ್ಪ ಗಡಾದ, ದೂರವಾಣಿ ಸಂಖ್ಯೆ 9845117049 ಗೆ ಸಂಪರ್ಕಿಸಬಹುದಾಗಿದೆ.

## ಗದಗ ಬೆಟಗೇರಿ ನಗರದ ವಿವಿಧೆಡೆ ನೀರು ಪೂರೈಕೆ

ಗದಗ : ಗದಗ ಬೆಟಗೇರಿ ಅವಳಿ ನಗರದ ಸಾರ್ವಜನಿಕರಿಗೆ ತಿಳಿಸುವುದೆನೆಂದರೆ ನವೆಂಬರ್ 23 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ: ವಾರ್ಡ್ 21, 22 – ವಿಜಯನಗರ ಶಾಲೆ, ಕುರುಗಲ ಲೇಔಟ, ಶಿಗ್ಗಾವಿ ಲೇಔಟ, ಕಮತರ ಪ್ಲಾಟ, ವಾಲ್ಮೀಕಿ ಭವನ, ಹನುಮಂತ ದೇವರು ಗುಡಿ, ಗಾರ್ಡನ, ಟವರ ಕಂಬ ಉಳಿದ ಕೆಲವು ಭಾಗಗಳು. ವಾರ್ಡ್ 6 – ಮಾಕಾಪುರ, ಪವಾರ, ನಾವಳ್ಳಿ, ಮಳಲಿ ಪೂಜಾರ, ಪಣಿಭಂದ, ತಟ್ಟಿಯವರ ಲೈನಗಳು ಉಳಿದ ಕೆಲವು ಭಾಗಗಳು. ವಾರ್ಡ್ 33 – ನಾವಳ್ಳಿ, ಪಿಡ್ಡಿ, ಬಸಯ್ಯರವರ ಲೈನಗಳು, ಕೇಶವ ನಗರ, ಬ್ಯಾಂಕರ್ಸ ಕಾಲೋನಿ, ಜಾಕೀರ ಹುಸೇನ ಕಾಲೋನಿ, ಹುಬ್ಬಳ್ಳಿ ರಸ್ತೆ ಉಳಿದ ಕೆಲವು ಭಾಗಗಳು. ವಾರ್ಡ್ 30, 34 – ವಡ್ಡರಗೇರಿ, ಮೂರು ಶಿಳ್ಳಿನ ವಕಾರ, ಕೊರವರ ಓಣಿ, 46 ಪ್ಲಾಟ, ಶಿವಾನಂದ ಗಾರ್ಡನ, ಬಸವೇಶ್ವರ ಶಾಲೆ, ಡಿಪೋ ಹಿಂದಿನ ಭಾಗ, 1 ನೇ ಕ್ರಾಸ ಉಳಿದ ಕೆಲವು ಭಾಗಗಳು. ವಾರ್ಡ್ 26 – ಹಳೆ ಬಸ ಸ್ಟ್ಯಾಂಡ ರಸ್ತೆ, ಕಾಯಿಪಲ್ಲೆ ಮಾರ್ಕೆಟ, ದನದ ದವಾಖಾನೆ, ಉರ್ದು ಶಾಲೆಯ ಕೆಳಗಿನ ಭಾಗ ಉಳಿದ ಕೆಲವು ಭಾಗಗಳು. ವಾರ್ಡ್ 29 – ಟೀಚರ್ಸ್ ಕಾಲೋನಿ ಎಲ್ಲಾ ಭಾಗಗಳು. ವಾರ್ಡ್ 1 – ಎಸ ಎಂ ಕೃಷ್ಣ ನಗರ ಕೆಳಗಿನ ಭಾಗ.

ತುಂಗಭದ್ರಾ ನದಿಯಿಂದ ಪೂರೈಕೆ ಮಾಡಿದ ನೀರನ್ನು ಸಂಗ್ರಹಣೆ ಮಾಡಿದ ನಂತರ ಹೊಸ ನೀರು ಸಂಗ್ರಹವಾಗಿರುವುದ–ರಿಂದಕಡ್ಡಾಯವಾಗಿ ಕಾಯಿಸಿ ಆರಿಸಿ ಕುಡಿಯಲು ಉಪಯೋಗಿಸತಕ್ಕದ್ದು ಎಂದು ಗದಗ–ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸೇನಾ ಆಯ್ಕೆ ಕುರಿತ ಲಿಖಿತ ಪರೀಕ್ಷೆಗೆ ತರಬೇತಿ ನೀಡಲು ಅರ್ಜಿ ಆಹ್ವಾನ

ಕಾರವಾರ – ಕಾರವಾರದ ವೀರ ಬಹದ್ದೂರ ಹೆಂಜಾ ನಾಯ್ಕ, ಸೇನಾ ಪೂರ್ವ ತರಬೇತಿ ಶಾಲೆಗೆ 2024–25ನೇ ಸಾಲಿಗೆ 2 ನೇ ಬ್ಯಾಚ್‌ಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಸೇನಾ ಆಯ್ಕೆ ಕುರಿತು ಲಿಖಿತ ಪರೀಕ್ಷೆಗೆ ತರಬೇತಿ ನೀಡಲು ತರಬೇತಿದಾರರ ಆಯ್ಕೆಗಾಗಿ ಅರ್ಹ ತರಬೇತಿ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಸೇನಾ ಆಯ್ಕೆ ಪೂರ್ವ ತರಬೇತಿ ಹಾಗೂ ಪೊಲೀಸ್ ಇಲಾಖೆಯ ಅಭ್ಯರ್ಥಿಗಳಿಗೆ ತರಬೇತಿ ನೀಡಿ, ಅನುಭವ ಹೊಂದಿರುವವರು ನ.27 ರೊಳಗಾಗಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಧಿಕಾರಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕಾರವಾರ ಇಲ್ಲಿಗೆ ಸಂಪರ್ಕಿಸುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನವ್ಹೆಂಬರ್ ೨೯ ರಂದು ಅಂಚೆ ಅದಾಲತ್

ಗದಗ : ಅಂಚೆ ಸೇವೆಗೆ ಸಂಬಂಧಿಸಿದಂತೆ ನವ್ಹೆಂಬರದ 29 ರ ಮಧ್ಯಾಹ್ನ 03.00 ಘಂಟೆಗೆ ಅಂಚೆ ಅಧೀಕ್ಷಕರ ಕಾರ್ಯಾಲಯ, ಗದಗ ಕಛೇರಿಯಲ್ಲಿ ವಿಭಾಗೀಯ ಮಟ್ಟದ ಅಂಚೆ ಅದಾಲತ್ ನಡೆಯಲಿದೆ.

ಅಂಚೆ ಸೇವೆಗೆ ಸಂಬಂಧಪಟ್ಟ ದೂರು, ಸಲಹೆ, ಸೂಚನೆಗಳಿದ್ದರೆ ನವ್ಹೆಂಬರ್ 28ರ ಒಳಗಾಗಿ ಅಂಚೆ ಅಧೀಕ್ಷಕರ ಕಛೇರಿ, ಎಪಿಎಂಸಿ ಯಾರ್ಡ್ ಗದಗ, ಈ ವಿಳಾಸಕ್ಕೆ ಅಂಚೆ ಚೀಟಿಯನ್ನು ಲಗತ್ತಿಸದೆಯೂ ಅರ್ಜಿಯನ್ನು ಸಲ್ಲಿಸಬಹುದು, ಮಾಹಿತಿಗಾಗಿ ದೂರವಾಣಿ ಸಂಖ್ಯೆ : 08372–277823 ಗೆ ಸಂಪರ್ಕಿಸಬಹುದು.

## ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಕೆ. ಪಾಟೀಲ ಅವರ ಜಿಲ್ಲಾ ಪ್ರವಾಸ

ಗದಗ : ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ. ಪಾಟೀಲ ಅವರ ನವೆಂಬರ್ 23 ಹಾಗೂ 24 ರ ಗದಗ ಜಿಲ್ಲಾ ಪ್ರವಾಸದ ವಿವರ ಇಂತಿದೆ.

ನವೆಂಬರ್ 23 ರಂದು ಗದಗ ನಲ್ಲಿ ನಿಯೋಜಿತ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು ನಂತರ ಅಧಿಕಾರಿಗಳೊಂದಿಗೆ ಸಭೆ ನಡೆಸುವರು. ಸಾಯಂಕಾಲ 5:00 ಗಂಟೆಗೆ ವಾರ್ಡ್ ನಂಬರ್ 35 ರಲ್ಲಿ ಸಿಸಿ ರಸ್ತೆ ಹಾಗೂ ಗಟಾರ ನಿರ್ಮಾಣ ಕಾಮಗಾರಿಯ ಭೂಮಿ ಪೂಜೆ ನೆರವೇರಿಸುವರು.

ಸಾಯಂಕಾಲ 5:30 ಗಂಟೆಗೆ ವಾರ್ಡ್ ನಂಬರ್ 30ರ ಮುಂಡರಗಿ ರಸ್ತೆ ವ್ಯಾಂಬೆ ಬಡಾವಣೆಗಳಲ್ಲಿ ನೂತನವಾಗಿ ನಿರ್ಮಾಣ ಮಾಡುತ್ತಿರುವ ಮನೆಗಳ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಗದಗನಲ್ಲಿ ವಾಸ್ತವ್ಯ ಮಾಡುವರು.

ನವೆಂಬರ್ 24ರಂದು ಬೆಳಗ್ಗೆ 9:30 ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರದ ಪ್ರಾಚ್ಯಾವಶೇಷ ಅನ್ವೇಷಣ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಎಂದು ಸಚಿವರ ಕಾರ್ಯಾಲಯ ಪ್ರಕಟಣೆ ತಿಳಿಸಿದೆ.

### ತಾಲ್ಲೂಕು ಎರಡನೆಯ ಮಕ್ಕಳ ಸಾಹಿತ್ಯ ಸಮ್ಮೇಳನ

# ಗಮನ ಸೆಳೆದ ಛದ್ಮ ವೇಷಧಾರಿ ಮಕ್ಕಳು: ಮಕ್ಕಳಲ್ಲಿ ಸಾಹಿತ್ಯದ ಅಭಿರುಚಿಯನ್ನು ಬೆಳೆಸಿ



ರಬಕವಿ–ಬನಹಟ್ಟಿ,ನ23: ತಂದೆ, ತಾಯಿ ಮತ್ತು ಶಿಕ್ಷಕರು ಮಕ್ಕಳಲ್ಲಿ ಸಾಹಿತ್ಯದ ಅಭಿರುಚಿಯನ್ನು ಮತ್ತು ಆಸಕ್ತಿಯನ್ನು ಬೆಳೆಸುವ ನಿಟ್ಟಿನಲ್ಲಿ ಗಮನ ನೀಡಬೇಕು. ಭವಿಷ್ಯದ ಸಾಹಿತಿಗಳನ್ನು ನಿರ್ಮಾಣ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಅವರು ಶನಿವಾರ ಇಲ್ಲಿನ ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಯ ಸಭಾ ಭವನದಲ್ಲಿ ನಡೆದ ರಬಕವಿ ಬನಹಟ್ಟಿ ತಾಲ್ಲೂಕು ಎರಡನೆಯ ಮಕ್ಕಳ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಮಕ್ಕಳು ಶುದ್ಧವಾಗಿ ಬರೆಯುವ ಮತ್ತು ಓದುವುದನ್ನು ರೂಢಿಸಿಕೊಳ್ಳಬೇಕು. ಸಾಹಿತ್ಯದ ಜಾಗೃತಿಯನ್ನು ಮೂಡಿಸುವ ಕಾರ್ಯವನ್ನು ಪರಿಷತ್ತು ಮಾಡಬೇಕು ಎಂದು ಶಾಸಕ ಸವದಿ ತಿಳಿಸಿದರು. ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಹಿರಿಯ ಮಕ್ಕಳ ಸಾಹಿತಿ ಜಯವಂತ ಕಾಡದೇವರ ಮಾತನಾಡಿ, ಮಕ್ಕಳು ಓದಿದೊಡನೆ ಅವರಿಗೆ ಅರ್ಥವಾಗಬಲ್ಲವಂಥ–ಹದೇ ಮಕ್ಕಳ ಸಾಹಿತ್ಯವಾಗಿದೆ. ಸಾಹಿತ್ಯ ಓದಿನ ತಳಹದಿಯಾಗಿದೆ. ಸಾಹಿತ್ಯದ ಓದಿನಿಂದ ಭಾಷೆಯ ಮೇಲೆ ಪ್ರಭುತ್ವ ದೊರಕುವುದಲ್ಲದೆ, ಅನ್ಯ ಭಾಷೆಗಳ ಕಲಿಕೆಗೂ ಪೂರಕವಾಗುತ್ತದೆ ಎಂದು ಹೇಳುವುದರ ಜೊತೆಗೆ ತಾವೆ ರಚಿಸಿದ ಮಕ್ಕಳ ಹಾಡುಗಳನ್ನು ಹಾಡಿ ರಂಜಿಸಿದರು.

ಗುರುದೇವ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ಪ್ರತಿಭಾವಂತ ಮಕ್ಕಳಿಗೆ ಸಮ್ಮೇಳನ ಪೂರಕವಾಗಿದೆ. ಇಂದಿನ ದಿನಗಳಲ್ಲಿ ಮಕ್ಕಳಲ್ಲಿ ಮುಗ್ಧತೆ ಕಡಿಮೆಯಾಗುತ್ತಿರುವುದು ಆತಂಕದ ವಿಷಯವಾಗಿದೆ. ಮಕ್ಕಳಿಗೆ ಉತ್ತಮ ಸಂಸ್ಕಾರ ಕೊಟ್ಟು ಬೆಳೆಸುವ ನಿಟ್ಟಿನಲ್ಲಿ ಶಿಕ್ಷಣ ಸಂಸ್ಥೆಗಳು ಪ್ರಮಾಣಿಕ ಪ್ರಯತ್ನ ಮಾಡಬೇಕು ಎಂದು ನುಡಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಸಿದ್ಧರಾಜ ಪೂಜಾರಿ, ಪೂರ್ಣಪ್ರಜ್ಞೆ ಶಿಕ್ಷಣ ಸಂಸ್ಥೆಯ ಕಾರ್ಯಾಧ್ಯಕ್ಷ ಸಿದ್ದಪ್ಪ ಮೇಣಿ, ನಗರದ ಮುಖಂಡ ಧರೆಪ್ಪ ಉಳ್ಳಾಗಡ್ಡಿ ಮಾತನಾಡಿದರು. ಚಿತ್ರಕಲಾವಿದ ಮಹಾದೇವಿ ಕವಿಶೆಟ್ಟಿ ಚಿತ್ರಕಲಾ ಮತ್ತು ಕರಕುಶಲ ವಸ್ತುಗಳ ಪ್ರದರ್ಶನವನ್ನು ಉದ್ಘಾಟಿಸಿದರು.

ತಾಲ್ಲೂಕು ಘಟಕದ ಅಧ್ಯಕ್ಷ ಶೈಲಾ ಮಿರ್ಜಿ ಪ್ರಾಸ್ತಾವಿಕ ನುಡಿಗಳನ್ನಾಡಿ ಸ್ವಾಗತಿಸಿದರು. ಕಿರಣ ಕರಲಟ್ಟಿ ವಂದಿಸಿದರು. ಅಂಕಿತಾ ಪಾಟೀಲ ಮತ್ತು ಸುಶಾಂತ ಬುರ್ಲಿ ನಿರೂಪಿಸಿದರು. ಜಿಲ್ಲಾ ಘಟಕದ ಅಧ್ಯಕ್ಷ ಈರಣ್ಣ ಲಠ್ಠೆ, ರಬಕವಿ ಬನಹಟ್ಟಿ ನಗರಸಭೆಯ ಅಧ್ಯಕ್ಷೆ ವಿದ್ಯಾ ಧಬಾಡಿ, ಸ್ಥಾಯಿ ಸಮಿತಿ ಕಾರ್ಯಾಧ್ಯಕ್ಷ ಅರುಣ ಬುದ್ನಿ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ವೆಂಕನಗೌಡ ಪಾಟೀಲ, ಶಿಕ್ಷಣ ಸಂಯೋಜಕ ಬಿ.ಎಂ. ಹಳೆಮನಿ, ಶ್ರೀಶೈಲ ಬುರ್ಲಿ, ಸಾವಿತ್ರಿ ಚಾಂಬಾರ, ರಾಜೇಶ್ವರಿ ಬಾಣಕಾರ, ರಾಜಶ್ರೀ ಪಾಲಭಾವಿ, ಕಿರಣ ಆಳಗಿ, ನಂದಿನಿ ಕುಲಕರ್ಣಿ ಸೇರಿದಂತೆ ಅನೇಕರು ಇದ್ದರು.

# ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆ: ಅರ್ಜಿ ಆಹ್ವಾನ

ಕಾರವಾರ – ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮತ್ತು ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಗಳು ಕರ್ನಾಟಕದಲ್ಲಿರುವ ಕನ್ನಡ ಬಾರದ ಎಲ್ಲ ಸರ್ಕಾರಿ ನೌಕರರಿಗಾಗಿ ಹನ್ನೆರಡು ತಿಂಗಳುಗಳ ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆಯೊಂದನ್ನು ನಡೆಸುತ್ತಿದ್ದು, ರಾಜ್ಯದ ಎಲ್ಲ ನಗರಸಭೆ, ಕ.ವಿ.ಪ್ರ.ನಿ.ನಿ., ಕೆ.ಎಸ್.ಆರ್.ಟಿ.ಸಿ., ವಿಶ್ವವಿದ್ಯಾಲಯಗಳು, ಶಾಲಾ ಕಾಲೇಜುಗಳು ಮತ್ತಿತರ ಸರ್ಕಾರಿ ಅನುದಾನ ಪಡೆಯುವ ಸಂಸ್ಥೆಗಳ ನೌಕರರು ಮತ್ತು ಎಲ್ಲ ರಾಷ್ಟ್ರೀಕೃತ ಬ್ಯಾಂಕುಗಳ ನೌಕರರು ಸಹ ಉಚಿತವಾಗಿ ನೋಂದಾಯಿಸಿಕೊಳ್ಳಬಹುದು.

ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆಗೆ ನೋಂದಾಯಿಸಿಕೊಂಡು ಉತ್ತೀರ್ಣರಾದವ–ರಿಗೆ ಕರ್ನಾಟಕ ಲೋಕಸೇವಾ ಆಯೋಗದ ಕನ್ನಡ ಪರೀಕ್ಷೆಯಿಂದ ಕರ್ನಾಟಕ ಸರ್ಕಾರದ ಅಧಿಸೂಚನೆ ತಿಳಿಸಿರುವಂತೆ ವಿನಾಯಿತಿ ಇರುತ್ತದೆ.

ಈ ಯೋಜನೆಯನ್ನು ಈಗ ಸಾರ್ವಜನಿಕ–ರಿಗೂ ವಿಸ್ತರಿಸಲಾಗಿದ್ದು, ಎಸ್. ಎಸ್. ಎಲ್. ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಹಾಗೂ ವಯೋಮಿತಿ 18ರಿಂದ 50 ವಯಸ್ಸಿನ ಒಳಗಿರಬೇಕು. ಆಸಕ್ತರು ಭರ್ತಿ ಮಾಡಿದ ಅರ್ಜಿಯ ಜೊತೆಯಲ್ಲಿ ರೂ. 250 ಡಿಮ್ಯಾಂಡ್ ಡ್ರಾಫ್ಟ್‌ನ್ನು ಕಳುಹಿಸಿ ಕೊಡಬೇಕು. ನೋಂದಣಿತರಿಗೆ ಇಪ್ಪತ್ತು ಪಾಠಾವಳಿಗಳನ್ನು ಕಳುಹಿಸಿಕೊಡಲಾಗುತ್ತದೆ. ತರಬೇತಿ ಮತ್ತು ಸಂಪರ್ಕ ಶಿಬಿರದ ಅಂತ್ಯದಲ್ಲಿ ಪರೀಕ್ಷೆಗಳನ್ನು ನಡೆಸಲಾಗುವುದು.

ಮೂವತ್ತೆಂಟನೆಯ ತಂಡದ ತರಬೇತಿಯು ನವೆಂಬರ್‌ನಿಂದ ಆರಂಭವಾಗುತ್ತಿದ್ದು, ಅರ್ಜಿ ನಮೂನೆ ಮತ್ತು ತರಬೇತಿ ವಿವರಗಳನ್ನು ಪ್ರಭಾರಿ ಅಧಿಕಾರಿ, ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆ, ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–570 006. ದೂ.ಸಂ. 0821–2345128 ಇವ–ರಿಗೆ ಐದು ರೂಪಾಯಿಯ ಅಂಚೆ ಚೀಟಿಯನ್ನು ಹಚ್ಚಿದ ಸ್ವವಿಳಾಸಿತ ಲಕೋಟೆಯನ್ನು ಕಳುಹಿಸಿ ಪಡೆದುಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಗಳು ಪ್ರಭಾರಿ ಅಧಿಕಾರಿಯವರಿಗೆ ನ.30 ರೊಳಗಾಗಿ ತಲುಪುವಂತೆ ಕಳುಹಿಸುಬೇಕೆಂದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯುವ ಜನೋತ್ಸವ ಮೂಲಕ ಕಲೆ ಸಂಸ್ಕೃತಿಯ ಪರಿಚಯ : ಜಿಲ್ಲಾಧಿಕಾರಿ ಕೆ. ಲಕ್ಷ್ಮೀ ಪ್ರಿಯಾ

ಕಾರವಾರ – ಇಂದಿನ ಯುವ ಪೀಳಿಗೆಯು ಮೊಬೈಲ್ ಎಂಬ ಮಾಯಾಜಾಲದಲ್ಲಿ ಮುಳುಗಿ ಹೋಗುತ್ತಿರುವುದು ಅತ್ಯಂತ ಕಳವಳ ಸಂಗತಿಯಾಗಿದೆ.ಯುವ ಜನೋತ್ಸವ ಕಾರ್ಯಕ್ರಮದ ಮೂಲಕ ಅವರಿಗೆ ನಮ್ಮ ಕಲೆ ಸಂಸ್ಕೃತಿಯನ್ನು ಪರಿಚಯಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಕೆ. ಲಕ್ಷ್ಮೀ ಪ್ರಿಯಾ ಹೇಳಿದರು.

ಅವರು ಶನಿವಾರ, ಸರಕಾರಿ ಕಲಾ ಮತ್ತು ವಿಜ್ಞಾನ ಕಾಲೇಜ್ ನಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರು ಯುವ ಕೇಂದ್ರ ಮತ್ತು ಸರಕಾರಿ ಕಲಾ ಮತ್ತು ವಿಜ್ಞಾನ ಕಾಲೇಜ್, (ಸ್ವಾಯತ್ತ) ಕಾರವಾರ ಇವರ ಸಹಯೋಗದಲ್ಲಿ ಅಯೋಜಿಸಲಾದ ಉತ್ತರ ಕನ್ನಡ ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇಂದಿನ ಯುವಜನತೆ ಮೊಬೈಲ್, ಟಿವಿ ಹಾಗೂ ಅಂತರ್ಜಾಲದಲ್ಲಿ ಮುಳುಗಿ ಹೋಗುತ್ತಿದ್ದಾರೆ ಅವರಿಗೆ ನಮ್ಮ ನಾಡಿನ ಕಲೆ ಸಂಗೀತ, ನಾಟಕ, ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಯುವಜನೋತ್ಸವ ಕಾರ್ಯಕ್ರಮ ಅಗತ್ಯವಾಗಿದೆ ಎಂದರು.

ಯುವಕರು ಶಿಕ್ಷಣದ ಜೊತೆಯಲ್ಲಿ ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸುವುದರಿಂದ ಅವರಲ್ಲಿ ಉತ್ತಮ ನಡವಳಿಕೆ, ಕೌಶಲ್ಯ ಮತ್ತು ಜ್ಞಾನ ಹೆಚ್ಚಾಗುತ್ತದೆ ಎಂದರು.

ನಗರ ಸಭೆ ಅಧ್ಯಕ್ಷ ರವಿರಾಜ ಚಂದ್ರಹಾಸ ಅಂಕೋಲೆಕರ ಮಾತನಾಡಿ, ಯುವ ಜನತೆಗೆ ಸರ್ಕಾರ ಅನೇಕ ಕಾರ್ಯಕ್ರಮ ಅಯೋಜಿಸಲಾಗುತ್ತದೆ ಇಂತಹ ಕಾರ್ಯಗಳ ಪ್ರಯೋಜವನ್ನು ಪಡೆದುಕೊಳ್ಳಿ ಎಂದರು.

ವಿದ್ಯಾರ್ಥಿಗಳು ಉತ್ತಮ ವಿದ್ಯಾಭ್ಯಾಸವನ್ನು ಮಾಡಿ ಉನ್ನತ ಹುದ್ದೆಯಲ್ಲಿ ಸೇವೆ ಸಲ್ಲಿಸುವಂತೆ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದ ಅವರು, ಜಿಲ್ಲಾಧಿಕಾರಿಗಳು ನಗರ ಸಭೆ ಉದ್ಯಾನವನದಲ್ಲಿ ಪುಸ್ತಕ ಪ್ರಿಯರಿಗೆ ಪತ್ರಿ ಭಾನುವಾರ 9 ಗಂಟೆಯಿಂದ 11 ಗಂಟೆಯವರೆಗೆ ಕಾರವಾರ




ರೀಡ್ಸ್ ಎಂಬ ವಿನೂತನ ಕಾರ್ಯಕ್ರಮ ಆಯೋಜನೆ ಮಾಡಿದ್ದು, ಈ ಕಾರ್ಯಕ್ರಮದಲ್ಲಿ ಯುವಜನತೆ ಪಾಲ್ಗೊಳ್ಳುವಂತೆ ಹೇಳಿದರು.

ಸರ್ಕಾರಿ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ಪ್ರಾಂಶುಪಾಲೆ ಗೀತಾ ಎಸ್ ವಾಳೇಕರ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಹುದುಗಿರುವ ಕೌಶಲ್ಯವನ್ನು ಪ್ರದರ್ಶಿಸಲು ಯುವಜನೋತ್ಸವ ಸೂಕ್ತ ವೇದಿಕೆವಾಗಿದೆ. ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ದೇಶ ನಮ್ಮದಾಗಿದೆ. ಇಂದು ಇಲ್ಲಿ ವಿವಿಧ ಕೌಶಲ್ಯಗಳನ್ನು ಕಣ್ತುಂಬಿಕೊಳ್ಳಬಹುದು ಎಲ್ಲರೂ ಇದರ ಸದುಪಯೋಗ ಪಡೆದುಕೊಳ್ಳಿ ಎಂದರು.

ನೆಹರು ಯುವ ಕೇಂದ್ರದ ಸಂಘಟಕ ಲೋಕೇಶ್ ಕುಮಾರ್ ಮಾತನಾಡಿ, ಪ್ರಧಾನಿಯವರ ನೇತೃತ್ವದಲ್ಲಿ ರಾಷ್ಟಿಯ ಯುವ ಜನೋತ್ಸವ ಕಾರ್ಯಕ್ರಮವು ದೆಹಲಿಯಲ್ಲಿ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಟಥಿ.ಘುಚಿಡಿಚಿಣ.ರಿಂತ.ಏಟಿ ಮೂಲಕ ನೋಂದಯಿಸಿಕೊಂಡು ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ಇದರ ಜೊತೆಯಲ್ಲಿ ಕ್ವಿಜ್ ಸ್ಪರ್ಧೆಯನ್ನು ಆಯೋಜಿಸಲಾಗಿದ್ದು ಇದರ ಸದುಪಯೋಗವನ್ನು ಪಡೆದುಕೊಳ್ಳಿ ಎಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ರವಿ ನಾಯಕ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಅಣಶಿ ಸರಕಾರಿ ಪ್ರೌಢ ಶಾಲೆಯ ಶಿಕ್ಷಕ ವಿಷ್ಣು ಪಟಗಾರ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಸರ್ಕಾರಿ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ಪ್ರಾಧ್ಯಾಪಕ ದಳವಾಯಿ, ಕಲ್ಪನಾ ರಶ್ಮಿ ಕಲಾಲೋಕ ನೃತ್ಯ ಶಾಲೆಯ ಪ್ರಾಂಶುಪಾಲ ಸೂರ್ಯ ಪ್ರಕಾಶ, ನಿರ್ಣಾಯಕರಾದ ಬಾಬುಚಂದ್ರ ನಾಯ್ಕ, ಪೂರ್ಣಿಮಾ ಶೆಟ್ಟಿ, ಪುರುಷೋತ್ತಮ ಗೌಡ, ಬಾಲನ ಗೌಡ ಪಾಟೀಲ, ವಿನುತಾ ಅಂಬೆಕರ್, ಸಂಗೀತಾ ಬಾಂದೇಕರ್, ಸಂತೋಷ್ ಶೇಟ್, ಡಾ. ಬಸವರಾಜ್ ದಳವಾಹಿ, ರಾಮ ನಾಯ್ಕ, ಡಾ. ಎಮ್ ಡಿ ಪಯಾಜ್, ಪ್ರಜ್ಞಾ.ಬಾಂದೇಕರ್, ಡಾ. ಮಹೇಂದ್ರ ಕುಮಾರ, ಡಾ. ಜ್ಯೋತಿ ಕಿಣಿ, ಘಟಕಾಂಬಳೆ, ಅನಿಲ್ ಮಡಿವಾಳ್, ರಿತೇಶ್ ಆಚಾರಿ, ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಇತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ವಿವಿಧ ವಿಭಾಗದಲ್ಲಿ ಸ್ಪರ್ಧೆಗಳು ನಡೆದವು ವಿಜೇತರಿಗೆ ಬಹುಮಾನ ವಿತರಿಸಲಾಯಿತು.

# ಮತದಾನ : ನಿಷೇದಾಜ್ಞೆ

ಕಾರವಾರ – ನ.23 ರಂದು ಉತ್ತರ ಕನ್ನಡ ಜಿಲ್ಲೆಯಲ್ಲಿ ಉಪಚುನಾವಣೆ ಜರುಗುವ ಗ್ರಾಮಪಂಚಾಯತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವಾರ್ಡುಗಳ ವ್ಯಾಪ್ತಿಯಲ್ಲಿ ಮತದಾನವನ್ನು ಶಾಂತಿಯುತವಾಗಿ ನಡೆಸುವ ಹಿನ್ನಲೆಯಲ್ಲಿ ಕಾರವಾರ, ಕುಮಟಾ, ಹೊನ್ನಾವರ, ಭಟ್ಕಳ ಶಿರಸಿ, ಸಿದ್ದಾಪುರ ಹಾಗೂ ದಾಂಡೇಲಿ ತಾಲೂಕಿನಲ್ಲಿರುವ ಮತದಾನ ನಡೆಯುವ ಮತಗಟ್ಟೆ ವ್ಯಾಪ್ತಿಯಲ್ಲಿ ಮತ್ತು ನಗರ ಸ್ಥಳೀಯ ಸಂಸ್ಥೆ ಯಲ್ಲಾಪುರ ಪಟ್ಟಣ ಪಂಚಾಯತ ಮತ್ತು ಅಂಕೋಲಾ ಪುರಸಭೆ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಮತದಾನ ನಡೆಯುವ ಮತಗಟ್ಟೆಗಳ ಸುತ್ತಲೂ 100 ಮೀಟರ್ ವ್ಯಾಪ್ತಿಯಲ್ಲಿ ಮತದಾನ ಮುಕ್ತಯವಾಗುವವರೆಗೆ ಭಾರತೀಯ ನಾಗರಿಕ ಸುರಕ್ಷ ಸಂಹಿತೆ (ಃಓಖಖ) 2023 ಸೆಕ್ಸನ್ 163 ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿ ಕೆ. ಲಕ್ಷ್ಮೀ ಪ್ರಿಯಾ ಆದ–ೇಶ ಹೊರಡಿಸಿದ್ದಾರೆ.

## ಹೈನುಗಾರಿಕೆ ಮತ್ತು ಎರೆಹುಳುಗೊಬ್ಬರ ತಯಾರಿಕೆ ಉಚಿತ ತರಬೇತಿ

ಕಾರವಾರ – ಕೆನರಾ ಬ್ಯಾಂಕ್ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ನ ಸಹಯೋಗದಲ್ಲಿ ನಡೆಸುತ್ತಿರುವ ರುಡ್‌ಸೆಟ್ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿರುವ ಹಸು ಸಾಕಾಣಿಕೆ(ಹೈನುಗಾರಿಕೆ) ಮತ್ತು ಎರೆಹುಳುಗೊಬ್ಬರ ಕುರಿತ 10 ದಿನಗಳ ಉಚಿತ ತರಬೇತಿಯು ಡಿಸೆಂಬರ್ ಎರಡನೇ ವಾರದಲ್ಲಿ ಆರಂಭವಾಗಲಿದ್ದು, ಗ್ರಾಮೀಣ ಆಸಕ್ತ ನಿರುದ್ಯೋಗಿ ಯುವಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು 18 ರಿಂದ 45 ವರ್ಷ ವಯೋಮಾನದವರಾಗಿದ್ದು, ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಅಭ್ಯರ್ಥಿಗಳು ಆಧಾರ್ ಕಾರ್ಡ್‌ನ್ನು ಹೊಂದಿರಬೇಕು ಹಾಗೂ ಬಿಪಿಎಲ್ ಕಾರ್ಡ್ ಅನ್ನು ಹೊಂದಿರುವ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ತರಬೇತಿಯು ಕಡ್ಡಾಯವಾಗಿ ವಸತಿಯುತವಾಗಿದ್ದು, ತರಬೇತಿಯ ಅವಧಿಯಲ್ಲಿ ಉಚಿತವಾಗಿ ಊಟ ಮತ್ತು ವಸತಿ ನೀಡಲಾಗುವುದು ಹಾಗೂ ತರಬೇತಿ ಪೂರ್ಣಗೊಂಡ ನಂತರ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದಿಂದ ಪ್ರಮಾಣಪತ್ರವನ್ನು ವಿತ–ರಿಸಲಾಗುವುದು. ಅರ್ಜಿ ಸಲ್ಲಿಸಲು ಡಿಸೆಂಬರ್ 6 ಕೊನೆಯ ದಿನವಾಗಿದೆ.

ಆಸಕ್ತರು ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮೊಬೈಲ್ ಸಂಖ್ಯೆ: 9380162042, 9740982585 ನ್ನು ಸಂಪರ್ಕಿಸುವಂತೆ ರುಡ್‌ಸೆಟ್ ಸಂಸ್ಥೆಯ ಬೆಂಗಳೂರು ಶಾಖೆಯ ನಿರ್ದೇಶಕ ರವಿಕುಮಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಶ್ವ ವಿಕಲಚೇತನರ ದಿನಾಚರಣೆಯ ನಿಮಿತ್ಯ ವಿಕಲಚೇತನರಿಗೆ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆ

ಗದಗ : 2024–25ನೇ ಸಾಲಿನ ವಿಶ್ವ ವಿಕಲಚೇತನರ ದಿನಾಚರಣೆಯನ್ನು ಜಿಲ್ಲಾ ಮಟ್ಟದಲ್ಲಿ ಆಚರಿಸಲಾಗುತ್ತಿದೆ. ವಿಕಲಚೇತನರಿಗಾಗಿ ಕೆ. ಎಚ್. ಪಾಟೀಲ್, ಜಿಲ್ಲಾ ಕ್ರೀಡಾಂಗಣದಲ್ಲಿ ನವೆಂಬರ್ 26,ಬೆಳಿಗ್ಗೆ 9:00 ಘಂಟೆಗೆ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ.

ದೈಹಿಕ, ಬುದ್ಧಿಮಾಂದ್ಯ, ಶ್ರವಣನ್ಯೂನ್ಯತೆವುಳ್ಳವರು ಮತ್ತು ಅಂಧರು/ದೃಷ್ಠಿದೋಷವುಳ್ಳ ವಿಕಲಚೇತನರು ಕ್ರೀಡಾ ಅಥ–ವಾ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಬಹುದಾಗಿದೆ ಹಾಗೂ ಭಾಗವಹಿಸಲು ಇಚ್ಚಿಸುವ ವಿಕಲಚೇತನರು ಈ ಕೆಳಕಂಡವರಲ್ಲಿ ಖುದ್ದಾಗಿ ಅಥವಾ ದೂರವಾಣಿ ಮೂಲಕ ನವೆಂಬರ್ 25 ರೊಳಗಾಗಿ ಹೆಸರು ನೊಂದಾಯಿಸಬಹುದಾಗಿದೆ. ಅನುಬಂಧ–01 ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು ಈ ಕೆಳಗಿನಂತಿವೆ.

ಕ್ರೀಡಾ ಸ್ಪರ್ಧೆಗಳ ವಿವರ: 6 ರಿಂದ 12 ವರ್ಷ ಕಿರಿಯ ವಿಭಾಗ, 13 ರಿಂದ 18 ವರ್ಷ ಪುರುಷ & ಮಹಿಳೆ ಹಿರಿಯ ವಿಭಾಗ, 18 ವರ್ಷ ಮೆಲ್ಪಟ್ಟ ಪುರುಷ & ಮಹಿಳೆ ದೈಹಿಕ ವಿಕಲತೆ ಸ್ವರೂಪ ಹೊಂದಿರುವರಿಗೆ ಜಾವಲಿನ್ ಥ್ರೋ, ಗುಂಡು ಎಸೆತ,–ಅಂಧರಿಗೆ ಕೇನ್ ರನ್, ಗುಂಡು ಎಸೆತ ಶ್ರವಣದೋಷ ಮತ್ತು ವಾಕ್‌ದೋಷದವರಿಗೆ 100 ಮೀಟರ್ ಓಟ, ಗುಂಡು ಎಸೆತ ಬುದ್ದಿಮಾಂದ್ಯದವರಿಗೆ ಮ್ಯೂಜಿಕಲ್ ಚೇರ್, ಚಂಡು ಎಸೆತ

ಸಾಂಸ್ಕೃತಿಕ ಸ್ಪರ್ಧೆಗಳ ವಿವರ: 6 ರಿಂದ 12 ವರ್ಷ ಕಿರಿಯ ವಿಭಾಗ, 13 ರಿಂದ 18 ವರ್ಷ ಪುರುಷ & ಮಹಿಳೆ ಹಿರಿಯ ವಿಭಾಗ, 18 ವರ್ಷ ಮೆಲ್ಪಟ್ಟ ಪುರುಷ & ಮಹಿಳೆ ದೈಹಿಕ ವಿಕಲತೆ ಸ್ವರೂಪ ಹೊಂದಿರುವರಿಗೆ ಜಾನಪದ ಗೀತೆ, ಭಾವಗೀತೆ, ಅಂಧರಿಗೆ ಜಾನಪದ ಗೀತೆ ಬಾವಗೀತೆ, ಶ್ರವಣದೋಷ ಮತ್ತು ವಾಕ್‌ದೋಷದವರಿಗೆ ಚಿತ್ರಕಲೆ,ನೃತ್ಯ, ಬುದ್ದಿಮಾಂದ್ಯದವರಿಗೆ ಫ್ಯಾನ್ಸಿ ಡ್ರೆಸ್ (ವೇಷಭೂಷಣ)

ಹೆಚ್ಚಿನ ಮಾಹಿತಿಗಾಗಿ ಗದಗ ಜಿಲ್ಲೆಯ ತಾಲ್ಲೂಕ ಪಂಚಾಯತಿ ವ್ಯಾಪ್ತಿಯಲ್ಲಿರುವ ಕಾರ್ಯನಿರ್ವಹಿಸುತ್ತಿರುವ ಎಮ್.ಆರ್.ಡಬ್ಲ್ಯೂ ಯ, ತಾಲ್ಲೂಕ್ ಪಂಚಾಯತ, ಗದಗ 8867556465, ಎಮ್.ಆರ್.ಡಬ್ಲ್ಯೂ ಯ, ತಾಲ್ಲೂಕ್ ಪಂಚಾಯತ, ರೋಣ – 9741615926, ಎಮ್.ಆರ್.ಡಬ್ಲ್ಯೂ ಯ, ತಾಲ್ಲೂಕ್ ಪಂಚಾಯತ, ಮುಂಡರಗಿ 9611922445, ಎಮ್.ಆರ್.ಡಬ್ಲ್ಯೂ ಯ, ತಾಲ್ಲೂಕ್ ಪಂಚಾಯತ, ಶಿರಹಟ್ಟಿ 8951128679 ಎಮ್.ಆರ್.ಡಬ್ಲ್ಯೂ ಯ, ತಾಲ್ಲೂಕ್ ಪಂಚಾಯತ, ನರಗುಂದ– 9591679022 ಹಾಗೂ ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರ (ಡಿಡಿಆರ್‌ಸಿ) 08372–220559 ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ನೆಲಮಹಡಿ, ಕೊಠಡಿ ಸಂಖ್ಯೆ: 029 ರಲ್ಲಿ ದಾಖಲಾತಿಗಳೊಂದಿಗೆ ತಮ್ಮ ಹೆಸರು ನೊಂದಾಯಿಸಿಕೊಳ್ಳಲು ಸೂಚಿಸಲಾಗಿದೆ ಹಾಗೂ ವಿಕಲಚೇತನ ಬಾಂಧವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಲು ಕೋರಲಾಗಿದೆ.

# ಸಂವಿಧಾನದ ತತ್ವ ಹೇಳಹೊರಟ ಪ್ರಭುತ್ವ




ರಾಜಕಾರಣಿ ಪಾತ್ರದಲ್ಲಿ ಚೇತನ್ ಚಂದ್ರ
ಮಾಸ್ ಎಲಿಮೆಂಟ್ ಸಿನೆಮಾ
ನ.೨೨ರಂದು ಬಿಡುಗಡೆ

ಪ್ರಜೆಗಳಲ್ಲಿ ತಮ್ಮ ಮತದಾನದ ಬಗ್ಗೆ ಅರಿವು ಮೂಡಿಸುವ 'ಪ್ರಭುತ್ವ' ಚಿತ್ರದಲ್ಲಿ ಮಾಸ್ ಹೀರೋ ಆಗಿ ಕಾಣಿಸಿಕೊಂಡಿದ್ದಾರೆ ನಟ ಚೇತನ್ ಚಂದ್ರ. ರವಿರಾಜ್ ಎಸ್ ಕುಮಾರ್ ನಿರ್ಮಾಣದಲ್ಲಿ ಮೇಘಡಹಳ್ಳಿ ಶಿವಕುಮಾರ್ ಕಥೆ ಬರೆದಿದ್ದಾರೆ.

ಬಿಡುಗಡೆ ಪೂರ್ವ ಚಿತ್ರದ ಬಗ್ಗೆ ಮಾಹಿತಿ ಹಂಚಿಕೊಳ್ಳಲು ಮಾಧ್ಯಮಗಳ ಮುಂದೆ ಬಂದಿತ್ತು ಚಿತ್ರತಂಡ.ಪ್ರತಿಯೊಬ್ಬ ಮತದಾರರು ಈ ಚಿತ್ರವನ್ನು ನೋಡಬೇಕು. ಮತದಾನ ಅಮೂಲ್ಯವಾದ್ದದ್ದು. ಹಾಗಾಗಿ ಮತದಾನವನ್ನು ಮಾರಾಟ ಮಾಡಿಕೊಳ್ಳಬಾರದು. ಈ ರೀತಿ ಮತದಾನದ ಮಹತ್ವದ ಬಗ್ಗೆ ತಿಳಿಸುವ ಚಿತ್ರವಿದು. ಈ ಚಿತ್ರಕ್ಕೆ ನಾನೇ ಕಥೆ ಬರೆದಿದ್ದೇನೆ. ನನ್ನ ಮಗ ರವಿರಾಜ್ ಎಸ್ ಕುಮಾರ್ ನಿರ್ಮಾಣ ಮಾಡಿದ್ದಾರೆ ಎಂದು ಚಿತ್ರದ ಬಗ್ಗೆ ಮಾಹಿತಿ ನೀಡಿದರು ಮೇಘಡಹಳ್ಳಿ ಶಿವಕುಮಾರ್.

ಚಿತ್ರತಂಡದ ಸಹಕಾರದಿಂದ ಚೆನ್ನಾಗಿ ಮೂಡಿಬಂದಿದೆ. ದಯವಿಟ್ಟು ಎಲ್ಲರೂ ನಮ್ಮ ಚಿತ್ರವನ್ನು ಚಿತ್ರಮಂದಿರದಲ್ಲೇ ನೋಡಿ ಎಂದು ನಿರ್ಮಾಪಕ ರವಿರಾಜ್ ಎಸ್ ಕುಮಾರ್ ತಿಳಿಸಿದರು.ನಾನು ಚಿತ್ರ ನೋಡಿದೆ. ತುಂಬಾ ಚೆನ್ನಾಗಿದೆ. ೮೦ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಚಿತ್ರ ಬಿಡುಗಡೆಯಾಗಲಿದೆ ಎಂದರು ವಿತರಕ ದೀಪಕ್ ಗಂಗಾಧರ್.

ಇದು ನನ್ನ ಹನ್ನೆರಡನೇ ಸಿನಿಮಾ. ಬಹಳ ದಿನಗಳ ನಂತರ ನಿಮ್ಮ ಮುಂದೆ ಬರುತ್ತಿದ್ದೇನೆ. ಮೇಘಡಹಳ್ಳಿ ಡಾ.ಶಿವಕುಮಾರ್ ಅವರು ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಒಳ್ಳೆಯ ಕಥೆ ಬರೆದಿದ್ದಾರೆ. ತಂತ್ರಜ್ಞರ ಕಾರ್ಯವೈಖರಿ ಹಾಗೂ ಎಲ್ಲಾ ಕಲಾವಿದರ ಅಭಿನಯ ಅದ್ಭುತವಾಗಿದೆ. ನಮ್ಮ ಚಿತ್ರಕ್ಕೆ ನಿಮ್ಮೆಲ್ಲರ ಬೆಂಬಲವಿರಲಿ ಎಂದರು ನಾಯಕ ಚೇತನ್ ಚಂದ್ರ.

ಚಿತ್ರದಲ್ಲಿ ಅಭಿನಯಿಸಿರುವ ಆದಿ ಲೋಕೇಶ್, ವಿಜಯ್ ಚೆಂಡೂರ್, ಡ್ಯಾನಿ, ಸಂದೀಪ್,ಚಿತ್ರಕಥೆ, ಸಂಭಾಷಣೆ ಜೊತೆಗೆ ಸಹ-ನಿರ್ದೇಶನ ಮಾಡಿರುವ ವಿನಯ್ ಮೂರ್ತಿ, ಛಾಯಾಗ್ರಾಹಕ ಕೆ.ಎಸ್ ಚಂದ್ರಶೇಖರ್ ಮುಂತಾದವರು "ಪ್ರಭುತ್ವ" ಚಿತ್ರದ ಕುರಿತು ಮಾತನಾಡಿದರು.

ಪಾವನ ಈ ಚಿತ್ರದ ನಾಯಕಿಯಾಗಿ ನಟಿಸಿದ್ದು, ಖ್ಯಾತ ನಟ ನಾಸರ್,ಶರತ್ ಲೋಹಿತಾಶ್ವ,ಅಂಬಿಕಾ, ರೂಪಾದೇವಿ,ರಾಜೇಶ್ ನಟರಂಗ,ಅವಿನಾಶ್ ಸೇ-ರಿದಂತೆ ಅನೇಕ ಹೆಸರಾಂತ ಕಲಾವಿದರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಎಮಿಲ್ ಸಂಗೀತ ನೀಡಿದ್ದಾರೆ.

# ಶತಮಾನಗಳ ಹಿಂದಿನ ಕಥೆ ಹೇಳುವ 'ಕಂಗುವ'



ಶಿವ ನಿರ್ದೇಶನದಲ್ಲಿ ಸೂರ್ಯ ನಾಯಕರಾಗಿ ನಟಿಸಿರುವ ಬಹು ನಿರೀಕ್ಷಿತ 'ಕಂಗುವ' ಚಿತ್ರ ಪ್ರಪಂಚದಾದ್ಯಂತ ಅದ್ದೂ-ರಿಯಾಗಿ ಬಿಡುಗಡೆಯಾಗುತ್ತಿದೆ. ಭಾರತದಲ್ಲಿ ಸುಮಾರು ೬೦೦೦ ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ತೆರೆಕಾಣುತ್ತಿರುವ ಈ ಚಿತ್ರ, ಕರ್ನಾಟಕದಲ್ಲಿ ಹೆಸರಾಂತ ಕೆವಿಎನ್ ಸಂಸ್ಥೆ ಮೂಲಕ ಬಿಡುಗಡೆಯಾಗುತ್ತಿದೆ.

ಇತ್ತೀಚಿಗೆ ಈ ಚಿತ್ರದ ಪ್ರಚಾರಕ್ಕಾಗಿ ನಟ ಸೂರ್ಯ ಬೆಂಗಳೂರಿಗೆ ಆಗಮಿಸಿದ್ದರು. ಈ ಚಿತ್ರದ ಹಾಡುಗಳು ಮತ್ತು ಟ್ರೇಲರ್ ಪ್ರೇಕ್ಷಕರನ್ನು ಬೇರೆ ಪ್ರಪಂಚಕ್ಕೇ ಕರೆದುಕೊಂಡು ಹೋಗುತ್ತದೆ.

ಪ್ರೇಕ್ಷಕರಿಗೆ ಅದ್ಭುತವಾದ ಚಿತ್ರವೊಂದನ್ನು ಕೊಡಬೇಕು ಎಂದು ಚಿತ್ರತಂಡ ತವಕದಲ್ಲಿದೆ. ತಮಿಳು ಚಿತ್ರರಂಗದಲ್ಲೇ ಅತ್ಯಂತ ದೊಡ್ಡ ಚಿತ್ರ ಇದು. ಇಡೀ ದೇಶ ಮತ್ತು ಹೊರದೇಶಗಳಲ್ಲೂ ಈ ಚಿತ್ರ ದೊಡ್ಡ ಮಟ್ಟದಲ್ಲಿ ಬಿಡುಗಡೆಯಾಗುತ್ತಿದೆ ಎಂದು ಕೆವಿಎನ್ ಪ್ರೊಡಕ್ಷನ್ಸ್ ನ ವೆಂಕಟ್ ತಿಳಿಸಿದರು.

ನಾವು ಈ ಚಿತ್ರವನ್ನು ಬಹಳ ಪ್ರೀತಿಯಿಂದ ಮಾಡಿದ್ದೇವೆ. ಈ ಚಿತ್ರ ಬರೀ ಹಣ ಮತ್ತು ಶ್ರಮದಿಂದ ಆಗಿಲ್ಲ ಎಂದು ಮಾತು ಆರಂಭಿಸಿದ ನಟ ಸೂರ್ಯ ನಮ್ಮ ನಿರ್ದೇಶಕ ಶಿವ ಎಲ್ಲಾ ತಂತ್ರಜ್ಞರ ಶ್ರಮ.

ರಾಜಮೌಳಿ ಅವರಿಂದ 'ಬಾಹುಬಲಿ' ಚಿತ್ರದಿಂದ ಪ್ಯಾನ್ ಇಂಡಿಯಾ ಪರಿಕಲ್ಪನೆ ಶುರುವಾಯಿತು. 'ಕೆಜಿಎಫ್' ಮತ್ತು 'ಕಾಂತಾರ' ಚಿತ್ರಗಳು ಅದನ್ನು ಇನ್ನಷ್ಟು ವಿಸ್ತರಿಸಿದವು. ಒಂದೊಳ್ಳೆಯ ಚಿತ್ರವನ್ನು ಕೊಟ್ಟರೆ ಜನರು ಪ್ರೋತ್ಸಾಹಿಸುತ್ತಾರೆ ಎಂಬುದು ಅರ್ಥವಾಗಿದೆ.ಈ ಉದ್ದೇಶದಿಂದ 'ಕಂಗುವ' ಚಿತ್ರವನ್ನು ಮಾಡಿದ್ದೇವೆ.

ನಮ್ಮ ಛಾಯಾಗ್ರಾಹಕ ವೆಟ್ರಿ, ಸಂಗೀತ ನಿರ್ದೇಶಕ ದೇವಿ ಶ್ರೀ ಪ್ರಸಾದ್ ಎಲ್ಲರೂ ಚಿತ್ರ ಅದ್ಭುತವಾಗಿ ಮೂಡಿಬರುವುದಕ್ಕೆ ಕಾರಣವಾಗಿದ್ದಾರೆ. ವಿಶೇಷವೆಂದರೆ, ಈ ಚಿತ್ರಕ್ಕೆ ಲೈಟ್‌ಗಳನ್ನೇ ಬಳಸದೆ ನೈಜವಾಗಿ ಚಿತ್ರೀಕರಿಸಲಾಗಿದೆ.

ಈ ಚಿತ್ರವು ನಮ್ಮನ್ನು ೭೦೦ ವರ್ಷಗಳ ಹಿಂದಕ್ಕೆ ಕರೆದೊಯ್ಯಲಿದೆ. ೩ಡಿ ಮತ್ತು ೪ಡಿ ವರ್ಷನ್‌ಗಳಲ್ಲೂ ಪ್ರದರ್ಶನವಾಗಲಿದೆ ಎಂದರು.

ಸ್ಟುಡಿಯೋ ಗ್ರೀನ್ ಮತ್ತು ಯುವಿ ಕ್ರಿಯೇಷನ್ಸ್ ಲಾಂಛನದಲ್ಲಿ ನಿರ್ಮಾಣವಾಗಿರುವ ಈ ಚಿತ್ರದಲ್ಲಿ ಸೂರ್ಯ ದ್ವಿಪಾತ್ರಗಳಲ್ಲಿ ನಟಿಸಿದ್ದಾರೆ. ಬಾಬಿ ಡಿಯೋಲ್ , ದಿಶಾ ಪಟಾನಿ , ನಟರಾಜನ್ ಸುಬ್ರಮಣ್ಯಂ , ಯೋಗಿ ಬಾಬು , ರೆಡಿನ್ ಕಿಂಗ್ಸ್ಲಿ , ಕೋವೈ ಸರಳಾ , ಆನಂದರಾಜ್, ಕೆ.ಎಸ್ ರವಿಕುಮಾರ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

## ಲಕ್ಕುಂಡಿ ಗ್ರಾಮಸ್ಥರಿಗೆ ಸಚಿವ ಡಾ.ಎಚ್.ಕೆ.ಪಾಟೀಲ ಮನವಿ


# ಪ್ರಾಚ್ಯಾವಶೇಷಗಳ ಅನ್ವೇಷಣೆಯಲ್ಲಿ ಪಾಲ್ಗೊಂಡು ಲಕ್ಕುಂಡಿ ವೈಭವ ಪುನರಸ್ಥಾಪನೆಗೆ ಮುಂದಾಗಿ ಲಕ್ಕುಂಡಿಯ ನನ್ನೆಲ್ಲ ಪ್ರೀತಿಯ ಬಂಧುಗಳೇ

ನಮ್ಮ ನಿಮ್ಮೆಲ್ಲರ ಹೆಮ್ಮೆಯ ಲಕ್ಕುಂಡಿ ಗ್ರಾಮದ ಮೊದಲ ಹೆಸರು 'ಲೊಕ್ಕಿ ಗುಂಡಿ', ಎಂದರೆ ಸಾಕ್ಷಾತ್ ಲಕ್ಷ್ಮಿ ಮಯ ನೆಲೆ ಎಂದರ್ಥ. ಈ ಗ್ರಾಮವು 'ದೇವಾಲಯಗಳ ಸ್ವರ್ಗ'ವೆಂದು ಹೆಸರಾಗಿದೆ. ಲಕ್ಕುಂಡಿ ಕನ್ನಡದ ರತ್ನತ್ರಯರಲ್ಲಿ ಒಬ್ಬರಾದ ರನ್ನ ಕವಿಗೆ ಆಶ್ರಯ ನೀಡಿದ್ದ ಕವಿವರ ಕಾಮಧೇನು, ದಾನಚಿಂತಾಮಣಿ ಎಂದು ಪ್ರಸಿದ್ಧಳಾದ ಅತ್ತಿಮಬ್ಬೆಗೆ ಉಸಿರಿತ್ತು ಹೆಸರಾದ ಪಾವನ ಭೂಮಿ. ಶರಣ ಸಹೋದರ-ಸಹೋದರಿಯರಾದ ಮುಕ್ತಾಯಿಯಕ್ಕ ಮತ್ತು ಅಜಗಣ್ಣನವರ ಜನ್ಮಭೂಮಿ,

ಕಲ್ಯಾಣ ಚಾಳುಕ್ಯರು, ಹೊಯ್ಸಳರು, ಕಲಚುರ್ಯ ಅರಸರು ಸಾವಿರ ವರ್ಷಗಳ ಹಿಂದೆ ಹಾಕಿಸಿರುವ ಶಾಸನಗಳ ಪ್ರಕಾರ ಲಕ್ಕುಂಡಿ ಸಾಕ್ಷಾತ್ ಶ್ರೀರಾಮನಿಂದ ನಿರ್ಮಿತವಾದ ಮಹಾ ಅಗ್ರಹಾರ, ಪಾವನ ಚರಿತ್ರಳಾದ ದಾನಚಿಂತಾಮಣಿ ಅತ್ತಿಮಬ್ಬೆಯ ಕರ್ಮಭೂಮಿ. ಒಳ್ಳೆಯತನಕ್ಕೆ, ಧರ್ಮಕ್ಕೆ, ಲಕ್ಷ್ಮಿ ?ಮಗೆ ತವರು ಮನೆಯಂತಿ-ದ್ದ ಲಕ್ಕುಂಡಿ ಗ್ರಾಮವು ಇಂದ್ರನ ಅಮರಾವತಿಗಿಂತಲೂ ಶ್ರೇಷ್ಠವಾಗಿದ್ದು, ಅಮರಾವತಿಯನ್ನು ಮತ್ತು ಲಕ್ಕುಂಡಿಂ-ಯನ್ನು ತಕ್ಕಡಿಯಲ್ಲಿಟ್ಟು ತೂಗಿದಾಗ ಲಕ್ಕುಂಡಿಯ ತೂಕವೇ ಹೆಚ್ಚಾಗಿತ್ತೆಂದು ಶಾಸನದಲ್ಲಿ ಹೇಳಲಾಗಿದೆ.

ಕಲ್ಯಾಣ ಚಾಳುಕ್ಯರ ಕರ್ಮಭೂಮಿಯಾಗಿದ್ದ, ಹೊಯ್ಸಳರ ರಾಜಧಾನಿಯಾಗಿದ್ದ ಲಕ್ಕುಂಡಿಂ-ಯಲ್ಲಿ, 101 ದೇವಾಲಯಗಳು, 101 ಬಾವಿಗಳು ಇದ್ದವೆಂಬುದು ಪ್ರತೀತಿ. ಇವು ವೈವಿಧ್ಯಮಯವಾದ ವಾಸ್ತು ಶೈಲಿಯನ್ನು ಹೊಂದಿದ್ದು, ಆ ಕಾಲದಲ್ಲಿ ಕರ್ನಾಟಕದ ಶಿಲ್ಪಕಲಾ ಚಟುವಟಿ-ಕೆಗಳ ಕಾರ್ಯಾಗಾರವಾಗಿತ್ತು. ಪ್ರಮುಖ ವ್ಯಾಪಾರಿ ಕೇಂದ್ರವೂ ಆಗಿದ್ದ ಲಕ್ಕುಂಡಿಯಲ್ಲಿ ಟಂಕಸಾಲೆ ಇದ್ದು, ಇಲ್ಲಿ ಮುದ್ರಿಸುತ್ತಿದ್ದ ನಾಣ್ಯಗಳಾದ 'ಲೊಕ್ಕಿ ಗದ್ಯಾಣ', 'ಲೊಕ್ಕಿಯ ಪೊನ್' ಹಣ ರಾಜಮಾನ್ಯತೆಯನ್ನು ಪಡೆದಿತ್ತು. ಈ ಊರಿನ ಸಾವಿರ ಮಹಾಜನರ ಸಂಘವು ಗ್ರಾಮದ ಒಳಿತಿಗಾಗಿ, ಶ್ರೇಯಸ್ಸಿಗಾಗಿ ಹಲವಾರು ಜನಪರ ಕೆಲಸಗಳನ್ನು ಮಾಡಿದ್ದಾರೆ. ನಮ್ಮ ಪೂರ್ವಜರು ದೇವಾಲಯಗಳನ್ನು ನಿರ್ಮಿಸಿ ಶಾಸನಗಳನ್ನು ಹಾಕಿಸುವಾಗ, ಸೂರ್ಯ ಚಂದ್ರ, ಆಕಾಶ, ಸಾಗರ, ಪರ್ವತಗಳಿರುವವರೆಗೂ ಅವುಗಳನ್ನು ರಕ್ಷಿಸಬೇಕೆಂದು ಕಳಕಳಿಯನ್ನು ಶಾಸನಗಳ ಮೂಲಕ ವ್ಯಕ್ತಗೊಳಿಸಿದ್ದಾರೆ.

ಆತ್ಮೀಯರೆ, ಒಂದು ಕಾಲದಲ್ಲಿ ಅತ್ಯುತ್ಕೃಷ್ಟ ಕಲಾತ್ಮಕ ದೇವಾಲಯಗಳನ್ನು ಹೊಂದಿದ್ದ, ಟಂಕಸಾಲೆಗಳಿಂದ ಶ್ರೀಮಂತವಾಗಿದ್ದ ನಮ್ಮಲಕ್ಕುಂಡಿ ಇಂದು ತನ್ನ ಗತವೈಭವವನ್ನು ನಾರುತ್ತಿದೆ. ಹಿಂದೊಮ್ಮೆ ಪೂಜೆ ಪುನಸ್ಕಾರ, ದಾನ ದತ್ತಿಗಳಿಂದ ಶ್ರೀಮಂತವಾಗಿದ್ದ ಗ್ರಾಮದ ಅಪರೂಪದ ವಾಸ್ತುಶಿಲ್ಪದ ನೆಲೆವೀಡಾಗಿದ್ದ ದೇವಾಲಯಗಳು,



ಇಂದು ಕಾಲನ ಹೊಡೆತಕ್ಕೆ, ನಮ್ಮಗಳ ಅಲಕ್ಷಕ್ಕೆ ಸಿಕ್ಕಿ ಕಣ್ಮರೆಯಾಗುತ್ತಿವೆ. ದೇವಾಲಯದ ಅವಶೇಷಗಳು ಎಲ್ಲೆಂದರಲ್ಲಿ ಚದುರಿ ಬಿದ್ದಿವೆ. ಇದು ನನಗೆ ಮಾತ್ರವಲ್ಲ, ನಮ್ಮೆಲ್ಲರಿಗೆ ತುಂಬಾ ನೋವನ್ನು ತಂದಿದೆ. ಹೀಗಾಗಿ ನಮ್ಮ ಪ್ರಾಚೀನ ಇತಿಹಾಸ ಮತ್ತು ಪರಂಪರೆಯನ್ನು ಸಂರಕ್ಷಿಸುವ ದಿಸೆಯಲ್ಲಿ ನಮ್ಮ ಸರ್ಕಾರ ಕಾರ್ಯೋನ್ಮುಖವಾಗಿದೆ.

ಅದರ ಫಲಿತವಾಗಿ, ಹಿಂದೊಮ್ಮೆ ವೈಭವಯುತವಾಗಿ ಮೆರೆದಿದ್ದ ಲಕ್ಕುಂಡಿ ಗ್ರಾಮವನ್ನು ಪುನರುತ್ಥಾನ ಮಾಡಲು ಗತವೈಭವ ಮರಳಿಸಲು ಮುಂದಡಿ ಇಟ್ಟಿದೆ. ಲಕ್ಕುಂಡಿಯಲ್ಲಿ ಎಲ್ಲೆಂದರಲ್ಲಿ ಸುಂದರವಾದ ಕಲಾಕೃತಿಗಳು, ವಿಗ್ರಹಗಳು, ಮೂರ್ತಿಗಳು ಉತ್ಕೃಷ್ಟ ಕೆತ್ತನೆಯ ಶಿಲ್ಪಕಲೆಯನ್ನು ಬಿಂಬಿಸುವ ಕಂಬಗಳು ನಿಮ್ಮ ಮನೆಗಳ ಬಳಿ ಚದುರಿ ಬಿದ್ದಿರುವ ಕಂಬಗಳು, ಮುರಿದು ಬಿದ್ದಿರುವ ಭಗ್ನಗೊಂಡಿರುವ ಶಿಲ್ಪಗಳು, ಮನೆಯ ಮೆಟ್ಟಿಲಾಗಿರುವ ಶಾಸನಗಳು, ದೇವರ ಮನೆಗಳಲ್ಲಿಯೋ, ಅಟ್ಟಗಳಲ್ಲಿಯೋ ಇಟ್ಟು ನಿರ್ಲಕ್ಷ ?ಯಕ್ಕೊಳಗಾಗಿರುವ ತಾಳೆಗರಿಯ ಹಸ್ತಪ್ರತಿಗಳು, ಇನ್ನೂ ಮುಂತಾದ ಐತಿಹಾಸಿಕ ಮಹತ್ವದ ಪ್ರಾಚ್ಯಾವಶೇಷಗಳನ್ನು ನೀಡುವಂತೆ ಕೋರಿ ದಿನಾಂಕ: 24.11.2024ರಂದು ನಿಮ್ಮ ಮನೆಯ ಬಾಗಿಲಿಗೆ ಬಂದು ಸ್ವೀಕರಿಸುತ್ತೇವೆ. ನೀವು ಕೊಡುವಂತಹ ಪ್ರಾಚ್ಯಾವಶೇಷಗಳನ್ನು ಅತ್ಯಂತ ವಿಶೇಷವಾದವುಗಳೆಂದು ಭಾವಿಸಿ, ಅವುಗಳನ್ನು ಸೂಕ್ತ ಸಂರಕ್ಷಣೆ ಮಾಡುತ್ತೇವೆ. ನೀವು ನೀಡುವ ಒಂದೊಂದು ಇತಿಹಾಸ ಸಂಬಂಧಿ ವಸ್ತುವೂ ನಮ್ಮ ಪರಂಪರೆಯ ರಕ್ಷಣೆಗೆ ಹಾಗೂ ಮುಂದಿನ ತಲೆಮಾರಿಗೆ ನೀವು ನೀಡುವ ಬೆಲೆಕಟ್ಟಲಾರದ ಕೊಡುಗೆ ಎಂದೇ ಭಾವಿಸುತ್ತೇನೆ.

ಆತ್ಮೀಯ ಬಂಧುಗಳೇ, ಲಕ್ಕುಂಡಿಗೆ ತನ್ನ ಪೂರ್ವ ವೈಭವವನ್ನು ತರುವ ಶಕ್ತಿ ನಿಮಗಿದೆ. ಲಕ್ಕುಂಡಿಯ ಪೂರ್ವವೈಭವವನ್ನು ಮರಳಿ ತಂದು ವಿಶ್ವ ಭೂಪಟದಲ್ಲಿ ಹಂಪಿಯಂತೆಯೇ ಲಕ್ಕುಂಡಿಗೂ ಜಾಗತಿಕ ಮನ್ನಣೆ ತರುವ ನಮ್ಮ ಪ್ರಯತ್ನಕ್ಕೆ ನಿಮ್ಮ ಬೆಂಬಲ ಹಾಗೂ ಸಹಕಾರ ತುಂಬಾ ಅಗತ್ಯವಿದೆ. ಅಲಕ್ಷ ?ಯಕ್ಕೊಳಗಾದ ಇತರ ಉದ್ದೇಶಗಳಿಗೆ ಬಳಸಲ್ಪಟ್ಟ ಪ್ರಾಚ್ಯಾವಶೇಷಗಳನ್ನು ಒಂದೆಡೆ ಕ್ರೋಢೀಕರಿಸಿ ಮತ್ತು ದೇವಾಲಯಗಳ ಅತಿಕ್ರಮಣವನ್ನು ತೆರವುಗೊಳಿಸಲು ಹಾಗೂ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ನೀವು ತೋರುವ ಕಾಳ-ಜಿಯೂ ಮಹತ್ತರವಾದ ಕಾಯಕವಾಗುತ್ತದೆಂಬುದು ನನ್ನ ಭಾವನೆ. ಆ ಮೂಲಕ ನಾವೆಲ್ಲರೂ ಸೇರಿ ಮತ್ತೆ ಲಕ್ಕುಂಡಿಯ ಚರಿತ್ರೆಯನ್ನು ಪುನರ್ನಿಮರ್?ಣ ಮಾಡಿ, ಲಕ್ಕುಂಡಿಂ-ಯಲ್ಲಿ ಭವ್ಯ ಬದುಕನ್ನು ಬಾಳಿ ಹೋದ ನಮ್ಮ ಪೂರ್ವಜರ ಆಶಯದಂತೆ 'ಆ ಚಂದ್ರಾರ್ಕವಾಗಿ" ಎಂದರೆ ಸೂರ್ಯ ಚಂದ್ರರಿರುವ ತನಕ ಲಕ್ಕುಂಡಿ ಗ್ರಾಮದ ವೈಭವವನ್ನು ಉಳಿಸಲು – ಬೆಳೆಸಲು ಸಾಧ್ಯವಾಗುತ್ತದೆ.

ಬನ್ನಿ ಬಂಧುಗಳೇ, ನಮ್ಮ ಈ ಮಹತ್ತರ ಕಾರ್ಯದಲ್ಲಿ ನೀವೂ ಭಾಗಿಗಳಾಗಿ. ನಮ್ಮ ಗ್ರಾಮದ ಹಿರಿಮೆ-ನಮ್ಮ ಹೆಮ್ಮೆಯೆಂದು ಸಾರೋಣ. ಲಕ್ಕುಂಡಿಯ ವೈಭವವನ್ನು ಪುನರ್‌ಸ್ಥಾಪಿಸುವ ನಮ್ಮ ನವೀನ ಪ್ರಯತ್ನದ ಭಾಗವಾಗಿ 'ಮನೆ-ಮನೆಯಿಂದ, ಹೊಳಗಟ್ಟಿಗಳಿಂದ ನಿಮ್ಮ ಪರಿಸರದ ಕಟ್ಟೆಗಟ್ಟೆಯಲ್ಲಿನ ಸ್ಮಾರಕಗಳ, ಸುಂದರ ಶಿಲ್ಪಕಲಾ ಕಲಾಕೃತಿಗಳ, ಪ್ರಾಚ್ಯಾವಶೇಷಗಳ ಅನ್ವೇಷಣೆಗೆ ನೀವೂ ಕೈಜೋಡಿಸಬೇಕೆಂದು ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ. ಪಾಟೀಲ ಅವರು ವಿನಂತಿಸಿದ್ದಾರೆ.

# ಚಳಿಗಾಲದಲ್ಲಿ ಕಾಡುವ ಬಿರುಕು ತುಟಿಯ ಆರೈಕೆ ಹೀಗೆ ಮಾಡಿ ನೋಡಿ...



ಚಳಿಗಾಲದಲ್ಲಿ ನಿಮ್ಮ ಚರ್ಮದ ಆರೈಕೆ ಎಷ್ಟು ಮುಖ್ಯವೋ ಹಾಗೆಯೇ ತುಟಿಯ ಆರೈಕೆಗೂ ಅಷ್ಟೇ ಗಮನಕೊಡಬೇಕಾಗುತ್ತದೆ. ಚಳಿಗಾಲ ಕಾಲಿಡುತ್ತಿದ್ದಂತೆ ಚರ್ಮದಲ್ಲಿ ಅನೇಕ ಸಮಸ್ಯೆಗಳು ಶುರುವಾಗುತ್ತದೆ. ಅದರ ಜೊತೆ ತುಟಿಯ ಬಿರುಕು ಬಹುದೊಡ್ಡ ಸಮಸ್ಯೆಯಾಗಿ ಕಾಡುತ್ತದೆ. ತುಟಿ ಒಡೆದು ರಕ್ತ ಬರುವುದು, ತುಟಿಯ ಮೇಲಿನ ಚರ್ಮ ಕಿತ್ತು ಬಿರುವುದು ಹೀಗೆ ನಾನಾ ರೀತಿಯ ಸಮಸ್ಯೆಗಳು ಕಂಡು ಬರುತ್ತವೆ. ಕೆಲವರಿಗೆ ಚಳಿಗಾಲವೆಂದರೆ ಚಳಿ ಜ್ವರ ಬಂದ ಹಾಗೇ ಆಗುತ್ತದೆ.ಮನೆಯಲ್ಲಿಯೇ ಸಿಗುವ ಕೆಲವೊಂದು ವಸ್ತುಗಳನ್ನು ಬಳಸಿಕೊಂಡು ತುಟಿಯ ಆರೈಕೆಯನ್ನು ಸುಲಭವಾಗಿ ಮಾಡಬಹುದು. ಮೃದುವಾದ ಹಾಗೂ ಗುಲಾಬಿ ರಂಗಿನ ತುಟಿ ನಿಮ್ಮದಾಗಬೇಕೆಂದರೆ ಇಲ್ಲೊಂದಿಷ್ಟು ಸಲಹೆ ಇದೆ ನೋಡಿ.

ಮುಖದ ಅಂದ ಹೆಚ್ಚಿಸುವಲ್ಲಿ ತುಟಿ ಮುಖ್ಯ ಪಾತ್ರ ವಹಿಸುತ್ತದೆ. ಗುಲಾಬಿ ರಂಗಿನ ತುಟಿಗಳು ಚಳಿಗಾಲ ಬಂತೆಂದರೆ ಸಾಕು ಹೆದರಿ ಬಾಡಿ ಹೋಗುತ್ತವೆ. ಕೊರೆಯುವ ಚಳಿ ಮತ್ತು ಒಣ ಗಾಳಿ ನಮ್ಮ ಸೂಕ್ಷ್ಮ ತುಟಿಯ ಮೇಲೆ ಹಾನಿಯನ್ನುಂಟುಮಾಡುತ್ತದೆ. ತುಟಿಗಳು ಒಣಗಿ, ಬಿರುಕು ಬಿಡುತ್ತದೆ ಮತ್ತು ಸಿಪ್ಪೆ ಏಳುತ್ತದೆ, ಇದು ತೀವ್ರ ನೋವನ್ನುಂಟುಮಾಡುತ್ತದೆ ಮಾತ್ರವಲ್ಲ ನಮ್ಮ ಮುಖದ ಅಂ-ದವನ್ನು ಹಾಳುಮಾಡುತ್ತದೆ. ನಾವು ತುಟಿ ಒಣಗಿದಾಗ ತೇವಾಂಶವಾಗಿಡಲು ಆಗಾಗ ನಮ್ಮ ಲಾಲಾರಸ ಅಥ-ವಾ ಎಂಜಲು ತಾಗಿಸುತ್ತೇವೆ. ಆದ-ರೆ ಈ ಅಭ್ಯಾಸ ಒಳ್ಳೆಯದಕ್ಕಿಂತ ಹೆಚ್ಚು ಹಾನಿ ಮಾಡುತ್ತದೆ. ಮೃದುವಾದ ತುಟಿ ಹೊಂದಬೇಕಾದರು ತಜ್ಞರು ಕೆಳಗೆ ತಿಳಿಸಿರುವ ಸಲಹೆಗಳನ್ನು ಪಾಲಿಸಿ.

ಚಳಿಗಾಲದಲ್ಲಿ ಒಡೆದ ತುಟಿಗಳು ಸಾಮಾನ್ಯವಾಗಿ ಶೀತ ತಾಪಮಾನ, ಕಡಿಮೆ ತೇವಾಂಶ ಮತ್ತು ತುಟಿಗಳನ್ನು ನೆಕ್ಕುವ ಅಭ್ಯಾಸದಿಂದ ಉಂಟಾಗುತ್ತವೆ. "ಇದು ಚರ್ಮದಿಂದ ನೈಸರ್ಗಿಕ ತೈಲಗಳನ್ನು ತೆಗೆದುಹಾಕುತ್ತದೆ, ಇದು ನಿರ್ಜಲೀಕರಣ, ಒಡೆದ ತುಟಿಗಳಿಗೆ ಕಾರಣವಾಗುತ್ತದೆ" ಎಂದು ಗುರುಗ್ರಾಮದ ಸಿಕೆ ಬಿರ್ಲಾ ಆಸ್ಪತ್ರೆಯ ಚರ್ಮರೋಗ ಸಲಹೆಗಾರ ಡಾ.ಸೀಮಾ ಒಬೆರಾಯ್ ಲಾಲ್ ತಿಳಿಸಿದ್ದಾರೆ.

**ಸಾಕಷ್ಟು ನೀರು ಸೇವಿಸಿ**

ಚಳಿಗಾಲದಲ್ಲಿ ಸರಿಯಾಗಿ ನೀರು ಕುಡಿಯುವುದರಿಂದ ದೇಹದ ಒಟ್ಟಾರೆ ನೀರಿನ ಮಟ್ಟ ವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ, ತುಟಿಗಳು ಒಣಗು ವುದನ್ನು ತಡೆಯುತ್ತದೆ. ನೀವಿರುವ ಸ್ಥಳದಲ್ಲಿ ಹ್ಯುಮಿಡಿಫೈಯರ್ ಅನ್ನು ಅಳವಡಿಸುವುದರಿಂದ ಗಾಳಿಯಲ್ಲಿ ತೇವಾಂಶವನ್ನು ಹೆಚ್ಚಿಸುತ್ತದೆ.

**ಎಕ್ಸ್‌ಫೋಲಿಯೇಟ್**

ತುಟಿಗಳಿಂದ ಒಣ ಅಥವಾ ಸತ್ತ ಚರ್ಮವನ್ನು ತೆಗೆದುಹಾಕಲು ನಿಯಮಿತ ಎಕ್ಸ್‌ಫೋಲಿಯೇಷನ್ ಮಾಡಬೇಕು. ಸಕ್ಕರೆ ಮತ್ತು ಜೇನುತುಪ್ಪದ ಮಿಶ್ರಣವನ್ನು ಬಳಸಿಕೊಂಡು ಮನೆಯಲ್ಲಿ ತಯಾರಿಸಿದ ಲಿಪ್ ಸ್ಕ್ರಬ್ ನಿಮಗೆ ಅದ್ಭುತ ಫಲಿತಾಂಶ ನೀಡುತ್ತದೆ. ಆದರೆ ಅತಿಯಾಗಿ ಮತ್ತು ಹೆಚ್ಚು ಒತ್ತಡ ಹಾಕಿ ಎಕ್ಸ್‌ಫೋಲಿಯೇಟ್ ಮಾಡಬಾರದು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿ.

**ಲಿಪ್ ಬಾಮ್ ಗಳು**

ಜೇನು, ಶಿಯಾ ಬೆಣ್ಣೆ ಮತ್ತು ಕೋಕೋ ಬೆಣ್ಣೆಯಂತಹ ಪದಾರ್ಥ-ಗಳನ್ನು ಒಳಗೊಂಡಿರುವ ಉತ್ತಮ ಗುಣಮಟ್ಟದ, ಮಾಯಿಶ್ಚರೈಸಿಂಗ್ ಲಿಪ್ ಬಾಮ್ ಗಳನ್ನು ಬಳಸಿ. ಮನೆಯಿಂದ ಹೊರ ಹೋಗುವ ಮೊದಲು ಹಚ್ಚಿ. ಇದನ್ನು ಯಾವಾಗಲೂ ನಿಮ್ಮ




ಬ್ಯಾಗಿನಲ್ಲಿಟ್ಟುಕೊಳ್ಳಿ. ನಿಮ್ಮ ತುಟಿಗಳು ಒಣಗಿದಂತೆ ಅನಿಸಿದಾಗ ಪುನಃ ಹಚ್ಚಿ.

**ತುಟಿಗಳಿಗೆ ನಾಲಿಗೆ ತಾಗಿಸುತ್ತಾ ಇರಿ**

ನಿಮ್ಮ ತುಟಿಗಳನ್ನು ಆಗಾಗ ನಾಲಿಗೆಗೆ ತಾಗಿಸುತ್ತಾ ಇದ್ದರೆ, ತತ್ಕಾಲಕ್ಕೆ ನಿಮಗೆ ತುಟಿಯಲ್ಲಿ ತೇವಾಂಶವನ್ನುಂಟುಮಾಡಬಹುದು. ಆದರೆ ವಾಸ್ತವವಾಗಿ ಲಾಲಾರಸವು ಬೇಗನೆ ಆವಿಯಾಗುತ್ತದೆ, ನಿಮ್ಮ ತುಟಿಗಳು ಮೊದಲಿಗಿಂತಲೂ ಹೆಚ್ಚು ಒಣಗುತ್ತವೆ. ಶೀತ ಗಾಳಿಯಿಂದ ನಿಮ್ಮ ತುಟಿಗಳನ್ನು ರಕ್ಷಿಸಲು ಸ್ಕಾರ್ಫ್ ಅಥ-ವಾ ಕುತ್ತಿಗೆ ಮುಚ್ಚುವಂತಹ ರಕ್ಷಣಾತ್ಮಕ ಕ್ರಮಗಳನ್ನು ಆರಿಸಿ. ಇದು ನಿಮ್ಮ ದೇಹವನ್ನು ತೀವ್ರವಾದ ಚಳಿಯಿಂದ ರಕ್ಷಿಸುತ್ತದೆ.

**ರಾತ್ರಿ ಚಿಕಿತ್ಸೆ**

ಮಲಗುವ ಮೊದಲು ಪೆಟ್ರೋಲಿಯಂ ಜೆಲ್ಲಿ ಅಥ-ವಾ ಹೈಡ್ರೇಟಿಂಗ್ ಲಿಪ್ ಮಾಸ್ಕ್ನ ದಪ್ಪ ಪದರವನ್ನು ಹಚ್ಚಿ. ಈ ಉತ್ಪನ್ನ ರಾತ್ರಿಯಿಡೀ ಕೆಲಸ ಮಾಡುತ್ತದೆ, ನಿಮ್ಮ ತುಟಿಗಳನ್ನು ಆಳವಾಗಿ ತೇವಗೊಳಿಸುತ್ತದೆ. ಮತ್ತು ರಾತ್ರಿ ತುಟಿ ಒಣಗುವುದನ್ನು ತಡೆಯುತ್ತದೆ. ನೀವು ಪದೇ ಪದೇ ತುಟಿ ನೆಕ್ಕುವುದನ್ನು ನಿಲ್ಲಿಸಬೇಕು. ಇದು ನಿಮ್ಮ ತುಟಿಯನ್ನು ಮತ್ತಷ್ಟು ಒಣಗುವಂತೆ ಮಾಡುತ್ತದೆ. ಕೆಲವೊಂದು ವಿಟಮಿನ್ ಕೊರತೆಯಿಂದಲೂ ನಿಮಗೆ ಬಿರುಕು ತುಟಿ ಸಮಸ್ಯೆ ಎದುರಾಗಬಹುದು. ಒಮೆಗಾ 3, ವಿಟಮಿನ್ ಬಿ2, ವಿಟಮಿನ್ ಡಿ ಕೊರತೆಯಿಂದ ನಿಮಗೆ ಸಮಸ್ಯೆ ಎದುರಾಗುತ್ತಿರಬಹುದು. ನೀವು ಎಷ್ಟೇ ಪ್ರಯತ್ನ ಪಟ್ಟರೂ ನಿಮಗೆ ಫಲಿತಾಂಶ ದೊರೆಯದಿದ್ದರೆ, ಚರ್ಮರೋಗ ತಜ್ಞರನ್ನು ಕಡ್ಡಾಯವಾಗಿ ಸಂಪರ್ಕಿಸಿ ಎಂದು ಚರ್ಮರೋಗ ತಜ್ಞರಾದ ಡಾ.ರಶ್ಮಿ ಶೆಟ್ಟಿ ತಿಳಿಸಿದ್ದಾರೆ.



# ಕೆಲವು ಉಪಯುಕ್ತ ಔಷಧಿಗಳು

1. ನೆಗಡಿ ಕೆಮ್ಮಿಗೆ ಕಷಾಯದ ಪುಡಿ ( Decoction powder for cold cough )

ಕಾಳುಮೆಣಸು 50 ಗ್ರಾಂ, ಒಣ ಶುಂಠಿ 50 ಗ್ರಾಂ, ಲವಂಗ 5-6, ಹಿಪ್ಪಲಿ 25 ಗ್ರಾಂ, ಓರ್ಮ 25 ಗ್ರಾಂ ಅತಿಮಧುರ 50 ಗ್ರಾಂ ಇಷ್ಟನ್ನು ನುಣ್ಣಗೆ ಪುಡಿ ಮಾಡಿಟ್ಟುಕೊಂಡು ನೆಗಡಿ ಕೆಮ್ಮು ಆದ ಸಮಯದಲ್ಲಿ 1 ಲೋಟ ನೀರಿಗೆ 1 ಚಮಚ ಪುಡಿ ಹಾಕಿ ಕಷಾಯ ಮಾಡಿ ಹಾಲು ಸಕ್ಕರೆ ಹಾಕಿ ಕುಡಿಯಿರಿ.

2. ಆರೋಗ್ಯಪೂರ್ಣ ಚೂರ್ಣ ( Healthy healthy )

ಮೆಂತ್ಯ 100 ಗ್ರಾಂ, ಜೀರಿಗೆ 100 ಗ್ರಾಂ, ಓಮ 100 ಗ್ರಾಂ ಸೋಂಪು, ಅಗಸೆ ಬೀಜ 100 ಗ್ರಾಂ, ಕಪ್ಪು ಜೀರಿಗೆ 100 ಗ್ರಾಂ ಎಲ್ಲ ಸೇರಿಸಿ ಪುಡಿಮಾಡಿಟ್ಟುಕೊಂಡು ಪ್ರತಿದಿನ ರಾತ್ರಿ 1 ಚಮಚ ತಿಂದು ಬಿಸಿನೀರು ಕುಡಿಯಿರಿ.

3.ಸ್ನಾನದ ಚೂರ್ಣ ( The bath is full )

ಹೆಸರುಕಾಳು 1/2 ಕೆ.ಜಿ, ಕಡಲೆಕಾಳು 1/2 ಕೆ.ಜಿ, ಕಸ್ತೂರಿ ಅರಿಶಿನ 100 ಗ್ರಾಂ, ಕಚೂರ 100 ಗ್ರಾಂ, ಶ್ರೀಗಂಧದ ಚೂರ್ಣ 50 ಗ್ರಾಂ, ಬೇವಿನ ಎಲೆಯನ್ನು ಓಣಗಿಸಿ ಪುಡಿ ಮಾಡಿ ಇವಿಷ್ಟನ್ನು ನುಣ್ಣಗೆ ಪುಡಿ ಮಾಡಿ ಸ್ನಾನ ಮಾಡುವಾಗ ಮೈಕೈಗೆಲ್ಲಾ ಹಚ್ಚಿ ಸ್ನಾನ ಮಾಡಿ ಚರ್ಮ ಆರೋಗ್ಯಪೂರ್ಣ ವಾಗಿರುತ್ತದೆ.

4.ಕೀಲುನೋವಿಗೆ ( For arthritis )



ಕೊತ್ತಂಬರಿ ಬೀಜ 100 ಗ್ರಾಂ, ಜೀರಿಗೆ 100 ಗ್ರಾಂ, ಒಣಶುಂಠಿ 100 ಗ್ರಾಂ, ಹುಣಸೇಬೀಜದ ಒಳಗಿನ ಬಿಳಿ ಪೊಪ್ಪು 50 ಗ್ರಾಂ, ಎಲ್ಲವನ್ನು ನುಣ್ಣಗೆ ಪುಡಿ ಮಾಡಿಟ್ಟುಕೊಂಡು ಇದನ್ನು ರಾತ್ರಿ ಮಲಗುವಾಗ 1 ಲೋಟ ಬಿಸಿ ನೀರಿಗೆ 1 ಚಮಚ ಪುಡಿಹಾಕಿ ಮುಚ್ಚಿಡಿ. ಬೆಳ್ಳಿಗೆ ಎದ್ದ ತಕ್ಷಣ ಮೇಲಿನ ತಿ:ಇ ನೀರನ್ನು ಸೇವಿಸಿ.

5.ರಕ್ತದ ಒತ್ತಡಕ್ಕೆ ( To blood pressure )

ಅಶ್ವಗಂಧದ ಪುಡಿ 100 ಗ್ರಾಂ, ಶತಾವರಿ 100 ಗ್ರಾಂ, ಸರ್ಪಗಂಧ ಬೇರು 100 ಗ್ರಾಂ, 3 ನ್ನೂ ಸೇರಿಸಿ ಮಿಶ್ರ ಮಾಡಿಟ್ಟುಕೊಳ್ಳಿ. ರಾತ್ರಿ ಮಲಗುವಾಗ 1 ಚಮಚ ಪುಡಿ ಬಾಯಿಗೆ ಹಾಕಿಕೊಂಡು ಬಿಸಿನೀರು ಕುಡಿಯಿರಿ.

6.PCOD UÉ OµÀ¢ü ( Medication for PCOD )

ಕರಿಎಳ್ಳು 100 ಗ್ರಾಂ, ಹಿಪ್ಪಲಿ 50ಗ್ರಾಂ, ಒಣಶುಂಠಿ 50 ಗ್ರಾಂ, ಬೆಲ್ಲ 200 ಗ್ರಾಂ, ಇಂಗು 25 ಗ್ರಾಂ, ಎಳ್ಳನ್ನು ಹುರಿದು ಪುಡಿ ಮಾಡಿಟ್ಟುಕೊಂಡು ಬೇರೆಯದೆಲ್ಲಾ ಹಾಗೆಯೇ ಪುಡಿ ಮಾಡಿಟ್ಟುಕೊಳ್ಳಿ.

ಪ್ರತಿದಿನ 1 ಚಮಚ ಪುಡಿಯನ್ನು ತುಪ್ಪದಲ್ಲಿ ಕಲಸಿ ಸೇವಿಸಿ ಬಿಸಿ ಹಾಲು ಅಥವಾ ಬಿಸಿ ನೀರು ಕುಡಿಯಿರಿ (ಬೆಳ್ಳಗೆ. ಸಂಜೆ 21 ದಿನ )

7. ಸ್ಥೂಲಕಾಯರಿಗೆ ( For the obese )

ದಾಲ್ಚಿನಿ ಚಕ್ಕೆ, ಕರಿ ಬೇವಿನಸೊಪ್ಪನ್ನು ಒಣಗಿಸಿಟ್ಟುಕೊಳ್ಳಿ. ದಾಳಿಂಬೆ ಬೀಜ ( ಒಣಗಿಸಿಟ್ಟುಕೊಳ್ಳಿ ). ಶುದ್ಧ ಅರಿಶಿನ, ಕಪ್ಪು ಜೀ-ರಿಗೆ, ಅಗಸೆ ಬೀಜ, ಒಣಶುಂಠಿ, ಕಾಮಕಸ್ತೂರಿ ಬೀಜ ಎಲ್ಲವನ್ನು ನುಣ್ಣಗೆ ಪುಡಿ ಮಾಡಿ ಬೇರಸಿಟ್ಟುಕೊಳ್ಳಿ ಈ ಪುಡಿಯನ್ನು ಬೆಳಿಗ್ಗೆ ಬರೀ ಹೊಟ್ಟೆಗೆ ರಾತ್ರಿ ಮಲಗುವಾಗ 2 ಬಾರಿ 3 ತಿಂಗಳ ಕಾಲ ಸೇವನೆ ಮಾಡುತ್ತಾ ಬನ್ನಿ ಆರೋಗ್ಯವೂ ವೃದ್ಧಿಯಾಗುತ್ಥದೆ. ಕೊಬ್ಬಿನ ಅಂಶವೂ ಕರಗುತ್ತದೆ. ಈ ಸಮಯದಲ್ಲಿ ಬಿಸಿ ನೀರನ್ನು ಹೆಚ್ಚಾಗಿ ಸೇವಿಸಿ.

8. ಖಿನ್ನತೆಗೆ ( To depression )

ಬೆಟ್ಟದ ನೆಲ್ಲಿಕಾಯಿ ಚೂರ್ಣ, ಪನ್ನೀರು ಗುಲಾಬಿ ಹೂವಿನ ದಳ, ಒಂದೆಲಗ ಸೊಪ್ಪು ಹಾಗೂ ತುಳಸಿಯನ್ನು ನೆರಳಲ್ಲಿ ಒಣ-ಗಿಸಿಟ್ಟುಕೊಂಡು ಜೀರಿಗೆ ಹಾಗೂ ಹಿಪ್ಪಲಿ ಇವಿಷ್ಟನ್ನು ಚೆನ್ನಾಗಿ ಪುಡಿ ಮಾಡಿಕೊಂಡು ಮಿಶ್ರ ಮಾಡಿಟ್ಟುಕೊಳ್ಳಿ ಇದನ್ನು ಪ್ರತಿನಿತ್ಯ ರಾತ್ರಿ ಮಲಗುವಾಗ 1 ಚಮಚ ಸೇವಿಸಿ ಬಿಸಿ ಹಾಲು ಕುಡಿಯಿರಿ.

9.ಎಲ್ಲಾ ರೀತಿಯ ಆರೋಗ್ಯಕ್ಕೆ ( For all kinds of health )

ಧನಿಯಾ(ಕೊತ್ತಂಬರಿ ಬೀಜ ) ಜೀರಿಗೆ, ಓಮ (ಅಜವಾನ) 3 ನ್ನೂ ಸ್ವಲ್ಪವೇ ಹುರಿದು ಪುಡಿಮಾಡಿಟ್ಟುಕೊಳ್ಳಿ. ಪ್ರತಿನಿತ್ಯ ರಾತ್ರಿ ಮಲಗುವ ಮುನ್ನ 1 ಲೋಟ ಕುದಿಸಿದ ನೀರಿಗೆ 1 ಚಮಚ ಪುಡಿಯನ್ನು ಹಾಕಿ ಮುಚ್ಚಿಡಿ ಬೆಳಿಗ್ಗೆ ಎದ್ದ ತಕ್ಷಣ ಮೇಲಿನ ತಿಳಿ ನೀರನ್ನು ಕುಡಿಯಿರಿ. ಮತ್ತು ಪುನಃ ಇನ್ನೊಂದು ಲೋಟ ಬಿಸಿ ನೀರಿಗೆ 1 ಚಮಚ ಪುಡಿ ಹಾಕಿ ಮುಚ್ಚಿಡಿ. ಅದನ್ನು ರಾತ್ರಿ ಮಲಗುವ ಮುನ್ನ ಕುಡಿಯಿರಿ. ಈ ರೀತಿ ಮಾಡುವುದ-ರಿಂದ ವಾತ ಪಿತ್ತ, ಕಫ ಮೂರರ ಸಮತೋಲನ ಕಾಪಾಡುತ್ತದೆ. ಹೀಗಾಗಿ ಪರಿಪೂರ್ಣವಾದ ಆರೋಗ್ಯ ಉಂಟಾಗುತ್ತದೆ.


10. ಗ್ಯಾಸ್ಟ್ರಿಕ್ ( Gastric )

ಬೇಕಾಗುವ ಸಾಮಗ್ರಿಗಳು : 8-10 ನಿಂಬೆಹಣ್ಣು, ಜೀರಿಗೆ, ಓಮ, ಕಪ್ಪು ಉಪ್ಪು, ಅರಿಶಿನ ಪುಡಿ ಈ ಎಲ್ಲವನ್ನು ಬೇರೆ ಬೇರೆಯಾಗಿ ಪುಡಿಮಾಡಿಕೊಂಡು ಎಲ್ಲವನ್ನು ಬೆರಸಿಟ್ಟುಕೊಳ್ಳಿ. ನಿಂಬೆಹಣ್ಣನ್ನು ಮಧ್ಯಭಾಗ ಕತ್ತರಿಸಿ 2 ತುಂಡು ಮಾಡಿಕೊಳ್ಳಿ.

ಅದಕ್ಕೆ ಬೆರಸಿಟ್ಟ ಈ ಪುಡಿಯನ್ನು ಚೆನ್ನಾಗಿ ತುಂಬಿ ಒಂದು ಕಡ್ಡಿಯ ಸಹಾಯದಿಂದ ಚುಚ್ಚಿ ಚೆನ್ನಾಗಿ ಒಣ-ಗಿದ ನೋತರ ನಿಂಬೆಹಣ್ಣಿನ ಸಿಪ್ಪೆಯ ಸಹಿತ ನುಣ್ಣಗೆ ಪುಡಿಮಾಡಿ ಜರಡಿ ಹಿಡಿದು ತೆಗೆದಿಟ್ಟುಕೊಳ್ಳಿ.

ಇದನ್ನು ಪ್ರತಿನಿತ್ಯ ಆಹಾರಕ್ಕೆ ಮುಂಚೆ 1/4 ಚಮಚ ಪುಡಿಯನ್ನು ಬಾಯಿಗೆ ಹಾಕಿಕೊಂಡು ಸ್ವಲ್ಪ ಬಿಸಿ ನೀರನ್ನು ಕುಡಿಯಿರಿ. ಇದು ಗ್ಯಾಸ್ಟ್ರಿಕ್ ಸಮಸ್ಯೆ, ವಾಯುವಿನ ಉಪದ್ರವ, ಎಲ್ಲಕ್ಕೂ ಉಪಯೋಗವಾಗುತ್ತದೆ.

# ಸುತಗಟ್ಟಿ ಗ್ರಾಮ ಪಂಚಾಯಿತಿ ಅಧ್ಯಕ್ಷ- ಉಪಾಧ್ಯಕ್ಷ ಸ್ಥಾನ ಬಿಜೆಪಿ ಮಡಿಲಿಗೆ



**ನೇಸರಗಿ.**ಸಮೀಪದ ಸುತಗಟ್ಟಿ ಗ್ರಾಮ ಪಂಚಾಯತಿಗೆ ನಡೆದ ಚುನಾವಣೆಯಲ್ಲಿ ನೂತನ ಅಧ್ಯಕ್ಷರಾಗಿ ಶ್ರೀಮತಿ ಶಾಂತವ್ವ ಸೋಮಪ್ಪ ದೇಯನ್ನವರ ಹಾಗೂ ಉಪಾಧ್ಯಕ್ಷರಾಗಿ ಶ್ರೀಮತಿ ಪಾರ್ವತಿ ಪುಂಡಲೀಕ ಬಡಿಗೇರ ಇವರು ಮಾಜಿ ಶಾಸಕ ಹಾಗೂ ಬಿಡಿಸಿಸಿ ಬ್ಯಾಂಕ ನಿರ್ದೇಶಕರಾದ ಮಹಾಂತೇಶ ದೊಡ್ಡಗೌಡರ ಇವರ ನೇತೃತ್ವದಲ್ಲಿ ಅವಿರೋಧವಾಗಿ ಆಯ್ಕೆಯಾದರು.

ಈ ಸಂದರ್ಭದಲ್ಲಿ ಮುಖಂಡರಾದ ಮಹಾಂತೇಶ ಮೋಹರೆ, ಆಡಿವಪ್ಪ ಹೊಸಮನಿ, ಸದಸ್ಯರಾದ ಬಸವರಾಜ್ ತುಬಾಕಿ, ಸುವರ್ಣ ಜಮಾದಾರ,ರುದ್ರಪ್ಪ ರಾಮಕಿ, ಮಲ್ಲೇಶ ಕವಲದ, ನಿಂಗಪ್ಪ ಜನಗೊಂಡಣ್ಣವರ, ಭೀಮಶಿ ಕಲನಾಯ್ಕ, ಅನಸೂಯಾ ಬಾಳಿಗಟ್ಟಿ ಸೇರಿದಂತೆ ಗ್ರಾಮದ ಮುಖಂಡರು, ಸದಸ್ಯರು, ಪಿ ಡಿ ಓ ವನಜಾಕ್ಷಿ ಪಾಟೀಲ, ಗ್ರಾಮಸ್ಥರು ಉಪಸ್ಥಿತರಿದ್ದರು.

# ವಕ್ಪ ವಿರುದ್ಧ ಎಲ್ಲ ಸಮಾಜದ ರೈತರ ಪರ ಬಿಜೆಪಿ ಹೋರಾಟ- ಗ್ರಾಮೀಣ ಭಾಗದ ಕಾರ್ಯಕರ್ತರಿಂದ ಧರಣಿ

**ಬೆಳಗಾವಿ.** ಕರ್ನಾಟಕ ರಾಜ್ಯದಲ್ಲಿ ವಕ್ಪ ಎಲ್ಲ ಜನಾಂಗಳ ಅಸ್ತಿಯನ್ನು ಕಬಳಿಸುವ ತಂತ್ರಕ್ಕೆ ರಾಜ್ಯ ಕಾಂಗ್ರೆಸ್ ಸರ್ಕಾರ ಕುಮ್ಮಕ್ಕು ನೀಡುತ್ತಿದ್ದು ಈ ಒಂದು ವಕ್ಪ ರೈತ ವಿರೋಧಿ ಸಂಸ್ಥೆಗೆ ಕಿಮ್ಮತ್ತು ನೀಡದೆ ರೈತ–ರಿಗೆ ಅಭಯ ಹಸ್ತ ನೀಡಿ ನೀವು ಅಂಜದಿರಿ ನಿಮ್ಮ ಹೆಸರಿನ ಭೂಮಿ ಯಾವತ್ತಿಗೂ ನಿಮ್ಮದೇ ಆ ಅಸ್ತಿ ವಕ್ಪ ಅಸ್ತಿ ಅಲ್ಲ ಎಂದು ಸರ್ಕಾರದಿಂದ ರೈತರಿಗೆ ನೋಟೀಸ್ ರೈತರಿಗೆ ನೀಡಬೇಕು ನೀಡಬೇಕು ಇಲ್ಲದೆ ಹೋದರೆ ಕಾಂಗ್ರೆಸ್ ವಿರುದ್ಧ ನಿರಂತರ ಹೋರಾಟ ಮಾಡಲಾಗುವದೆಂದು ಮಾಜಿ ಶಾಸಕ ಸಂಜಯ ಪಾಟೀಲ ಹೇಳಿದರು.

ಅವರು ಶುಕ್ರವಾರದಂದು ಜಿಲ್ಲಾಧಿಕಾ–ರಿಗಳ ಆವರಣದಲ್ಲಿ ಬೆಳಗಾವಿ ಜಿಲ್ಲಾ ಬಿಜೆಪಿ ಆಯೋಜಿಸಿದ್ದ ನಮ್ಮ ಭೂಮಿ ನಮ್ಮ ಹಕ್ಕು ಎಂಬ ಘೋಷ ವಾಕ್ಯ ವಕ್ಪ ವಿರುದ್ಧ ಹಾಗೂ ರಾಜ್ಯ ಸರ್ಕಾರ ಮತ್ತು ಸಿ ಎಮ್ ಸಿದ್ದರಾಮಯ್ಯ, ಸಚಿವ ಜಮೀರ ಅಹ್ಮದ್ ವಿರುದ್ಧ ಧರಣಿ ಸತ್ಯಾಗ್ರಹ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಿತ್ತೂರು ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ ಮಾತನಾಡಿ ಮುಡಾ, ವಾಲ್ಮೀಕಿ ಹಗರಣ, ದಲಿತರ ಹಣ



ದುರ್ಬಳಕೆ, ವಕ್ಪ ರೈತ ವಿರೋಧಿ ಹಗರಣ ನಿರಂತರ ಎಲ್ಲ ಜನಾಂಗಗಳಿಗೆ ಅನ್ಯಾಯ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರ ಜನವಿರೋಧಿ ಅಗಿದ್ದು ಕೂಡಲೇ ಸಿ ಎಮ್ ಸಿದ್ರಾಮಯ್ಯ, ಸಚಿವ ಜಮೀರ ಅಹ್ಮದ ರಾಜೀನಾಮೆ ನೀಡಬೇಕು ಎಂದರು.

ಬಿಜೆಪಿ ಜಿಲ್ಲಾ ಅಧ್ಯಕ್ಷ ಸುಭಾಷ ಪಾಟೀಲ ಮಾತನಾಡಿ ನಿರಂತರವಾಗಿ ಒಂದು ಜನಾಂಗದ ಓಲೈಕೆಗೆ ಉಳಿದ ಜನಾಂಗಗಳಿಗೆ ಅನ್ಯಾಯ ಮಾಡುತ್ತಿರುವ ರಾಜ್ಯ ಸರ್ಕಾರ ಘೋರ ಅನ್ಯಾಯ ಮಾಡುತ್ತಿದ್ದು ಇದರ ವಿರುದ್ಧ ರಾಜ್ಯ ಬಿಜೆಪಿ, ಜಿಲ್ಲಾ ಬಿಜೆಪಿ ನಿರಂತರ ಹೋರಾಟ ಮಾಡಿ ರೈತರ, ಎಲ್ಲ ಜನಾಂಗಗಳ ಒಳಿತಿಗೆ ನಿರಂತರ ಹೋರಾಟ ಮಾಡಲಾಗುವವದು ಈ ವಕ್ಪ ಸಂಸ್ಥೆಗೆ ಕಡಿವಾಣ ಹಾಕಬೇಕು ರೈತರ, ಬಡವರ ಪರ ಕಾಂಗ್ರೆಸ್ ಕೆಲಸ ಮಾಡಬೇಕು ಇಲ್ಲದಿದ್ದರೆ ಉಗ್ರ ಹೋರಾಟ ಮಾಡಲಾಗುವವದೆಂದರು.

ರಾಜ್ಯ ಬಿಜೆಪಿ ಉಪಾಧ್ಯಕ್ಷ ಅನಿಲ ಬೆನಕೆ ಮಾತನಾಡಿ ಇಷ್ಟೆಲ್ಲ ಹಗರಣ, ಪ್ರಕರಣ, ಜನ ವಿರೋಧಿ ಧೋರಣೆ ನಡೆದು ಹಗರಣಗಳ ಸರ್ಕಾರ ಆಗಿದ್ದರು ಸಿ ಎಮ್ ಸಿದ್ರಾಮಯ್ಯ ಮತ್ತು ಸಚಿವ ಜಮೀರ ಅಹ್ಮದ್ ರಾಜೀನಾಮೆ ಕೊಡದೆ ಬಂಡತನ ತೋರಿಸುತ್ತಿದ್ದಾರೆ ಎಂದರು.

ಈ ಪ್ರತಿಭಟನೆ ಧರಣಿಯಲ್ಲಿ ಮಾಜಿ ಶಾಸಕರಾದ ಜಗದೀಶ ಮೆಟಗುಡ, ಅರವಿಂದ ಪಾಟೀಲ, ಮಲ್ಲಣ್ಣ ಯಾದವಾಡ, ಮಹಾನಗರ ಅಧ್ಯಕ್ಷ ಗೀತಾ ಸುತಾರ, ಬಿಜೆಪಿ ರಾಜ್ಯ ಮಾಧ್ಯಮ ಸಲಹಾ ಸಮಿತಿ ಸದಸ್ಯ ಎಫ್ ಎಸ್ ಸಿದ್ದನಗೌಡರ, ಡಾ ಸೋನಾಲಿ ಸರ್ಬೋಲಿತ , ಉಜ್ವಲ ಬಣಜವಾಡಿ , ಜಿಲ್ಲಾ ಮಾಧ್ಯಮ ಪ್ರಮುಖ ಸಚಿನ ಕಡಿ, ಸುಭಾಷ ತುರಮರಿ , ಸಂತೋಷ ಹಡಪದ, ಎಲ್ಲ ಬಿಜೆಪಿ ತಾಲೂಕಾ ಅಧ್ಯಕ್ಷರು, ಪದಾಧಿಕಾರಿಗಳು, ಜಿಲ್ಲಾ ಪಧಧಿಕಾರಿಗಳು, ಬೆಳಗಾವಿ ಜಿಲ್ಲೆಯ ಬಿಜೆಪಿ ಕಾರ್ಯಕರ್ತರು ಉಪಸ್ಥಿತ–ರಿದ್ದರು.ಈ ಒಂದು ಪ್ರತಿಭಟನೆ ಧರಣಿಯಲ್ಲಿ ಗ್ರಾಮೀಣ ಭಾಗದ ಬಿಜೆಪಿ ಕಾರ್ಯಕರ್ತರ ವಿನೂತನ ಸರ್ಕಾರದ ವಿರೋಧಿ ಘೋಷಣೆಗಳು ಗಮನ ಸೆಳೆದವು.

# ದೇಶದ ಅಭಿವೃದ್ಧಿಗೆ ಕಾರ್ಮಿಕರ ಕೊಡುಗೆ ಅತ್ಯಂತ ಮಹತ್ವ

**ಇಂಡಿ :** ದೇಶದ ಅಭಿವೃದ್ಧಿಗೆ ಕಾರ್ಮಿಕರ ಕೊಡುಗೆ ಅತ್ಯಂತ ಮಹತ್ವದಾಗಿದ್ದು ಅವರು ಕೆಲಸ ಮಾಡದಿದ್ದರೆ ದೇಶದ ಅಭಿವೃದ್ದಿಯ ಮೇಲೆ ವ್ಯತರಿಕ್ತ ಪರಿಣಾಮ ಉಂಟಾಗುತ್ತದೆ ಎಂದು ಗೌರವಾನ್ವಿತ ಹಿರಿಯ ಶ್ರೇಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಶ್ರೀ ಕೋಟೆಪ್ಪ ಕಾಂಬಳೆ ಅಭಿಪ್ರಾಯ ವ್ಯಕ್ತ ಪಡಿಸಿದರು.

ಪಟ್ಟಣದ ಕ್ಷೇತ್ರಶಿಕ್ಷಣಾಧಿಕಾ–ರಿಗಳ ಗುರುಭವನ ಸಬಾಭವನದಲ್ಲಿ ಹಮ್ಮಿಕೊಂಡ ಕಾರ್ಮಿಕರಿಗೆ ಸಂಬಂದಿಸಿದ ವಿವಿಧ ಕಾಯ್ದೆಗಳು ಹಾಗೂ ಸರಕಾರಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನದ ಕುರಿತು ಏರ್ಪಡಿಸಿದ ತಾಲೂಕಾ ಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಜಗತ್ತಿನ ಎಲ್ಲ ರಾಷ್ಟ್ರಗಳು ಕಾರ್ಮಿಕರ ಸುರಕ್ಷತೆ ಕುರಿತು ಕಾಯ್ದೆ ರೂಪಿಸಿವೆ. ದಿನನಿತ್ಯದಲ್ಲಿ ಸಾಮಾನ್ಯ ಜನರಿಗೆ



ಕಾನೂನುಗಳ ಬಗ್ಗೆ ಮಾಹಿತಿ ನೀಡುವದು ನಮ್ಮ ಕರ್ತವ್ಯ. ಕೆಲಸ ಕೀಳು ಎಂದು ತಿಳಿದುಕೊಳ್ಳದೆ ಶ್ರದ್ದೆಯಿಂದ ಮತ್ತು ಸುರಕ್ಷತೆಯಿಂದ ಕೆಲಸ ಮಾಡಲು ಹೆಚ್ಚಿನ ಒತ್ತು ನೀಡಬೇಕು ಎಂದರು.

ಕಾರ್ಮಿಕ ನಿರೀಕ್ಷಕಿ ಜಗದೇವಿ ಸಜ್ಜನ ಮಾತನಾಡಿ ಇಲಾಖೆಯಿಂದ ಕಟ್ಟಡ ಕಾರ್ಮಿಕರಿಗೆ ಸೌಲಭ್ಯಗಳು ಇವೆ. ಪಿಂಚಣಿ ಸೌಲಭ್ಯ, ದುರ್ಬಲತೆ ಪಿಂಚಣಿ, ಟೂಲ್ ಕಿಟ್ ಸೌಲಭ್ಯ, ಹೆರಿಗೆ ಸೌಲಭ್ಯ, ಅಂತ್ಯಕ್ರಿಯೆ ವೆಚ್ಚ, ಶೈಕ್ಷಣಿಕ ಸಹಾಯಧನ,ವೈದ್ಯಕೀಯ ಸಹಾಯಧನ, ಅಪಘಾತ ಪರಿಹಾರ, ಮದುವೆ ಧನ ಸಹಾಯ, ತಾಯಿ ಮತ್ತು ಸಹಾಯ ಹಸ್ತ ಎನ್ನುವಂತ ವಿವಿಧ ಸೌಲಭ್ಯ ಸಿಗುತ್ತವೆ. ಕಾರ್ಮಿಕರು ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಕಾರ್ಮಿಕ ಅಧಿಕಾರಿಗಳು ಉಮಾಶ್ರೀ ಕೋಳಿ, ಕಾರ್ಮಿಕ ನಿರೀಕ್ಷಕ ದತ್ತು ದೇವರಮನಿ, ಕಾರ್ಮಿಕ ಸಂಘದ ಅಧ್ಯಕ್ಷ ಎಲ್.ಡಿ.ನದಾಫ ಮಾತನಾಡಿದರು.

ದಿವಾನಿ ನ್ಯಾಯಾಧೀಶರು ಮತ್ತು ಪ್ರಥ–'ಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಸುನೀಲಕುಮಾರ, ಕಾರ್ಮಿಕ ಇಲಾಖೆ ಯೋಜನಾ ನಿರ್ದೇಶಕಿ ನೀಲಮ್ಮ ಖೇಡಗಿ , ಗ್ರೇಡ್ 2 ತಹಸೀಲ್ದಾರ ಧನಪಾಲಶೆಟ್ಟಿ ದೇವೂರ, ವಕೀಲರ ಸಂಘದ ಅಧ್ಯಕ್ಷ ಎಸ್.ಆರ್. ಬಿರಾದಾರ, ಮಲ್ಲಿಕಾರ್ಜುನ ಬಗಲಿ, ಸುಭಾಸಚಂದ್ರ ಟೋನಿ, ರೋಹಿತ ಗೊಂದಳಿ,ಪ್ರಶಾಂತ ಅರ್ಜನಾಳ ವೇದಿಕೆ ಮೇಲಿದ್ದರು. ಸಿದ್ದು ಹಾವಳಗಿ ಸೇರಿದಂತೆ ಹಲವಾರು ಕಾರ್ಮಿಕರು ಉಪಸ್ಥಿತರಿದ್ದರು.

# ಡಿ 12 ರಂದು ಮೆಗಾ ಲೋಕ ಅದಾಲತ ಕಾರ್ಯಕ್ರಮ

**ಇಂಡಿ :** ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಸ್ಥಳೀಯ ನ್ಯಾಯಾಲಯದಲ್ಲಿ ಡಿ 12 ರಂದು ಬೆಳಗ್ಗೆ 10.30 ರಿಂದ ಸಂಜೆ 5 ರ ವರೆಗೆ ಮೆಗಾ ಲೋಕ ಅದಾಲತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹಿರಿಯ ಶ್ರೇಣಿ ನ್ಯಾಯಾಧೀಶರು ಮತ್ತು ಪ್ರಥ–'ಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಶ್ರೀ ಕೋಟೆಪ್ಪ ಕಾಂಬಳೆ ಹೇಳಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ಕಾನೂನು ಪ್ರಕಾರ ರಾಜಿ ಆಗಬಹುದಾದ ಮತ್ತು ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥ್ಯ ಪಡಿಸಿ ಇಬ್ಬರಿಗೂ ನ್ಯಾಯ ಒದಗಿಸುವ ಉದ್ದೇಶದಿಂದ ಲೋಕ ಅದಾಲತ ಆಯೋಜಿಸಲಾಗಿದೆ. ಇದು ಈ ವರ್ಷದ ಕೊನೆಯ ಲೋಕ ಅದಾಲತ ಎಂದರು.

ಕಳೆದ ಬಾರಿ ನಡೆದ ಲೋಕ ಅದಾಲತ್‌ನಲ್ಲಿ 1491 ಪ್ರಕರಣಗಳು ಇತ್ಯರ್ಥ ಗೊಂಡಿವೆ. ಮತ್ತು 2 ಕೋಟಿ 52 ಲಕ್ಷ 45511 ರೂ ಬ್ಯಾಂಕು, ಪುರಸಭೆ, ಗ್ರಾ.ಪಂ ಕರವಸೂಲಾತಿ, ಫೈನಾನ್ಸ, ಬಡ್ಡಿ ವ್ಯವಹಾರ ಸೇರಿದಂತೆ ಇಲಾಖೆಗಳಿಗೆ ಸಂದಾಯವಾಗಬಹುದಾದ ಹಣ ಸಂದಾಯವಾಗಿದೆ ಎಂದರು. ಈ ಬಾರಿ ಅದಕ್ಕೂ ಹೆಚ್ಚು ಪ್ರಕರಣಗಳನ್ನು ರಾಜಿ ಮಾಡುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

ಈ ಅದಾಲತ್ ನಲ್ಲಿ ಹೊಲ, ಮನೆ, ಬ್ಯಾಂಕು, ಅಪಘಾತ, ಚೆಕ್ ಬೌನ್ಸ, ಜನನ, ಸಹಕಾರಿ, ಸಣ್ಣ ಪುಟ್ಟ ಗಲಾಟೆ, ಆರೋಪ ಸೇರಿದಂತೆ ಇನ್ನಿತರ ಪ್ರಕರಣಗಳನ್ನು ವಿಚಾರಣೆ ಮಾಡುವದರ ಮೂಲಕ ಅಂದೇ ಅಂತಿಮ



ನಿರ್ಣಯದ ಮೂಲಕ ರಾಜಿ ಮಾಡಲಾಗುತ್ತದೆ ಎಂದು ಅವರು ಹೇಳಿದರು.

ಹಲವು ವರ್ಷಗಳ ಕಾಲ ಕಾನೂನು ಹೋರಾಟ ಮಾಡಿ ಒಬ್ಬರು ಗೆಲ್ಲುತ್ತಾರೆ, ಮತ್ತೊಬ್ಬರಿಗೆ ಸೋಲಾಗುತ್ತದೆ. ಆದರೆ ಅದಾಲತನಲ್ಲಿ ಇಬ್ಬರಿಗೂ ತೃಪ್ತಿಯಾಗುವ ತೀರ್ಮಾನ ಮಾಡಲಾಗುತ್ತದೆ. ಲೋಕ್ ಅದಾಲತನಲ್ಲಿ ರಾಜಿಯಾದ ಪ್ರಕರಣಗಳ ಆದೇಶ ಅಂತಿಮವಾಗಿರುತ್ತದೆ.

ಕಡಿಮೆ ಖರ್ಚಿನಲ್ಲಿ ಶೀಘ್ರ ಇತ್ಯರ್ಥ್ಯ ಪಡಿಸಿಕೊಳ್ಳಲು ಅವಕಾಶವಿದೆ.

ನೇರವಾಗಿಯೂ ಭಾಗವಹಿಸಬಹುದು. ಇಬ್ಬ–ರಿಗೂ ತೃಪ್ತಿಯಾದರೆ ಮಾತ್ರ ಇತ್ಯರ್ಥ ಮಾಡುತ್ತೇವೆ. ಮತ್ತೆ ಮೇಲ್ಮನವಿಗೆ ಅವಕಾಶ ಇರುವದಿಲ್ಲ. ಕೌಟುಂಬಿಕ ಕಲಹಗಳನ್ನು ರಾಜಿ ಸಂಧನದ ಮೂಲಕ ಇತ್ಯಥ–'ರ್ ಪಡಿಸಲು ಪ್ರಯತ್ನಿಸಲಾಗುವದು ಎಂದು ಕೋಟೆಪ್ಪ ಕಾಂಬಳೆ ಹೇಳಿದರು. ದಿವಾನಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಸುನೀಲಕುಮಾರ ಉಪಸ್ಥಿತರಿದ್ದರು.

# ವಿಜೃಂಬಣೆಯಿಂದ ಜರುಗಿದ ಶ್ರೀಮಹಾಲಕ್ಷ್ಮೀದೇವಿ ಜಾತ್ರೆ

**ತಾಳಿಕೋಟೆ,** ಪಟ್ಟಣದ ಡೋಣಿ ರಾಜ ಗುಡಿ ಹತ್ತಿರದ ಶ್ರೀ ಕೋಟೆಗೋಡೆ ಮಹಾಲಕ್ಷ್ಮೀ ದೇವಿಯ ಜಾತ್ರಾ ಮಹೋತ್ಸವವು ಶುಕ್ರವಾರರಂದು 13ನೇ ವರ್ಷದ ಜಾತ್ರಾ ಮಹೋತ್ಸವವು ವಿಜೃಂಬಣೆಯಿಂದ ಜರುಗಿತು.

ಜಾತ್ರಾ ಮಹೋತ್ಸವ ಅಂಗವಾಗಿ ಶನಿವಾರರಂದು ಸಲ್ಲುವ ಧನು ಲಗ್ನದಲ್ಲಿ ಅಶ್ವತನಾರಾಯಣ ವೃಕ್ಷದ ವಿವಾಹ ಕಾರ್ಯಕ್ರಮವು ವೇ.ಶ್ರೀಧರ ಗ್ರಾಮಪುರೋಹಿತ ಹಾಗೂ ಶಿಷ್ಯವೃಂದದವರಿಂದ ನೇರವೇರಿತು.

ದಿ.22 ರಂದು ಬೆಳಿಗ್ಗೆ 8 ಗಂಟೆಗೆ ಗಂಗಸ್ಥಳ, ಗೃಹಯಜ್ಞ, ಶ್ರೀ ಸೂಕ್ತಹೋಮ ಜರುಗಿದವಲ್ಲದೇ ಮಧ್ಯಾಹ್ನ 1 ಗಂಟೆಯಿಂದ 3 ಗಂಟೆಯವರೆಗೆ ತೀರ್ಥಪ್ರಸಾದ ಜರುಗಿ–ತು. ಸಂಜೆ 6 ಗಂಟೆಗೆ ಸುಮಂಗಲೆಯರಿಂದ ಲಕ್ಷ್ಮೀ ಶೋಭಾನ ಹಾಡು ಹಾಗೂ ಉಡಿ ತುಂಬುವ ಕಾರ್ಯಕ್ರಮ ಜರುಗಿದವು. ಜಾತ್ರೋತ್ಸವ ಅಂಗವಾಗಿ ಗಂಗಸ್ಥಳದೊಂದಿಗೆ ಶ್ರೀ ಲಕ್ಷ್ಮೀದೇವಿಯ ಭಾವಚಿತ್ರದ ಹಾಗೂ ಸುಮಂಗಲೆಯರ ಕುಂಭ ಮೇಳ ಫಲ್ಲಕ್ಕಿ ಉತ್ಸವದ ಮೇರವಣಿಗೆಯು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜರುಗಿತು.

ಈ ಜಾತ್ರೋತ್ಸವದ ನೇತೃತ್ವವನ್ನು ಶ್ರೀ ಕೋಟೆಗೋಡೆ ಮಹಾಲಕ್ಷ್ಮೀ ಉತ್ಸವ



ಸಮಿತಿಯ ಅಧ್ಯಕ್ಷ ತಿರುಪತಿ ಹಂಚಾಟೆ, ಅಶೋಕ ಪತ್ತಾರ, ನಾಗೇಶ ಹಂಚಾಟೆ, ರಾಜು ಕಮ್ಮಾರ, ಅಶೋಕ ಪತ್ತಾರ, ದಶರಥ ಕಂಡೇಕರ, ಶ್ರೀಕಾಂತ ಕುಲಕರ್ಣಿ, ಶರಣಗೌಡ ಪಾಟೀಲ, ಅಪ್ಪುಗೌಡ ಪಾಟೀಲ, ತುಳಸಿರಾಮ ಚವ್ಹಾಣ, ಹಣಮೇಶ ಕುಲಕರ್ಣಿ, ರಾಘವೇಂದ್ರ ಎಸ್, ಪ್ರಭುಗೌಡ, ಮೊದಲಾದವರು ವಹಿಸಿದ್ದರು.

# ಪ್ರತಿಭಾ ಕಾರಂಜಿಯಲ್ಲಿ ಜಿಲ್ಲಾಮಟ್ಟಕ್ಕೆ ಆಯ್ಕೆ

**ತಾಳಿಕೋಟೆ,** ಪಟ್ಟಣದ ಶ್ರೀ ಶಿವಯೋಗಿ ಸಂಗಮಾರ್ಯ ವಿದ್ಯಾ ಸಂಸ್ಥೆಯ ಬ್ರಹ್ಮಲಿಂಗೇಶ್ವರ ಪ್ರಾಥಮಿಕ ಶಾಲೆಯ ವಿಧ್ಯಾರ್ಥಿನಿ ಕುಮಾರಿ ನಂದಿನಿ ಕೊಡೇಕಲ್ಲ ಇವಳು ಮುದ್ದೇಬಿಹಾಳದಲ್ಲಿ ನಡೆದ ತಾಲೂಕಾ ಮಟ್ಟದ ಪ್ರತಿಭಾ ಕಾರಂಜಿಯ ಭಕ್ತಿ ಗೀತೆ ಸ್ಪರ್ದೆಯಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದ್ದಾಳೆ.

ವಿದ್ಯಾರ್ಥಿನಿಯ ಸಾಧನೆಗೆ ಸಂಸ್ಥೆಯ ಅಧ್ಯಕ್ಷರಾದ ಎಚ್.ಎಸ್.ಪಾಟೀಲ, ಕಾರ್ಯದರ್ಶಿ ಸಚೀನ ಪಾಟೀಲ, ಆಡಳಿತಾಧಿಕಾರಿ ಕಿರಣ ಪಾಟೀಲ, ಮುಖ್ಯಗುರುಗಳಾದ ಜಗದೀಶ ಕೊಣ್ಣೂರ ಅಲ್ಲದೇ ಸಂಸ್ಥೆಯ ಸಿಬ್ಬಂದಿಗಳು ಶಿಕ್ಷಕವೃಂದದವರು ಅಭಿನಂದಿಸಿದ್ದಾರೆ.



# ಸರ್ವ ಸಮಾಜದ ಮುಖಂಡರ ಸಭೆಯಲ್ಲಿ ತಿರ್ಮಾನ – ತೆರುವಿಗೆ 3 ದಿನ ಗಡವು

# ರಸ್ತೆ ಮೇಲಿನ ಧರಣಿ ತೆರುವುಗೊಳಿಸದಿದ್ದರೆ ಹೋರಾಟ ಅನಿವಾರ್ಯ

**ತಾಳಿಕೋಟೆ,** ಪಟ್ಟಣದ ಸೌಂದರ್ಯಕರಣದ ಅಭಿವೃದ್ದಿ ಮತ್ತು ದೃಷ್ಠಿಯಿಂದ ಪುರಸಭೆಯ ವತಿಯಿಂದ ಕಳೆದ ದಿ.12 ರಿಂದ 14 ರವರೆಗೆ ನಡೆಸಿದ ಪುಟ್ ಪಾತ್ ಮತ್ತು ಸಾರ್ವಜನಿಕ ಸ್ಥಳ ಅತೀಕ್ರಮಿಸಿಕೊಂಡ ಡಬ್ಬಾ ಅಂಗಡಿ, ಗೂಡಂಗಡಿಗಳ ತೆರವು ಕಾರ್ಯಚರಣೆ ವಿರೋಧಿಸಿ ಶ್ರೀ ಹರಳಯ್ಯ(ಸಮಗಾರ) ಸಮಾಜದವರು ರಸ್ತೆಯ ಮೇಲೆ ನಡೆಸುತ್ತಿರುವ ಧರಣಿ ಸತ್ಯಾಗ್ರಹವನ್ನು ಕೂಡಲೇ ತೆರವುಗೊಳಿಸದಿದ್ದರೆ ಪಟ್ಟಣದ ಎಲ್ಲ ನಾಗರಿಕರ ಸಹಕಾರದೊಂದಿಗೆ ಹೋರಾಟದ ದಾರಿ ಹಿಡಿಯಬೇಕಾಗುತ್ತದೆ ಎಂದು ಪುರಸಭಾ ಸದಸ್ಯ ಮುತ್ತಣ್ಣ ಚಮಲಾಪೂರ ಅವರು ಹೇಳಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಶುಕ್ರವಾರರಂದು ಅನಧಿಕೃತ ಧರಣಿ ಸತ್ಯಾಗ್ರಹ ತೆರವು ಕುರಿತು ಹಾಗೂ ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಎಸ್.ಬಿ.ಕಟ್ಟಿಮನಿ ಅವರನ್ನು ಯೂ ಟ್ಯೂಬ್ ಚೇನಲ್ ಹೆಸ–ರಿನ ಮೇಲೆ ಸಾಮಾಜಿಕ ಜಾಲತಾಣಗಳಲ್ಲಿ ತೇಜೋವಧೆ ಮಾಡಿದವರ ಮೇಲೆ ಕ್ರಮ ಜರುಗಿಸಲು ಒತ್ತಾಯಿಸಿ ಕರೆಯಲಾದ ಸರ್ವ ಸಮಾಜ ಬಾಂದವರ, ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು ಪಟ್ಟಣದ ಅಭಿವೃದ್ದಿ ದೃಷ್ಠಿಯಿಂದ ಪುರಸಭೆಯ ಸರ್ವ ಸದಸ್ಯರು ಅತೀಕ್ರಮಣ ತೆರವು ಕಾರ್ಯಚರಣೆಗೆ ಠರಾವು ಪಾಸು ಮಾಡಿದ್ದಾಗಿದೆ ಅದರಂತೆ ಹಿರಿಯ ಅಧಿಕಾರಿಗಳ ಮಾರ್ಗದರ್ಶನದಂತೆ ಪುರಸಭೆ ಮುಖ್ಯಾಧಿಕಾರಿಗಳು ತೆರವು ಕಾರ್ಯಚರಣೆ ನಡೆಸಿದ್ದಾರೆ ಈ ವಿಷಯಕ್ಕೆ ಸಂಬಂದಿಸಿ ಸಾಕಷ್ಟು ಡಬ್ಬಾ ಅಂಗಡಿಕಾರರು ಈ ತೆರವು ಕಾರ್ಯಚರಣೆಗೆ ಸಹಕಾರವನ್ನು ನೀಡಿದ್ದಾರೆ ಆದರೆ ಬಸ್ ನಿಲ್ದಾಣದ ಮುಂಭಾಗದ ಶ್ರೀ ಹರಳಯ್ಯ(ಸಮಗಾರ) ಸಮಾಜದವರು ತೆರವು ಕಾರ್ಯಚರಣೆ ಮುಕ್ತಾಯ ಹಂತದಲ್ಲಿದ್ದಾಗ ನ್ಯಾಯಾಲಯದ ತಡೆಯಾಜ್ಞೆ ತಂದುಕೊಟ್ಟಿದ್ದಾರೆ ಆ ಹಿನ್ನೇಲೆ ಮುಖ್ಯಾಧಿಕಾ–ರಿಗಳು ಸ್ಥಳದಿಂದ ಕಾರ್ಯಚರಣೆ ಸ್ಥಗಿತಗೊಳಿಸಿ ತೆರಳಿದ್ದಾರೆ ನ್ಯಾಯಾಲಯದ ತಡೆಯಾಜ್ಞೆಯನ್ನೇ ಬಂಡವಾಳವನ್ನಾಗಿ ಇಟ್ಟುಕೊಂಡು ಸಾರ್ವಜನಿಕ ಮುಖ್ಯರಸ್ತೆಯನ್ನು ಬಂದ್ ಮಾಡಿ ಯಾವುದೇ



ಅನುಮತಿ ಇಲ್ಲದೇ ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆಸುತ್ತಿರುವದು ಸರಿಯಲ್ಲಾ ಕೂಡಲೇ ಅಲ್ಲಿಂದ ಧರಣಿ ನಿರತರನ್ನು ತೆರವುಗೊಳಿಸುವಂತಹ ಕಾರ್ಯ ಪೊಲೀಸ್ ಅಧಿಕಾರಿಗಳು ಮಾಡಬೇಕೆಂದು 3 ದಿನ ಗಡವು ನೀಡಿ ಒತ್ತಾಯಿಸಿದರು.

ಇನ್ನೋರ್ವ ರಡ್ಡಿ ಸಮಾಜದ ಮುಖಂಡ ಪುರಸಭಾ ಮಾಜಿ ಸದಸ್ಯ ಪ್ರಭುಗೌಡ ಮದರಕಲ್ಲ ಅವರು ಮಾತನಾಡಿ ಪಟ್ಟಣವು ಸೌಂದರ್ಯಕರಣವಾಗಿ ಕಾಣಬೇಕಾದರೆ ಮತ್ತು ಅಪಘಾತ ರಹೀತವಾಗಿ ಜನ ಸಂಚಾರ ಇರಬೇಕಾದರೆ ಅತಿಕ್ರಮಣ ತೆರವು ಕಾರ್ಯಾಚರಣೆ ಅವಶ್ಯವಾಗಿತ್ತು ಈ ಕೆಲಸ ಪುರಸಭೆ ಮುಖ್ಯಾಧಿಕಾರಿಗಳು ಮಾಡಿದ್ದಾರೆ ಈ ಅತೀಕ್ರಮಣ ತೆರವು ಕಾರ್ಯಚರಣೆಯನ್ನು ಅರ್ದಕ್ಕೆ ನಿಲ್ಲಿಸಿದ್ದನ್ನು ಮುಂದುವರೆಸಲು ಜಿಲ್ಲಾಧಿಕಾರಿಗಳಿಗೆ ಒತ್ತಾಯಿಸಲು ನವಂಬರ್ 17 ರಂದು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯನ್ನು ನಡೆಸಿ ಎಲ್ಲ ಮುಖಂಡರು ಒಕ್ಕೂರಲಿನಿಂದ ಒತ್ತಾಯಿಸಲಾಗಿತ್ತು ಆದರೆ ಧರಣಿ ನಿರತರು ಜಾತಿಗೆ ತೆಗೆದುಕೊಂಡು ಹೋಗುತ್ತಿದ್ದು ಸವರ್ಣಿಯರ ಜೊತೆಗೂಡಿ ಕೆಲವು ದಲಿತರು ದಲಿತರ ಮೇಲೆಯೇ ದೌರ್ಜನ್ಯ ಮಾಡುತ್ತಿದ್ದಾರೆ ಎಂದು ಹೇಳಿ ಪಟ್ಟಣದಲ್ಲಿ ಕೋಮು ಸೌಹಾರ್ದತೆ ಹದಗೆಡಿಸುವ ಕೆಲಸ ಕೈ ಹಾಕಿದ್ದಾರೆ ಈ ತೆರವು ಕಾರ್ಯಚರಣೆಯಲ್ಲಿ ಎಲ್ಲ ಜಾತಿ ಜನಾಂಗದವ–ರಿದ್ದಾರೆ ಧರಣಿಕಾರರು ತಮ್ಮ ಹಕ್ಕಿಗಾಗಿ ಪ್ರತಿಭಟನೆ, ಧರಣಿ ನಡೆಸಲಿ ಬೇಡ ಅನ್ನುವದಿಲ್ಲಾ ಮುಖ್ಯ ರಸ್ತೆ ಒಳಗೊಂಡು ನ್ಯಾಯಾಲಯದ ತಡೆಯಾಜ್ಞೆ ಇದ್ದ ಸ್ಥಳದಲ್ಲಿ ಧರಣಿ ನಡೆಸುತ್ತಿರುವದು ಕಾನೂನಿಗೆ ವಿರೂದ್ದವಾದುದ್ದಾಗಿದೆ ಕೂಡಲೇ ಪೊಲೀಸ್ ಅಧಿಕಾರಿಗಳು ರಸ್ತೆಯ ಮೇಲಿನ ಧರಣಿ ನಿರತರನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡಬೇಕೆಂದರು.

ಇನ್ನೋರ್ವ ರಜಪೂತ ಸಮಾಜದ ಮುಖಂಡ ಸುರೇಶ ಹಜೇರಿ, ಹಾಗೂ ಹಿರಿಯ ಮುಖಂಡ ಕಾಶಿನಾಥ ಮುರಾಳ ಅವರು ಮಾತನಾಡಿ ಪಟ್ಟಣದ ಅಭಿವೃದ್ದಿಗೆ ಸೌಂದರ್ಯಕರಣಕ್ಕೆ ಎಲ್ಲರೂ ಸಹಕ–ರಿಸಿದ್ದಾರೆ ಆದರೆ ಬಸ್ ನಿಲ್ದಾಣದ ಮುಂಭಾಗದ ಡಬ್ಬಾ ಅಂಗಡಿಕಾರರು ಮೊಂಡುತನವನ್ನು ಮುಂದುವರೆಸಿ ಧರಣಿ ನಡೆಸಿರುವದು ಸರಿಯಲ್ಲಾ ಮತ್ತು ಪಟ್ಟಣದ ಯಾವುದೇ ಹಿರಿಯ ನಾಗ–ರಿಕರ ಹೆಸರಿಗೆ ತೇಜೋವಧೆಯಾದರೆ ನಾವ್ಯಾರು ಸುಮ್ಮನೇ ಕುಡುವದಿಲ್ಲಾ ಎಸ್.ಬಿ.ಕಟ್ಟಿಮನಿ ಅವರ ಹೆಸರು ಕೆಡಿಸಲು ಮುಂದಾದವರ ಮೇಲೆ ಸಿಸ್ತು ಕ್ರಮವಾಗಬೇಕೆಂದು ಒತ್ತಾಯಿಸಿದ ಅವರು ರಸ್ತೆಯ ಮೇಲೆ ಧರಣಿಗೆ ಎಲ್ಲಯೂ ಅವಕಾಶವಿಲ್ಲಾ ಕೂಡಲೇ ತೆರವುಗೊಳಿಸುವಂತಹ ಕೆಲಸ ತಹಶಿಲ್ದಾರರ ಮತ್ತು ಪೊಲೀಸ್ ಇಲಾಖೆಯವರು ಮಾಡಬೇಕೆಂದು ಒತ್ತಾಯಿಸಿದರು. ಇನ್ನೋರ್ವ ಹಿರಿಯ ಮುಖಂಡ ಎಂ.ಎಸ್.ಸರಶೆಟ್ಟಿ, ಹಾಗೂ ಕಾಶಿರಾಯ ಮೋಹಿತೆ ಅವರು ಮಾತನಾಡಿ ಶಾಂತಿಯುತವಾದ ಹೆಸರಿಗೆ ಭಾಜನವಾದ ತಾಳಿಕೋಟೆ ನಗರದಲ್ಲಿ ಕಲಹ ಉದ್ಭವಿಸುವಂತವ–ರಿಗೆ ಯಾವಾಗಲು ಅವಕಾಶ ನೀಡುವದಿಲ್ಲಾ ಎಸ್.ಬಿ.ಕಟ್ಟಿಮನಿ ಅವರ ಹೆಸರನ್ನು ತೇಜೋವಧೆ ಮಾಡಿದವರಿಗೆ ಕಠಿಣ ಶಿಕ್ಷೆಯಾಗಬೇಕು ಈ ನಿಟ್ಟಿನಲ್ಲಿ ಪೊಲೀಸ್‌ರು ಕ್ರಮ ವಹಿಸಬೇಕೆಂದರು.

ಪುರಸಭಾ ಸದಸ್ಯರುಗಳಾದ ಪರಶುರಾಮ ತಂಗಡಗಿ, ಅಣ್ಣಾಜಿ ಜಗತಾಪ ಅವರು ಮಾತನಾಡಿ ಅತಿಕ್ರಮಣ ತೆರವು ಕಾರ್ಯಾಚರಣೆಗೆ ಎಲ್ಲರೂ ಸಹಕರಿಸಿದ್ದಾರೆ,ಇದರಲ್ಲಿ ಯಾವ ಕೆಟ್ಟ ಉದ್ದೇಶವೂ ಇಲ್ಲಾ ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿಗಳಾದ ಕಟ್ಟಿಮನಿಯವರು ಕೇವಲ ದಲಿತ ಸಮಾಜದ ಮುಖಂಡರಲ್ಲ ಪಟ್ಟಣದ ಎಲ್ಲ ಸಮಾಜದವರಿಗೂ ಅವರ ಬಗ್ಗೆ ಗೌರವ ಇದೆ ಅವರ ಹೆಸರಿಗೆ ಚೂತಿತರುವಂತಹ ಕೆಲಸ ಮಾಡಿದ್ದನ್ನು ಖಂಡಿಸುತ್ತೇವೆಂದ ಅವರು ಪಟ್ಟಣದ ನಾಗರಿಕರ ಹಿತದೃಷ್ಠಿಯಿಂದ ಸರ್ವ ಸದಸ್ಯರ ಸಹಮತದ ಮೇರೆಗೆ ತೆರವು ಕಾರ್ಯಚರಣೆ ನಡೆದಿದೆ ಯಾರನ್ನೂ ಟಾರ್ಗೇಟ್ ಮಾಡುವ ಉದ್ದೇಶ ಯಾರಲ್ಲೂ ಇಲ್ಲಾ ಊರಿನ ಒಳ್ಳೆಯ ದೃಷ್ಠಿಕೋನದ ಮೇಲೆ ತೆರವು ಕಾರ್ಯಚರಣೆ ನಡೆದಿದೆ ಈ ಕಾರ್ಯಚರಣೆ ಮುಂದುವರೆಸಲು ಪುರಸಭೆ ಅಧಿಕಾರಿಗಳಿಗೆ ಒತ್ತಾಯಿಸುತ್ತೇವೆಂದರು.

ಕರವೇ ಸಂಘಟನೆಯ ಜೈಭೀಮ ಮುತ್ತಗಿ, ಬೀದಿಬದಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಲತೀಪ ಬೀಳಗಿ ಅವರು ಮಾತನಾಡಿದರು. ಪಿಎಸ್ಐ ಆರ್.ಎಸ್.ಭಂಗಿ ಅವರು ಹಿರಿಯ ಅಧಿಕಾರಿಗಳ ಮಾರ್ಗದರ್ಶನದ ಮೇಲೆ 3 ದಿನದಲ್ಲಿ ಸೂಕ್ತ ಕ್ರಮ ಕೈಗೊಳ್ಳುವ ಬರವಸೆ ನೀಡಿದರು.

ಸರ್ವ ಸಮಾಜದ ಮುಖಂಡರ ಸಭೆಯಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಎಂ.ಕೆ. ಚೋರಗಸ್ತಿ, ಸದಸ್ಯರಾದ ಎಂ.ಕೆ.ಪಟ್ಟಣಶಟ್ಟಿ, ಮುಸ್ತಫಾ ಚೌಧರಿ, ಕಾಶಿನಾಥ ಸಜ್ಜನ, ರಥನಸಿಂಗ್ ಕೊಕಟನೂರ, ಬಸನಗೌಡ ಮಾಲಿಪಾಟೀಲ, ಪ್ರಕಾಶ ಹಜೇರಿ, ಪ್ರಕಾಶ ಕಶೆಟ್ಟಿ, ಈಶ್ವರ ಹೂಗಾರ, ವಿಷ್ಣು ಸಾಳುಂಕೆ, ಮಂಜುನಾಥ ಶೆಟ್ಟಿ, ಸಂಭಾಜಿ ಡಿಸಲೆ, ಫಯಾಜ ಉತ್ನಾಳ, ವಿಠ್ಠಲ ಮೋಹಿತೆ, ಗೋವಿಂದಸಿಂಗ್ ಗೌಡಗೇರಿ, ಸಜ್ಜನಸಾಹುಕಾರ ಬ್ಯಾಲ್ಯಾಳ, ರವಿ ಕಟ್ಟಿಮನಿ, ದಸ್ತಗೀರ ಕೇಂಭಾವಿ, ಮಹಿಬೂಬ ಲಾಹೋರಿ, ರಾಮಪ್ಪ ಕಟ್ಟಿಮನಿ, ಭೀಮನಗೌಡ ಪಾಟೀಲ, ಸಂಜೀವ ಬರದೇನಾಳ, ಕಲ್ಲನಗೌಡ ಪಾಟೀಲ, ಸುಭಾಸ ಹೂಗಾರ, ಗುಂಡು ಜಗತಾಪ, ಗೋಪಾಲ ಕಟ್ಟಿಮನಿ, ತಿಪ್ಪಣ್ಣ ಸಜ್ಜನ ನದೀಮ ಕಡು, ಒಳಗೊಂಡು ವಿವಿಧ ಸಮಾಜದ ನೂರಾರು ಜನ ಮುಖಂಡರುಗಳು ಇದ್ದರು.

# ತಾಳಿಕೋಟೆ ಸುನೀಲ್ ಈಗ ಲಿಂಗಾನಂದ ಸ್ವಾಮಿ-ಮನಗುಂಡಿಶ್ರೀ




**ತಾಳಿಕೋಟೆ,** ತಾಳಿಕೋಟೆ ಪಟ್ಟಣ ಮಹಾ ಶಿವಯೋಗಿಗಳು ನೆಲೆಸಿದ ಪುಣ್ಯಭೂಮಿಯಾಗಿದ್ದು ಇಲ್ಲಿಯ ಜನತೆಯಲ್ಲಿ ಆದ್ಯಾತ್ಮೀಕವೆಂಬುದು ಸಂಪೂರ್ಣ ಮೈಗೂಡಿದೆ ಇದ–ರಿಂದ ಈ ಭಾಗದಲ್ಲಿ ಸ್ವಾಮಿಗಳ ಮೇಲೆ ಯೋಗಿಗಳ ಮೇಲೆ ಬಳೇ ನಂಬಕೆಯುಳ್ಳ ಈ ಭಾಗದ ಜನತೆ ಇತ್ತೀಚಗೆ ನಡೆದ ಯೋಗ ಮತ್ತು ಆದ–್ಯತ್ಮೀಕ ಪ್ರವಚನದಲ್ಲಿ ನಿರಂಜನಶ್ರೀಗಳು ಉಣಬಡಿಸಿದ ಆದ್ಯಾತ್ಮೀಕ ವಿಷಯವನ್ನು ಅಳವಡಿಸಿಕೊಂಡಿರುವದು ಅತೀವ ಮಹತ್ವದ ಸಂಗತಿಯಾಗಿ ಪರಿಣಮಿಸಿದೆ ಎಂದು ಧಾರವಾಡದ ಮನಗುಂಡಿಯ ಗುರುಬಸವ ಮಹಾ ಮನೆಯ ಶ್ರೀ ಬಸವಾನಂದ ಮಹಾಸ್ವಾಮಿಗಳು ಹೇಳಿದರು.

ಶುಕ್ರವಾರರಂದು ಯೋಗೋತ್ಸವ ಸಮಿತಿ ತಾಳಿಕೋಟೆ ಇವರ ವತಿಯಿಂದ ಸ್ಥಳೀಯ ಕನ್ನಡ ಶಾಲಾ ಮೈಧಾನದಲ್ಲಿ ಕಳೆದ ದಿ.12 ರಿಂದ 21ರವರೆಗೆ ಖ್ಯಾತ ಪ್ರವಚನಕಾರರಾದ ಶ್ರೀ ನಿರಂಜನ ಮಹಾಸ್ವಾಮಿಗಳಿಂದ ಸಾಗಿಬಂದ ಸಾಮೂಹಿಕ ಭಜನೆ, ಹಾಗೂ ಆದ್ಯಾತ್ಮೀಕ ಪ್ರವಚನದ ಮಂಗಲೋತ್ಸವದ ದಿವ್ಯ ಸಾನಿದ್ಯ ವಹಿಸಿ ಮಾತನಾಡುತ್ತಿದ್ದ ಶ್ರೀಗಳು ತಾಳಿಕೋಟೆಯ ಶಿಕ್ಷಕರಾದ ಮಲ್ಲಿಕಾರ್ಜುನ ಹಿಪ್ಪರಗಿ ದಂಪತಿಗಳು ತಮ್ಮ ಮಗ ಸುನೀಲ್ ಚಿಕ್ಕ ವಯಸ್ಸಿನಲ್ಲಿಯೇ ಆದ್ಯಾತ್ಮೀಕ ಮಾರ್ಗವನ್ನು ಹಿಡಿದಿದ್ದನ್ನು ಲಕ್ಷೀಸಿ ಅವನನ್ನು ನಮ್ಮ ಶ್ರೀಮಠಕ್ಕೆ ನೀಡಿದ್ದಾರೆ ಅವರಲ್ಲಿಯ ಉದಾರಭಾವನೆ ಎಂಬುದು ಶ್ರೀಮಠಕ್ಕೆ ಪುತ್ರನನ್ನು ನೀಡಿರುವದು ಎದ್ದು ಕಾಣುತ್ತಲಿದೆ ಕಳೆದ 14 ವರ್ಷಗಳ ಹಿಂದೆಯೇ ನಾನು ಇಲ್ಲಿ ಪ್ರವಚನ ನೀಡಲು ಆಗಮಿಸಿದಾಗ ಅಂದಿನ ಸುನೀಲ್ ನಮ್ಮಲ್ಲಿಯ ವಿದ್ಯೆಯನ್ನು ಅಭ್ಯಸಿಸಿ ಈಗ ಲಿಂಗಾನಂದ ಸ್ವಾಮಿಯಾಗಿ ಮಾರ್ಪಟ್ಟಿದ್ದಾರೆಂದರು. ಸೀಘ್ರದಲ್ಲಿಯೇ ಲಿಂಗಾನಂದ ಸ್ವಾಮಿಗಳ ಪಟ್ಟಾಧಿಕಾರ ಕಾರ್ಯ ನೇರವೇರಲಿದೆ ಎಂದು ಹೇಳಿದ ಶ್ರೀಗಳು ಎಲ್ಲ ಸಂಪತ್ತಿಗಿಂತ ಆರೋಗ್ಯ ಸಂಪತ್ತು ಎಂಬುದು ಬಹಳೇ ದೊಡ್ಡದಾಗಿದೆ ಕಾರಣ ದಿನನಿತ್ಯ ಹೆಚ್ಚಿಗೆ ನೀರು ಕುಡುಯುವದರಿಂದ ಮನುಷ್ಯನ ಜೀವನ ಸಂತೋಷಪಡವಂತಹದ್ದಾಗಿದೆ ಎಂದರು. ನಾನೇನು ಎಂಬಿಬಿಎಸ್ ಅಲೋಪತಿಯಾಗಲಿ ಅಂತಹ ವೈಧ್ಯನಲ್ಲಿ ಅನುಭವಸ್ತನೂ ಅಲ್ಲಾ ಬಸವಣ್ಣನವರ ಮಾರ್ಗದರ್ಶನದ ಮೇಲೆ ಅವರ ವಚನಗಳ ಆದಾರದ ಮೇಲೆ ಹಾಗೂ ಡಾ.ಹರ್ಡೇಕರ ಮಂಜಪ್ಪನವರ ವಿಶಿಷ್ಠವಾದಂತಹ ಆರೋಗ್ಯ ಜೀವನವೆಂಬ ಪುಸ್ತಕವನ್ನು ಬರೆದಿದ್ದನ್ನು ನಂಬಿಕೊಂಡಿದ್ದೇನೆಂದು ಬಸವಣ್ಣನವರ ವಚನಗಳನ್ನು ಪ್ರಸ್ಥಾಪಿಸಿದ ಶ್ರೀಗಳು ಅಂದು ಬಸವಣ್ಣನವರು ಹೇಳಿದ್ದರಲ್ಲಿ 108 ರೋಗಗಳು ಮನುಜನಿಗೆ ಇದೆ ಎಂದು ಹೇಳಿದ್ದರು ಈಗ ಸಾವಿರಾರು ರೋಗಗಳಾಗಿವೆ ಈ ರೋಗಗಳ ಗುಣಮುಖಕ್ಕಾಗಿ 75 ಸಾವಿರ ಔಷಧಗಳಾಗಿವೆ ಇಷ್ಟಿದ್ದರೂ ರೋಗಗಳು ಗುಣಮುಖವಾಗುತ್ತಿಲ್ಲಾವೆಂದರು. ಕೇಂದ್ರ ಸರ್ಕಾರ ಈಗಾಗಲೇ 158 ಔಷಧಿಗಳನ್ನು ನಿಷೇದಿಸಿದೆ ಇನ್ನೂ ಕೆಲವು ಔಷಧಿಗಳು ಅಪಾಯಕಾರಿ ಎಂದು ನಿಷೇದ ಮಾಡುವಂತಹ ಕಾರ್ಯವೂ ಕೂಡಾ ನಡೆಯಲಿದೆ ಪರಮಾತ್ಮನೇ ವೈಧ್ಯರೆನ್ನುತ್ತಾರೆ ಹಾಗಲ್ಲಾ ನಾನೊಬ್ಬ ಮಾರ್ಗದರ್ಶಕ ನನ್ನ ಮಾರ್ಗದರ್ಶನದಂತೆ ನಡೆದಿದ್ದಕ್ಕೆ ಅನೇಕ ಜನತೆ ಗುಣಮುಖ ಹೊಂದಿದ್ದಾರೆಂದು ಉದಾರಿಸಿದ ಶ್ರೀಗಳು ವಚನಾಂಕಿತ ವೈದಿದ್ಯ ಪುಸ್ತಕವನ್ನು ಓದಬೇಕೆಂದರು. ಆತ್ಮ ಜ್ಞಾನಿಗಳಾಗಿದ್ದರೆ ಆತ್ಮ ದರ್ಶನವಾಗುತ್ತದೆ ಪಂಚಭೂತಗಳು ಸಮಾನಾಗಿದ್ದರೆ ಕಾಯಿಲೆ ಬಂದರೂ ನಿವಾರಿಸಬಹುದೆಂದು ಶ್ರೀಗಳು ರೋಗಿಗಳಿಗೆ ಮುಖ್ಯವಾಗಿ ತಾಳ್ಮೆ ಎಂಬುದು ಬೇಕಾಗಿದೆ ಯಾವಾಗಲು ಅವಸರದ ಪ್ರವೃತ್ತಿ ಹೋಗಬೇಡಿ ಎಂದು ಜಂಗಮರಲ್ಲಿ ಸ್ಥಿರ ಜಂಗಮ, ಚರ ಜಂಗಮ, ಪರ ಜಂಗಮ, ಎಂಬವರ ಕುರಿತು ಬಿಡಿ ಬಿಡಿಯಾಗಿ ಬಹು ಮಾರ್ಮಿಕವಾಗಿ ವಿವರಿಸಿದ ಶ್ರೀಗಳು ಯೋಗ ತರಬೇತಿ ಹಾಗೂ ಯೋಗ ಪ್ರವಚನ ನೀಡಿರುವ ಶ್ರೀ ನಿರಂಜನಶ್ರೀಗಳವರು 12ನೇ ಶತಮಾನದ ಅಲ್ಲಮಪ್ರಭುಗಳಂತಹ ಕಾರ್ಯ ಮಾಡಿದ್ದಾರೆಂದು ಗುಣಗಾನ ಮಾಡಿದ ಶ್ರೀಗಳು ತಾವು ಇತ್ತೀಚಗೆ ಬರೆದ ವಚನ ಹೃದಯ ಎಂಬ ಪುಸ್ತಕದಲ್ಲಿ ಅಳವಡಿಸಿದಂತಹ 37 ಶರಣ ಶರಣೆಯರ ವಚನಾಂಕಿತ ಹಾಗೂ 9 ಜನ ಸತಿ ಪತಿಗಳ ವಿಶ್ಲೇಷಣೆ ಅಲ್ಲದೇ 150ಜನ ವಚನ ಕರ್ತೆಯರ ಕುರಿತು ತಿಳಿ ಹೇಳಿದರು. ಇದೇ ಸಮಯದಲ್ಲಿ ಕಳೆದ 11ದಿನಗಳಿಂದ ಯೋಗ ತರಬೇತಿ ಹಾಗೂ ಯೋಗ ಆದ್ಯಾತ್ಮೀಕ ಪ್ರವಚನ ಭಜನೆ ಇವೇಲ್ಲವುಗಳನ್ನು ಆಲಿಸಿದ ಕೆಲವು ಭಕ್ತರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು.

ವೇದಿಕೆಯ ಮೇಲೆ ಪ್ರವಚನ ಆಗೂ ಯೋಗ ತರಬೇತಿ ನೀಡಿದ ನಿರಂಜನಶ್ರೀಗಳು ಉಪಸ್ಥಿತರಿದ್ದರು. ಇದೇ ಸಮಯದಲ್ಲಿ ಯೋಗ ಪಟುಗಳಿಗೆ ಹಾಗೂ ಸಾದಕರಿಗೆ ಸನ್ಮಾನಿಸಿ ಗೌರವಿಸಲಾಯಿತು. ಈ ಸಮಯದಲ್ಲಿ ಅಸಂಖ್ಯಾತ ಭಕ್ತಸಮೂಹ ಯೋಗೋತ್ಸವ ಸಮಿತಿಯ ಪದಾಧಿಕಾರಿಗಳು, ಹಾಗೂ ಸದಸ್ಯರು ಉಪಸ್ಥಿತರಿದ್ದರು.

# ಆದರ್ಶ ಸಮಾಜ ನಿರ್ಮಾಣ ನಮ್ಮೆಲ್ಲರ ಗುರಿ



**ರಬಕವಿ–ಬನಹಟ್ಟಿನ:** ಬದುಕು ಬಂಗಾರವಾಗಬೇಕಾದರೆ ಅದಕ್ಕೆ ಸಾಹಿತ್ಯ ಸ್ಪರ್ಶ ಬೇಕು. ನನ್ನ ಜೀವನವೇ ನನ್ನ ಸಂದೇಶ ಎಂದು ಸಾರಿದ ಮಹಾತ್ಮರ ವಿಚಾರ ಧಾರೆಗಳನ್ನು ಅರಿತುಕೊಳ್ಳಬೇಕು. ನಡೆ ನುಡಿಗಳನ್ನು ಒಂದಾಗಿಸಿ ಬದುಕಿದ ಶರಣರ, ದಾಸರ, ಜೀವನ ನಮಗೆ ಆದರ್ಶವಾಗಿದೆ. ಅವರ ನಡೆಗಳಾದ ಕಾಯಕವೇ ಕೈಲಾಸ, ಕಳಬೇಡ ಕೊಳಬೇಡ, ಹುಸಿಯ ನುಡಿಯಲು ಬೇಡ, ನುಡಿದರೆ ಮುತ್ತಿನ ಹಾರದಂತಿರಬೇಕು, ಆಚಾರವೇ ಸ್ವರ್ಗ ಅನಾಚಾರವೇ ನರಕ ಇಂಥ ಮಾತುಗಳು ನಮ್ಮ ಜೀವನಕ್ಕೆ ದಾರಿ ದೀಪವಾಗಬೇಕು ಎಂದು ರಬಕವಿ ಬನಹಟ್ಟಿ ಎರಡನೆಯ ಮಕ್ಕಳ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆ ಸುಹಾನಿ ಮುತ್ತೂರ ತಿಳಿಸಿದರು.

ಅವರು ಶನಿವಾರ ರಾಮಪುರದ ಪೂರ್ಣಪ್ರಜ್ಞೆ ಶಿಕ್ಷಣ ಸಂಸ್ಥೆಯ ಸಭಾ ಭವನದಲ್ಲಿ ನಡೆದ ಎರಡನೆಯ ಮಕ್ಕಳ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಮಾತುಗಳನ್ನಾಡಿದರು.

ಮಕ್ಕಳಲ್ಲಿ ಸೃಜನಶೀಲತೆ, ಬರವಣಿಗೆ, ಸಾಹಿತ್ಯದ ಅಭಿರುಚಿ, ನಾಡು ನುಡಿ, ನೆಲ, ಜಲ, ಸಂಸ್ಕೃತಿಯ ಹಿತ ಚಿಂತನೆ, ಪರಿಸರ ಪ್ರಜ್ಞೆ ಇಂಥಹ ಹಲವಾರು ಮೌಲ್ಯಗಳನ್ನು ಮೂಡಿಸುವ ನಿಟ್ಟಿನಲ್ಲಿ ಸಾಹಿತ್ಯ ಪರಿಷತ್ತುಗಳು ಕಾರ್ಯ ಮಾಡಬೇಕು. ಎಂಟು ಜ್ಞಾನ ಪೀಠ ಪ್ರಶಸ್ತಿಗಳನ್ನು ಪಡೆದುಕೊಂಡು ಕನ್ನಡ ಶ್ರೀಮಂತವಾದ ಭಾಷೆಯಾಗಿದೆ. ಸಾಹಿತ್ಯದಿಂದಲೇ ಸಂಸ್ಕೃತಿ, ಸಮೃದ್ಧಿ ಮತ್ತು ಸಮಾಜ ನಿರ್ಮಾಣ ಮಾಡಲು ಸಾಧ್ಯ. ಸಾಹಿತ್ಯದಿಂದ ಆದರ್ಶ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದು ಸುಹಾನಿ ಮುತ್ತೂರ ತಿಳಿಸಿದರು.

# 43 ವರ್ಷಗಳ ನಂತರ ಸೇರಿದ ಹಳೇ ವಿದ್ಯಾರ್ಥಿಗಳು

# ಬಾಲ್ಯದ ನೆನಪುಗಳ ಮೆಲುಕು



**ಬೈಲಹೊಂಗಲ :** ಬೈಲಹೊಂಗಲ ತಾಲೂಕಿನ ಸಂಪಗಾವಿಯ ಆರ್‌ಇಎಸ್ ಪ್ರೌಢಶಾಲೆಯ ಎಸ್ಸೆಸ್ಸೆಲ್ಸಿ 1980–81ನೇ ಬ್ಯಾಚ್‌ನ ವಿದ್ಯಾರ್ಥಿಗಳ ಸ್ನೇಹ ಬಳಗವು ಸಂಪಗಾವಿಯ ಬೈಲಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಶನಿವಾರ ಗುರುವಂದನೆ ಮತ್ತು ಸ್ನೇಹ ಸಂಗಮ ಕಾರ್ಯಕ್ರಮ ಹಮ್ಮಿಕೊಂಡಿತ್ತು.

43 ವರ್ಷಗಳ ನಂತರ ಸೇರಿದ ಹಳೇ ವಿದ್ಯಾರ್ಥಿಗಳು ತಮ್ಮ ಬಾಲ್ಯದ ನೆನಪುಗಳನ್ನು ಮೆಲುಕು ಹಾಕಿದರು. ತಾವು ಕಲಿತ ಶಾಲೆ ಕಂಡು ಪುಳಕಗೊಂಡರು.

ಹಾವೇರಿ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವೆ ಪ್ರೊ.ವಿಜಯಲಕ್ಷ್ಮಿ ಪುಟ್ಟಿ, 'ಗುರು ಹಾಗೂ ಶಿಷ್ಯ ಪರಂಪರೆ ನಮ್ಮಲ್ಲಿ ಮಹತ್ವ ಪಡೆದಿದೆ. ಪ್ರತಿಯೊಬ್ಬರೂ ತಮ್ಮ ಶಿಕ್ಷಕರು, ಶಾಲೆ, ಊರು, ಹೆತ್ತವರು ಮತ್ತು ಸಮಾಜದ ಋಣ ತೀರಿಸಬೇಕು' ಎಂದು ಕರೆಕೊಟ್ಟರು. ಸಾನ್ನಿಧ್ಯ ವಹಿಸಿದ್ದ ಚನ್ನವೀರಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿದರು.

ಎಸ್.ಸಿ.ಹಳ್ಳೂರ, ಕೆ.ಕೆ.ಹಾರೂಗೊಪ್ಪ, ಎಂ.ವೈ. ರಾವುಳ, ಸುಮಿತ್ರಾ ಶರಣಪ್ಪನವರ, ಎ.ಎಂ.ಲೋದಿ, ಎಸ್.ಎಸ್.ಕುಂಬಾರ, ಬಿ.ಎಸ್.ಸಿದ್ನಾಳ, ಪಿ.ಬಿ.ಗುರುಪುತ್ರನವರ, ಪತ್ರೆಪ್ಪ ಹುಣಶಿಕಟ್ಟಿ ಅವರನ್ನು ಸತ್ಕರಿಸಲಾಯಿತು.

ನಿವೃತ್ತ ಶಿಕ್ಷಕ ಬಿ.ಬಿ.ಚರಂತಿಮಠ, ಗ್ರಾ.ಪಂ ಅಧ್ಯಕ್ಷ ಶ್ರೀಕಾಂತ ಹಲ್ಕಿ ಆರ್‌ಇಎಸ್ ಪ್ರೌಢಶಾಲೆ ಅಧ್ಯಕ್ಷ ಶಂಕ್ರೆಪ್ಪ ಸಿದ್ನಾಳ, ಹುಬ್ಬಳ್ಳಿಯ ಚೇತನ ಕಾಲೇಜು ಅಧ್ಯಕ್ಷ ಗುರುಶಾಂತ ವಳಸಂಗ, ಮುಖ್ಯಶಿಕ್ಷಕ ಶ್ರೀಕಾಂತ ಉಳ್ಳೇಗಡ್ಡಿ ಶ್ರೀಕಾಂತ ನೇಗಿನಹಾಳ, ಅಡಿವೆಪ್ಪ ರಾಯನ್ನವರ, ಮಹಾದೇವ ವಕ್ಕುಂದ, ಮಹಾಂತೇಶ ಪುಟ್ಟಿ, ಶೇಖಯ್ಯ ಯರಗಂಬಳಿಮಠ, ಮೋಹನ ಬಡಿಗೇರ, ರುದ್ರಪ್ಪ ಅಂಗಡಿ, ಮುಗುಟಸಾಬ್ ಗೂಡುನವರ, ರಾಜೇಂದ್ರ ಪಾಟೀಲ, ಬಸನಗೌಡ ಪಾಟೀಲ ಯತ್ನಾಳ ಇತರರಿದ್ದರು.

*****

# ಕನ್ನಡಾಂಬೆಯ ತೊಟಿಲ ತೂಗಿದ ಸಹಪಾಠಿಗಳು ಸೇಲ್ಪಿ ಪಾಂಯಿಟಾದ ಸ್ಥಳ



**ಮೂಡಲಗಿ :** ಸೃಜನಶೀಲತೆಯ ಸಾಕ್ಷಾತ್ಕಾರದ ಅಕ್ಷರ ಜಾತ್ರೆಗೆ ಜಾತ್ರೋಪಾದಿಯಲ್ಲಿ ಜನ ಹರಿದು ಬರಬೇಕಿತ್ತು. ಆದರೆ ಕೊಂಚ ಜನವಿರಳತೆ ಕಂಡು ಬಂದಿತು. ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನವಾದ್ದರಿಂದ ಜನಾಗಮನದ ನಿರೀಕ್ಷೆ ಜಾಸ್ತಿ ಇತ್ತು. ಆದಾಗ್ಯೂ ಕಾರ್ಯಕ್ರಮದ ಯಶಸ್ಸಿಗೆ ಇನ್ನೊಂದು ವಿಶೇಷವಿತ್ತು. ಅದೇನೆಂದರೆ, 1987–88 ನೇ ಸಾಲಿನ ಎಸ್ ಎಸ್ ಆರ್ ಪ್ರೌಡ ಶಾಲೆಯ ಸಹಪಾಠಿಗಳು ಸೇರಿ ಕನ್ನಡಾಂಬೆಯನ್ನು ತೊಟ್ಟಿಲಲ್ಲಿ ತೂಗುವ ಮತ್ತು ನಾಮಕರಣ ಮಾಡಿ ಗುಗ್ಗರಿ ಹಂಚುವ ಕಾರ್ಯಕ್ರಮ ಇಡೀ ಸಮ್ಮೇಳನದ ವಿಶೇಷ ಆಕರ್ಷಣೆಯಾಗಿತ್ತು. ಒಂದು ಕಡೆ ಸಾಹಿತಿಗಳ ಭಾಷಣಕ್ಕೆ, ಕವಿಗಳ ಕವನವಾಚನಕ್ಕೆ ತಲೆತೂಗುವ ದೃಶ್ಯ, ಮತ್ತೊಂದೆಡೆ ಕನ್ನಡಾಂಬೆಯ ತೊಟ್ಟಿಲು ತೂಗುವ ದೃಶ್ಯ ಕಂಡು ಬಂದಿತು,

ಕಸಾಪ ಜಿಲ್ಲಾಧ್ಯಕ್ಷೆ ಮಂಗಲಾ ಮೆಟಗುಡ್ಡ ತಾಯಿ ಭುವನೇಶ್ವರಿಯ ಭಾವಚಿತ್ರ ಪೂಜಿಸಿದರೆ ಸಮ್ಮೇಳನಾಧ್ಯಕ್ಷ ಪ್ರೊ.ಚಂದ್ರಶೇಖರ ಅಕ್ಕಿ ತೊಟಿಲು ತೂಗಿದರು, ಕಲಾವಿದ ಈಶ್ವರಚಂದ್ರ ಬೇಟಗೇರಿ ಜೋಗುಳ ಹಾಡಿದ್ದು ವಿಶೇಶವಾಗಿತ್ತು, ಊಟದ ಸ್ಥಳದ ಹತ್ತಿರ ನಿರ್ಮಾನವಾದ ಈ ಸ್ಥಳ ಸೇಲ್ಪಿ ಪಾಂಯಿಟ್ ಆಯಿತು ತೊಟಿಲೋತ್ಸವ, ಸಾಹಿತ್ಯ ಸಮೇಳನಕ್ಕೆ ಸೇರಿದ ಜನ ತಮ್ಮ ಕುಟುಂಬದ ಜನರೊಂದಿಗೆ ತೊಟಿಲ ಬಳಿ ಪೋಟೂ ತೆಗಿಸಿಕೊಂಡದ್ದು ಅತಿಯಾಗಿತ್ತು,

ಕಸಾಪ ತಾಲೂಕು ಘಟಕದ ಅಧ್ಯಕ್ಷ ಡಾ.ಸಂಜಯ ಶಿಂಧಿಹಟ್ಟಿ, ತಹಶಿಲ್ದಾರ ಶಿವಾನಂದ ಬಬಲಿ,ಕ್ಷೇತ್ರ ಶಿಕ್ಷಣಾಧಿಕಾರಿ ಅಜೀತ ಮನ್ನಿಕೇರಿ ಸಹಿತ ಹಲವು ಗಣ್ಯರು, 1987–88 ನೇ ಸಾಲಿನ ಗೆಳೆಯರಾದ ಶಿವಾನಂದ ಕಂಬಾರ.ಅಜ್ಜಪ್ಪ ಅಂಗಡಿ.ಶಿವಾನಂದ ಮುಧೋಳ.ಚಿದಾನಂದ ಬೆಳಕೂಡ.ಮಹೇಶ ಹೀರೆಮಠ.ಸಂತ್ರಾಮ ನಾಶಿ.ಶಂಕರ ಹಳ್ಳಿ.ಸಂಗಮೇಶ ಆಲತಗಿ.ಸದಾಶಿವ ನಿಂಗನೂರ,ರಾಜು ಬಡಿಗೇರ ಇದರೂ.

# ಕಳಪೆ ತೊಗರಿ ಬೀಜ ವಿತರಣೆ

## ರೈತರಿಗೆ ಅಪಾರ ಹಾನಿ,ಪರಿಹಾರ ನೀಡಲು ಆಗ್ರಹ



**ಬಸವನಬಾಗೇವಾಡಿ,** ಕೃಷಿ ಇಲಾಖೆಯ ಮೂಲಕ ವಿತರಿಸಿದ ಜಿಆರ್‌ಜಿ152 ಕಳಪೆ ತೊಗರಿ ಬೀಜ ವಿತರಣೆ ಮಾಡ್ಡಿದರಿಂದ ಬಿತ್ತಿದ ತೊಗರೆ ಬೆಳೆ ನೋಡಲು ಅಬ್ಬರವಾಗಿದೆ. ಆದರೆ ಗಿಡಗಳಲ್ಲಿ ಒಂದು ತೊಗರಿ ಕಾಯಿ ಇಲ್ಲದರಿಂದಾಗಿ ರೈತರು ಆತಂಕಕ್ಕೀಡಾಗಿದ್ದಾರೆ. ಹಾನಿಗೊಳಗಾದ ತೊಗರಿಗೆ ಸೂಕ್ತ ಪರಿಹಾರ ಒದಗಿಸಬೇಕು. ಕಳಪೆ ತೊಗರಿ ಬೀಜ ತೊಗರಿ ಬೀಜ ವಿತರಿಸಿದ ಕಂಪನಿಗಳ ವಿರುದ್ಧ ಕ್ರಮ ಜರುಗಿಸಬೇಕು. ಬೀಜ ಪರಿಶೀಲನೆ ಮಾಡದೇ ಕೃಷಿ ಇಲಾಖೆಯಿಂದ ಬೀಜ ವಿತರಿಸುವದು ಅಧಿಕಾರಿಗಳ ಬೇಜವಾಬ್ದಾರಿ ಎದ್ದು ಕಾಣುತ್ತಿದೆ ಎಂದು ಅಖಂಡ ಕರ್ನಾಟಕ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಆರೋಪಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ತಾಲೂಕಿನ ಹತ್ತರಕಿಹಾಳ, ನಂದಿಹಾಳ, ಉಕ್ಕಲಿ, ಮನಗೂಳಿ ಸೇರಿದಂತೆ ಮುದ್ದೇಬಿಹಾಳ ತಾಲೂಕಿನಲ್ಲಿಯೂ ಇದೇ ಜಿಆರ್‌ಜಿ152 ಬೀಜ ಬಿತ್ತಿದ್ದ ತೊಗರಿ ಬೆಳೆ ಅಪಾರ ಪ್ರಮಾಣದಲ್ಲಿ ಹಾನಿಯಾಗಿದೆ. ಕೃಷಿ ಇಲಾಖೆಯು ಬೀಜ ತೆಗೆದುಕೊಳ್ಳುವ ಸಂದರ್ಭದಲ್ಲಿ ತೊಗರಿ ಗುಣಮಟ್ಟ, ಯಾವ ತಳಿ ಬೀಜ ರೈತರು ಬಿತ್ತನೆ ಮಾಡಬೇಕಾದರೆ ಅನುಸರಿಸಬೇಕಾದ ಕ್ರಮಗಳು ಕುರಿತು ಮಾಹಿತಿ ಪಡೆದುಕೊಳ್ಳಬೇಕು. ನಂತರ ಇದರ ಬಗ್ಗೆ ರೈತರಿಗೆ ಬಿತ್ತನೆ ಮಾಡುವ ಸಂದರ್ಭದಲ್ಲಿ ಈ ಕುರಿತು ಮಾಹಿತಿ ನೀಡಬೇಕು. ಇದೀಗ ಜಿಆರ್‌ಜಿ152 ಬೀಜ ಅಂತರದಲ್ಲಿ ಬಿತ್ತನೆ ಮಾಡಬೇಕು. ತೇವಾಂಶ ಕೊರತೆ,ವಾತಾವರಣದ ವೈಪರೀತ್ಯ ಸೇರಿದಂತೆ ವಿವಿಧ ಕಾರಣಗಳನ್ನು ಕೃಷಿ ಇಲಾಖೆಯು ನೀಡುತ್ತಿದೆ.ಕಳಪೆ ತೊಗರಿ ಬೀಜ ವಿಷಯ ಮರೆಮಾಚಲು ಈ ರೀತಿಯಾಗಿ ಅಧಿಕಾರಿಗಳು ಹೇಳುತ್ತಿದ್ದಾರೆ. ಜಿಆರ್‌ಜಿ152 ಬೀಜ ಕಳಪೆಯಾಗಿದೆ. ರೈತರು ತುಂಬಾ ಸಂಕಷ್ಟದಿಂದ ಬಿತ್ತನೆ ಮಾಡಿದ್ದು. ಇದೀಗ ಬೆಳೆ ಉತ್ತಮ ಬಂದರೂ ಕಾಯಿಯಾಗದೇ ಇರುವದರಿಂದಾಗಿ ರೈತರು ತೀವ್ರ ತೊಂದರೆ ಅನುಭವಿಸುವಂತಾಗಿದೆ. ಕೂಡಲೇ ಹಾನಿಗೊಳಗಾದ ತೊಗರಿ ಬೆಳೆಗೆ ಸೂಕ್ತ ಪರಿಹಾರ ಸರ್ಕಾರ ನೀಡಬೇಕು. ಕಳಪೆ ಬೀಜ ವಿತರಿಸಿದ ಕಂಪನಿ ವಿರುದ್ಧ ಕ್ರಮ ತೆಗೆದುಕೊ ಳ್ಳಬೇಕೆಂದು ಅರವಿಂದ ಕುಲಕರ್ಣಿ ಆಗ್ರಹಿಸಿದ್ದಾರೆ.

## ದಿಗ್ವಿಜಯ ಸಾಧಿಸಿದ್ದೇವೆ : ಮುಖ್ಯಮಂತ್ರಿ

(ಮೊದಲನೆಯ ಪುಟದಿಂದ)

ರಾಜಭವನದಿಂದ ಹಿಡಿದು ಕೇಂದ್ರ ತನಿಖಾ ಸಂಸ್ಥೆಗಳ ವರೆಗೆ ಎಲ್ಲವನ್ನೂ ದುರ್ಬಳಕೆ ಮಾಡಿ ಹಗರಣವನ್ನು ಸೃಷ್ಟಿಸಿ ನನ್ನನ್ನು ಮತ್ತು ನನ್ನ ಕುಟುಂಬವನ್ನು ಹಣಿಯುವ ಪ್ರಯತ್ನ ಮಾಡಿದ್ದರು ಎಂದು ಅವರು ವಾಗ್ದಾಳಿ ನಡೆಸಿದರು.

ಬಿಜೆಪಿ ಮತ್ತು ಜೆಡಿಎಸ್ ಅಪಪ್ರಚಾರದ ಮೂಲಕ ಧಾರ್ಮಿಕ ಉನ್ಮಾದಗಳನ್ನು ಸೃಷ್ಟಿಸಿ ಜಾತಿ–ಧರ್ಮಗಳ ನಡುವೆ ಒಡಕು ಮೂಡಿಸಿ ಕಾಂಗ್ರೆಸ್ ಪಕ್ಷವನ್ನು ಮಣಿಸಲು ಪ್ರಯತ್ನಿಸಿದೆ. ಕರ್ನಾಟಕದ ಜಾತ್ಯತೀತ ಮತ್ತು ಶಾಂತಿಪ್ರಿಯ ಜನತೆ ಇದನ್ನು ಒಪ್ಪಿಕೊಳ್ಳದೆ ನಮ್ಮನ್ನು ಗೆಲ್ಲಿಸಿದ್ದಾರೆ ಎಂದು ಮುಖ್ಯಮಂತ್ರಿ ತಿಳಿಸಿದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮತದಾರರು 135 ಸ್ಥಾನಗಳನ್ನು ನೀಡಿ ನಮ್ಮನ್ನು ಗೆಲ್ಲಿಸಿದ್ದಾರೆ. ಆದರೆ ಬಿಜೆಪಿ ಮತ್ತು ಜೆಡಿಎಸ್ ನಮ್ಮ ಸರಕಾರವನ್ನು ಉರುಳಿಸುವ ಪ್ರಯತ್ನ ಮಾಡುತ್ತಲೆ ಬಂದಿದ್ದಾರೆ. ಸಾವಿರಾರು ಕೋಟಿ ರೂಪಾಯಿಗಳನ್ನು ಸುರಿದು ನಮ್ಮ ಶಾಸಕರನ್ನು ಖರೀದಿಸುವ ದುಷ್ಟ ಪ್ರಯತ್ನ ಮಾಡಿದ್ದರು ಎಂದು ಅವರು ತಿಳಿಸಿದರು.

ಬಿಜೆಪಿ ಕೋಮುವಾದಿ ರಾಜಕಾರಣಕ್ಕೆ ಉತ್ತರ: ಶಿಗ್ಗಾಂವಿ ಕ್ಷೇತ್ರದಲ್ಲಿ ಮುಸ್ಲಿಮ್ ಅಭ್ಯರ್ಥಿಗೆ ಟಿಕೆಟ್ ನೀಡಿದಾಗ ವಿರೋಧ ವ್ಯಕ್ತವಾಗಿದ್ದು ನಿಜ. ಜಾತಿ–ಧರ್ಮದ ಭೇದ ಮಾಡದೆ ಸಮರ್ಥ ಅಭ್ಯರ್ಥಿಗೆ ಮತ ಹಾಕಿ ಎಂದು ಕೇಳಿಕೊಂಡೆವು. ಜನ ನಮ್ಮ ಮಾತಿಗೆ ಒಪ್ಪಿಕೊಂಡು ಶಿಗ್ಗಾಂವಿಯಲ್ಲಿ ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸಿದ್ದಾರೆ. ಇದು ಬಿಜೆಪಿಯವರ ಕೋಮುವಾದಿ ರಾಜಕಾರಣಕ್ಕೆ ನೀಡಿದ ಉತ್ತರವಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದರು. ಉಪಚುನಾವಣೆಗಳಲ್ಲಿ ಸೋಲು ಬಿಜೆಪಿ ನಾಯಕರ ಆತ್ಮಾವಲೋಕನಕ್ಕೆ ಪ್ರೇರಣೆ ನೀಡಲಿ. ಇನ್ನಾದರೂ ಅವರು ದ್ವೇಷದ ರಾಜಕಾರಣವನ್ನು ಕೈಬಿಟ್ಟು ರಚನಾತ್ಮಕ ವಿರೋಧಪಕ್ಷವಾಗಿ ಕೆಲಸ ಮಾಡಲಿ ಎಂದು ಹಾರೈಸಿದ ಸಿದ್ದರಾಮಯ್ಯ, ಬಿಜೆಪಿಯವರು ಮತದಾರರನ್ನು ಪೆದ್ದರು ಎಂದು ಭಾವಿಸುವುದನ್ನು ನಿಲ್ಲಿಸಬೇಕು ಎಂದು ಅವರು, ನಮ್ಮ ಪಕ್ಷದ ಅಧ್ಯಕ್ಷರು, ಮಂತ್ರಿಗಳು, ಸ್ಥಳೀಯ ಮುಖಂಡರು, ಕಾರ್ಯಕರ್ತರು ಎಲ್ಲರ ಶ್ರಮಕ್ಕೆ ಸಾರ್ಥಕತೆ ಸಿಕ್ಕಿದೆ ಎಂದು ಹೇಳಿದರು.

# ರಾಜಕೀಯದಿಂದ ಹೊರಗಿದ್ದರೆ ಸಾಹಿತ್ಯಕ್ಕೆ ಗಟ್ಟಿತನ ಬರುತ್ತದೆ : ಸಂಸದ ಕಡಾಡಿ



**ಮೂಡಲಗಿ :** ವಿವಿಧ ಸಾಹಿತಿಗಳು ರಚಿಸಿದ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮ ನೆರವೇರಿಸಿದ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಮಾತನಾಡಿ. ಈ ಭಾಗದ ಹಲವು ಸಾಹಿತಿಗಳನ್ನು ನಾವು ಸ್ಮರಿಸಬೇಕಾಗುತ್ತದೆ.ಕೃಷ ಪಾರಿಜಾತ ರಚಿಸಿದವರು ನಮ್ಮ ಭಾಗದವರು. ಕನ್ನಡ ಮಾತನಾಡುವ ನಾವು ಮಕ್ಕಳಿಗೆ ಇಂಗ್ಲೀಷ ವ್ಯಾಮೋಹವನ್ನು ತುಂಬುತ್ತಿರುವದು ಕಳವಳಕಾರಿ ಅಂಶ. ಹಾಗೇಯೆ ಕನ್ನಡ ಶಿಕ್ಷಣ ಸಂಸ್ಥೆಗಳನ್ನು ಬೆಳಸಬೇಕಾಗಿದೆ.ಶಾಲೆ ಕಲಿಯಬೇಕು.ಪದವಿ ಪಡೆಯಬೇಕು ನೌಕರಿ ಮಾಡಬೇಕು ಎಂಬ ಕಡ್ಡಾಯ ಕಾನೂನನ್ನು ಮಕ್ಕಳ ಮೇಲೆ ಹಾಕುತ್ತಿರುವದು ವಿಷಾದನೀಯ ಎಂದರು,

ಮಕ್ಕಳಿಗೆ ಮನೆಯಲ್ಲಿ ಮಾತೃ ಭಾಷೆಯ ಕಲಿಸಬೇಕಾಗಿದೆ.ಬ್ಯಾಂಕುಗಳಲ್ಲಿ ಕನ್ನಡ ಬಾಷಿಕರು ಆಕ್ರಮಿಸಿದ್ದಾರೆ ಎಂಬ ಆಪಾದನೆ ಇದೆ. ಉದ್ಯೋಗ ಪಡೆಯುವ ಕೌಶಲ್ಯ ನಮ್ಮಲಿ ಕಡಿಮೆ ಇದೆ.ಬೇರೆ ರಾಜ್ಯದವರ ಜೊತೆಗೆ ಸ್ಪರ್ಧೆ ಮಾಡುವ ಅಗತ್ಯ ಇದೆ ಎಂದ ಸಂಸದ ಕಡಾಡಿ

ಸಾಹಿತ್ಯ ಸಮೇಳನಗಳು ರಾಜಕೀಯದಿಂದ ಹೊರಗಿದ್ದಾಗ ಮಾತ್ರ ಅವುಗಳ ಮೌಲ್ಯ ಸಾಹಿತಾಸಕ್ತರಿಗೆ ಗೋತ್ತಾಗುತ್ತದೆ ಸರ್ಕಾರ ವಿರುದ್ದ ತನ್ನ ದೋರಣೆಯನ್ನು ಒತ್ತಿ ಹೇಳುವ ಶಕ್ತಿ ಪಡೆದರೆ ಮಾತ್ರ ಸಾಹಿತ್ಯ ಕ್ಷೇತ್ರಕ್ಕೆ ಅತಿ ದೊಡ್ಡ ಗೌರವ ಬರುತ್ತದೆ,ಬಂಡಾಯದ ಸಾಹಿತಿಗಳು ಕಡಿಮೆಯಾಗಿದ್ದಾರೆ ಎಂದರು

ಪ್ರೊ.ಕೆ.ಜಿ ಕುಂದಣಗಾರ ವೇದಿಕೆಯಲ್ಲಿ ಮೂಡಲಗಿ ಶಿವಬೋಧರಂಗ ಸಂಸ್ಥಾನಮಠದ ಶ್ರೀ ದತ್ತಾತ್ರಯಬೋಧ ಸಾನಿದ್ಯ ವಹಿಸಿದರು, ಶಾಸಕ ಬಾಲಚಂದ್ರ ಜಾರಕಿಹೊಳಿ ಅಧ್ಯಕ್ಷತೆ ವಹಿಸಿದ್ದರು,ಸಮ್ಮೇಳನಾಧ್ಯಕ್ಷ ಪ್ರೊ.ಚಂದ್ರಶೇಖರ ಅಕ್ಕಿ, ಕಸಾಪ ಜಿಲ್ಲಾಧ್ಯಕ್ಷೆ ಮಂಗಲಾ ಮೆಟಗುಡ್ಡ, ಕಸಾಪ ತಾಲೂಕು ಘಟಕದ ಅಧ್ಯಕ್ಷ ಡಾ.ಸಂಜಯ ಶಿಂಧಿಹಟ್ಟಿ, ತಹಶಿಲ್ದಾರ ಶಿವಾನಂದ ಬಬಲಿ,ಕ್ಷೇತ್ರ ಶಿಕ್ಷಣಾಧಿಕಾರಿ ಅಜೀತ ಮನ್ನಿಕೇರಿ, ತಾ.ಪಂ ನಿರ್ವಾಹಕ ಅಧಿಕಾರಿ ಎಪ್ ಜಿ ಚಿನ್ನಣ್ಣವರ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಧಿಕಾರಿ ಯಲ್ಲಪ್ಪ ಗದಾಡಿ, ಗೋಕಾಕದ ಮಹಾಂತೇಶ ತಾಂವಶಿ,ಈಶ್ವರ ಕತ್ತಿ,ಸಂತೋಷ ಸೋನವಾಲಕರ ಪುರಸಭೆ ಅಧ್ಯಕ್ಷೆ ಖುರಿಷಾ ನಧಾಪ, ಮುಖ್ಯಾಧಿಕಾರಿ ತುಕಾರಾಮ ಮಾದರ ಸಹಿತ ಹಲವು ಗಣ್ಯರು ಇದ್ದರು,

# ಬದುಕು ಸುಂದರವಾಗಲು ಶಿಕ್ಷಣ ಅವಶ್ಯಕ:ಎನ್ ಎಮ್ ಬಿರಾದಾರ



**ಇಂಡಿ :** ಮಾನವನ ಬದುಕು ಸುಂದರವಾಗಿ ಬೆಳಗಬೇಕಾದರೆ ಇಂದಿನ ಯುವ ಪೀಳಿಗೆಗೆ ಶಿಕ್ಷಣ ಅತೀ ಅವಶ್ಯಕವಾಗಿದೆ ಎಂದು ವಿಜಯಪುರದ ಚಾಣಕ್ಯ ಕರಿಯರ್ ಅಕಾಡೆಮಿ ಸಂಸ್ಥಾಪಕ ಅಧ್ಯಕ್ಷ ಎನ್ ಎಂ ಬಿರಾದಾರ ಅವರು ಹೇಳಿದರು.

ಅವರು ತಾಲೂಕಿನ ಹಿರೇಬೇವನೂರ ಗ್ರಾಮದ ಶ್ರೀ ಮಲ್ಲಿಕಾರ್ಜುನ ದೇವರ ಚಟ್ಟಿ ಜಾತ್ರಾ ಮಹೋತ್ಸವ ಹಾಗೂ ಶ್ರೀ ಭ್ರಮರಾಂಬಾ ದೇವಿಯ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಹಾಗೂ ಕಳಸಾರಹಣ ಕಾರ್ಯಕ್ರಮದ ನಿಮಿತ್ಯವಾಗಿ ದೇವಸ್ಥಾನದಲ್ಲಿ ಏರ್ಪಡಿಸಿದ್ದ "ಆಧ್ಯಾತ್ಮಿಕತೆ ಮತ್ತು ಶಿಕ್ಷಣ" ಈ ವಿಷಯದ ಕುರಿತು ಉಪನ್ಯಾಸ ನೀಡಿ ಮಾತನಾಡಿದರು.

ನಮ್ಮ ಬದುಕು ಸುಂದರವಾಗಲು ನಮಗೆ ಮನೆ,ಮನ ಹಾಗೂ ಹಣ ಈ ಮೂರು ಅಂಶಗಳು ಅತೀ ಅವಶ್ಯವಾಗಿವೆ.ಮೊದಲನೆಯದಾಗಿ ಮನೆಯಲ್ಲಿ ಒಳ್ಳೆಯ ವಾತಾವರಣವಿದ್ದು, ಗುರು ಹಿರಿಯರ ಜೊತೆ ಅನ್ಯೋನ್ಯತೆಯಿಂದಿರುವುದನ್ನು ರೂಢಿಸಿಕೊಳ್ಳಬೇಕು.ಮಕ್ಕಳಿಗೆ ಹಿರಿಯರಿಗೆ ಗೌರವ ಕೊಡುವುದನ್ನು ಕಲಿಸಬೇಕು. ಗಂಡ ಹೆಂಡತಿ ಮಧ್ಯ ಹೊಂದಾಣಿಕೆ ಇರಬೇಕು.

ಎರಡನೇದಾಗಿ ಮನಸ್ಸು ಸರಿಯಾಗಿ ಕೆಲಸ ಮಾಡಬೇಕಾದರೆ ನಾವು ಹೊಂದಾಣಿಕೆಯಿಂದ ಇರುವುದನ್ನು ಕಲಿಯಬೇಕು.ಮದುವೆಯಾದ ಬಳಿಕ ವಿಚ್ಛೇದನದ ಮಾತು ಬೇಡವೇ ಬೇಡ. ನಮ್ಮಲ್ಲಿ ಒಳ್ಳೆಯ ವಿಚಾರಗಳಿದ್ದರೆ ಸಂಬಂಧ ಚೆನ್ನಾಗಿರುತ್ತದೆ.ಮನಸ್ಸು ಯಾವತ್ತೂ ಒಳ್ಳೆಯದನ್ನು ವಿಚಾರ ಮಾಡುತ್ತಾ,ಆಧ್ಯಾತ್ಮದ ಕಡೆ ಒಲವು ತೋರಿ,ದೈವತ್ವದಲ್ಲಿ ನಂಬಿಕೆ ಇಡುವುದನ್ನು ಕಲಿಯಬೇಕು ಯಾವತ್ತೂ ಸಣ್ಣ ತಪ್ಪನ್ನು ದೊಡ್ಡದಾಗಿ ಬಿಂಬಿಸಬಾರದು. ನಮ್ಮ ಬದುಕು ನಕಲಿಯಾಗಿದ್ದರೆ ಜೀವನವು ನಕಲಿಯಾಗುತ್ತಲೆ ಮುನ್ನಡೆಯುತ್ತದೆ. ಅದು ಅಸಲಿಯಾಗಲು ಪ್ರಯತ್ನಿಸಿದರೆ ಅಸಲಿಯಾಗಿ ಪರಿವರ್ತನೆ ಆಗುತ್ತದೆ ಎಂದು ಹೇಳಿದರು.

ಮೂರನೇದಾಗಿ ಹಣ ನಾವು ಚೆನ್ನಾಗಿ ದುಡಿದು ಹಣ ಗಳಿಸಬೇಕು. ಆದಾಯದಲ್ಲಿ ಅರ್ಧ ಹಣವನ್ನು ದಾನ ಮಾಡುವುದನ್ನು ರೂಡಿಸಿಕೊಳ್ಳಬೇಕು. ನಿಷ್ಠೆಯಿಂದ ದುಡಿಮೆ ಮಾಡಿ,ಕೆಲಸ ಮಾಡುವ ಸಂಸ್ಕೃತಿಯನ್ನು ನಾವು ಬೆಳೆಸಿಕೊಳ್ಳಬೇಕಾದರೆ ನಮ್ಮ ಮಕ್ಕಳಿಗೆ ಶಿಕ್ಷಣ ಅತೀ ಅವಶ್ಯವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರತಿದಿನ ಪ್ರವಚನ ನೀಡುತ್ತಿರುವ ಹಾಗೂ ಸಾನಿದ್ಯ ಸಾನಿಧ್ಯ ವಹಿಸಿರುವ ಕಲಬುರ್ಗಿಯ ಸಿದ್ಧಾರೂಢ ಮಠದ ಮಾತೋಶ್ರೀ ವಿದ್ಯಾತಾಯಿಯವರು ಆಶೀರ್ವಚನ ನೀಡಿದರು.ದೇವಸ್ಥಾನದ ಅರ್ಚಕರಾದ ಗುರುಪಾದಯ್ಯ ಮಠಪತಿ ವೇದಿಕೆಯಲ್ಲಿದ್ದರು.

ಕಾರ್ಯಕ್ರಮದಲ್ಲಿ ಕನ್ನಡ ಜಾನಪದ ಪರಿಷತ್ತು ತಾಲೂಕಾಧ್ಯಕ್ಷ ಆರ್ ವಿ ಪಾಟೀಲ,ದೇವಸ್ಥಾನದ ಸಮಿತಿ ಅಧ್ಯಕ್ಷ ನಾಗನಗೌಡ ಬಿರಾದಾರ, ಕಾರ್ಯದರ್ಶಿ ಸಂಗಪ್ಪ ಉಪ್ಪಿನ,ಅಣ್ಣಾರಾಯ ಬಮಹಳ್ಳಿ, ಆರ್ ಡಿ ಪಾಟೀಲ,ಟಿ ವಿ ಪಾಟೀಲ,ಮಂಜು ಪ್ಯಾಟಿ, ವಿಜಯಕುಮಾರ ಬಿರಾದಾರ, ಸೋಮು ಪಾತಾಳಿ,ಗ್ರಾ ಪಂ ಸದಸ್ಯರಾದ ರವೀಂದ್ರ ನಾರಾಯಣಪುರ ಹಾಗೂ ಅರವಿಂದ ಮೈದರಗಿ ಉಪಸ್ಥಿತರಿದ್ದರು.

# ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹರ್ಷ

**ಬೆಂಗಳೂರು :** ಚನ್ನಪಟ್ಟಣ, ಸಂಡೂರು ಹಾಗೂ ಶಿಗ್ಗಾವಿ–ಸವಣೂರು ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಹರ್ಷ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷರು, ಉಪ ಮುಖ್ಯಮಂತ್ರಿಗಳು ಆದ ಡಿ.ಕೆ.ಶಿವಕುಮಾರ್ ಸಾರಥ್ಯದ ರಾಜ್ಯ ಸರ್ಕಾರಕ್ಕೆ ಸಿಕ್ಕ ಗೆಲುವು ಇದಾಗಿದೆ. ಪಂಚ ಗ್ಯಾರಂಟಿ ಯೋಜನೆಗಳನ್ನು ಜನ ಮೆಚ್ಚಿದ್ದಾರೆ ಎಂದು ಈ ಫಲಿತಾಂಶ ತೋರುತ್ತದೆ ಎಂದು ಸಚಿವರು ಹೇಳಿದ್ದಾರೆ.

ಉಪಚುನಾವಣೆ ಫಲಿತಾಂಶದ ಮೂಲಕ ಮೂರು ಕ್ಷೇತ್ರಗಳ ಮತದಾರರು ವಿಪಕ್ಷಗಳಿಗೆ ಸ್ಪಷ್ಟ ಸಂದೇಶ ನೀಡಿದ್ದಾರೆ. ಮೂರು ಕ್ಷೇತ್ರಗಳ ಮತದಾರರು ಅಭಿವೃದ್ಧಿ ಕಾರ್ಯಗಳಿಗೆ ಮತ ಹಾಕಿದ್ದು, ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತಿದ್ದ ವಿರೋಧ ಪಕ್ಷಗಳಿಗೆ ಜನರು ತಕ್ಕ ಪಾಠ ಕಲಿಸಿದ್ದಾರೆ ಎಂದಿದ್ದಾರೆ.



ಶಿಗ್ಗಾವಿ–ಸವಣೂರು ಕ್ಷೇತ್ರದಲ್ಲಿ ಸಚಿವರಿಂದ ಪ್ರಚಾರ ಶಿಗ್ಗಾವಿ–ಸವಣೂರು ವಿಧಾನಸಭಾ ಕ್ಷೇತ್ರದ ಕುಂದೂರು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಪ್ರಚಾರ ಕೈಗೊಂಡಿದ್ದರು.

ಐದು ದಿನಗಳ ಕಾಲ ಪ್ರಚಾರ ನಡೆಸಿದ ಸಚಿವರು, ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಬಗ್ಗೆ, ಅಭಿವೃದ್ಧಿ ಯೋಜನೆಗಳ ಬಗ್ಗೆ ತಮ್ಮ ಭಾಷಣದ ಮೂಲಕ ಜನರಿಗೆ ತಿಳಿಹೇಳಿದ್ದರು.

ಉಪ ಚುನಾವಣಾ ಫಲಿತಾಂಶದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಕೈ ಮತ್ತಷ್ಟು ಬಲಗೊಂಡಿದ್ದು, ಈ ಫಲಿತಾಂಶದಿಂದ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಮತ್ತಷ್ಟು ಬಲಗೊಂಡಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಟ್ಟಡ ಕಾರ್ಮಿಕರ ತರಬೇತಿ ಶಿಬಿರ ಚಾಲನೆ ನೀಡಿ ಹೇಳಿಕೆ

# ಸರಕಾರದ ಸೌಲಭ್ಯಗಳು ಸದುಪಯೋಗವಾಗಲಿ : ನ್ಯಾ.ವಿಜಯಕುಮಾರ



**ಮುಧೋಳ:** ಕಟ್ಟಡ ಕಾರ್ಮಿಕರಿಗೆ ಸರಕಾರದಿಂದ ದೊರೆಯುವ ಸೌಲತ್ತು, ಸೌಲಭ್ಯಗಳಿಂದ, ನ್ಯಾಯದಿಂದ ವಂಚಿತರಾಗದೇ ಕಾನೂನು ಸಲಹೆ ಪಡೆದು ಇವುಗಳ ಸದುಪಯೋಗ ಪಡೆದುಕೊಳ್ಳಿ ಎಂದು ಪ್ರ.ದ. ಹಿರಿಯ ನ್ಯಾಯಾಧೀಶ ವಿಜಯಕುಮಾರ ಕೊಣ್ಣೂರ ಹೇಳಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಬಾಗಲಕೋಟೆ ಜಿಲ್ಲಾ ಕಾರ್ಮಿಕ ಇಲಾಖೆ, ತಾಲೂಕಾಡಳಿತ, ವಕೀಲರ ಸಂಘ, ಕಾ.ಇ. ಮುಧೋಳ ಇವರ ಸಹಯೋಗದಲ್ಲಿ ತಾಲೂಕಿನ ಉದ್ಯೋಗದಾತರಿಗೆ, ಗುತ್ತಿಗೆದಾರರಿಗೆ, ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಪದಾಧಿಕಾರಿ ಹಾಗು ಕಾರ್ಮಿಕರಿಗೆ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಕಾರ್ಮಿಕರ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನದ ಕುರಿತು 1.ದಿನದ ಕಾರ್ಯಾಗಾರಗೆ ಚಾಲನೆ ನೀಡಿ ಅವರು ಮಾತನಾಡಿದರು. ವಕೀಲರ ಸಂಘದ ಅಧ್ಯಕ್ಷ ವ್ಹಿ.ಡಿ. ಕತ್ತಿ ಮಾತನಾಡಿ, ನೈಜ ಕಾರ್ಮಿಕರಿಗೆ, ಅರ್ಹ ಫಲಾನುಭವಿಗಳಿಗೆ ಸಹಾಯ ಸೌಲತ್ತು ಸಿಗಲು ಕಾರ್ಮಿಕ ಇಲಾಖೆ ಜೊತೆ ಕೈ ಜೋಡಿಸಿ ಈ ಕುರಿತು ಜಾಗೃತಿ ಮೂಡಿಸಬೇಕಾಗಿದೆ. ಉಳಿದವರಿಗೆ ನೀಡುವಂತೆ ಸರಕಾರದ ಸೌಲಭ್ಯ ತಮಗೂ ದೊರೆಯುವ ಸೌಲಭ್ಯಗಳಿಂದ ತಮ್ಮ ವೃತ್ತಿಯಲ್ಲಿ ಕ್ರೀಯಾಶೀಲರಾಗಿ ಎಂದು ಅವರು ಕಾರ್ಮಿಕರಿಗೆ ಕರೆ ನೀಡಿದರು.

ತರಬೇತಿ: ಕಟ್ಟಡ ಹಾಗು ಆಹ್ವಾನಿತ ಎಲ್ಲ ವರ್ಗದ ಕಾರ್ಮಿಕರಿಗೆ ಆರ್.ಪಿ.ಎಲ್. ಒಂದು ದಿನದ ತರಬೇತಿಯನ್ನು ಇಲಾಖಾಧಿಕಾರಿಗಳು ನೀಡಿದರು. ಇದೇ ಸಂದರ್ಭದಲ್ಲಿ ಶಿರೂರಿನ ಜಾನಪದ ಕಲಾ ತಂಡದವರಿಂದ ಬಾಲಕಾರ್ಮಿಕರ ನಿಷೇಧ ಕುರಿತಾಗಿ ತಮ್ಮ ಗಾಯನ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದರು.

ಆಹಾರ ಇಲಾಖೆಯ ಶಿರಸ್ತೆದಾರ ಬಿ.ಡಿ. ದೇಶಪಾಂಡೆ, ಪಂಚಾಯತರಾಜ ಸ.ನಿ. ಹೊಳಬಸು ಕರೆಹೊನ್ನ, ಪಾಂಡುರಂಗ ರಡ್ಡಿ, ಕಾರ್ಮಿಕ ಇಲಾಖಾಧಿಕಾರಿ ರಮೇಶ ಸುಂಬಡ, ಸಿಬ್ಬಂದಿ ವರ್ಗ ಹಾಗು ಇತರರಿದ್ದರು.

# ಎರಡು ತಿಂಗಳ ವೇತನ ನೀಡಲು ಒಪ್ಪಿಗೆ : ಮುಷ್ಕರ ಕೈ ಬಿಟ್ಟ ಪೌರ ಕಾರ್ಮಿಕರು

# ಸದನದಲ್ಲಿ ಮಾತನಾಡುವ ಭರವಸೆ ನೀಡಿದ ಶಾಸಕ



**ತೇರದಾಳ–**ವೇತನಕ್ಕಾಗಿ ಆಗ್ರಹಿಸಿ ಕೆಲಸ ಸ್ಥಗಿತಗೊಳಿಸಿ ಮುಷ್ಕರ ಕೈಗೊಂಡಿದ್ದ ಇಲ್ಲಿನ ಪುರಸಭೆ ಪೌರ ಕಾರ್ಮಿಕರು, ಅಧ್ಯಕ್ಷೆ ಶಿಲ್ಪಾ ರೋಡಕರ ಹಾಗೂ ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ ಎರಡು ತಿಂಗಳ ವೇತನ ಪಾವತಿಸುವುದಾಗಿ ಒಪ್ಪಿಗೆ ನೀಡಿದ್ದರಿಂದ ಹಾಗೂ ಶಾಸಕ ಸಿದ್ದು ಸವದಿ ಬೆಳಗಾವಿಯಲ್ಲಿ ನಡೆಯುವ ಅಧಿವೇಶನದಲ್ಲಿ ವೇತನ ಕುರಿತು ಮಾತನಾಡುವ ಭರವಸೆ ನೀಡಿದ್ದರಿಂದ ಶನಿವಾರ ಸಂಜೆ ಪೌರ ಕಾರ್ಮಿಕರು ಮುಷ್ಕರ ಕೈ ಬಿಟ್ಟರು.

ಧರಣಿ ನಿರತ ಪೌರ ಕಾರ್ಮಿಕರನ್ನು ಬೇಟಿ ಮಾಡಿದ ಶಾಸಕ ಸಿದ್ದು ಸವದಿ, ಸರಕಾರ ನೇರ ನೇಮಕಾತಿ ಹೊಂದಿದ ಕಾರ್ಮಿಕರನ್ನು ಖಾಯಂಗೊಳಿಸಿದ್ದು ಸ್ವಾಗತಾರ್ಹ. ಆದರೆ ಅವರಿಗೆ ವೇತನ ನೀಡಲು ಅನುದಾನವನ್ನು ಕೂಡ ನೀಡಬೇಕು. ಇದು ಒಂದು ಪುರಸಭೆಯ ಸಮಸ್ಯೆ ಅಲ್ಲ. ರಾಜ್ಯಾದ್ಯಂತ ಎಲ್ಲ ಸ್ಥಳೀಯ ಸಂಘ ಸಂಸ್ಥೆಗಳ ಸಮಸ್ಯೆ ಇದೆ. ತೇರದಾಳ ಕ್ಷೇತ್ರದಲ್ಲಿನ ಮೂರು ಸ್ಥಳೀಯ ಸಂಘ ಸಂಸ್ಥೆಗಳ ಸಮಸ್ಯೆ ಜತೆಗೆ ರಾಜ್ಯದ ಪೌರ ಕಾರ್ಮಿಕರ ಸಮಸ್ಯೆ ಕುರಿತು ಅಧಿವೇಶನದಲ್ಲಿ ಧ್ವನಿ ಎತ್ತುವುದಾಗಿ ಭರವಸೆ ನೀಡಿದರು.

ಮೂರು ತಿಂಗಳ ವೇತನ ಬಾಕಿ ಇದ್ದು, ಈಗ ಎರಡು ತಿಂಗಳ ವೇತನ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು. ಸರಕಾರಕ್ಕೂ ಸಮಸ್ಯೆ ಕುರಿತು ಪತ್ರ ಬರೆಯುವುದಾಗಿ ಅಧ್ಯಕ್ಷೆ ಹಾಗೂ ಮುಖ್ಯಾಧಿಕಾರಿ ಭರವಸೆ ನೀಡಿದರು. ಸದಸ್ಯರಾದ ಸಚಿನ ಕೊಡತೆ, ಕಾಶಿನಾಥ ರಾಠೋಡ, ಗೌತಮ ರೋಡಕರ, ಶಂಕರ ಕುಂಬಾರ, ಪೌರ ಕಾರ್ಮಿಕರ ಸಂಘದ ಅಧ್ಯಕ್ಷ ರಘು ಗೋಠಡಕಿ ಮತ್ತಿತರಿದ್ದರು.

# ಮಧುಮೇಹ ಕಾಯಿಲೆ ವಿಶ್ವಕ್ಕೆ ಮಾರಕವಾಗಿದೆ: ಡಾ.ದಡ್ಡಿ

**ಜಮಖಂಡಿ:** ವಿಶ್ವಕ್ಕೆ ಮಾರಕವಾಗಿ ಪರಿಣಮಿಸಿರುವ ಮಧುಮೇಹ (ಸಕ್ಕರೆ ಕಾಯಿಲೆ) ತಡೆಗೆ ಜಾಗೃತಿ ಅವಶ್ಯಕ ಆಗಿದೆ ಎಂದು ಡಾ. ಎಚ್.ಜಿ.ದಡ್ಡಿ ಹೇಳಿದರು.

ನಗರದ ಬಸವ ಭವನದಲ್ಲಿ ಸ್ಥಳೀಯ ಲಯನ್ಸ ಸಂಸ್ಥೆ ಹಮ್ಮಿಕೊಂಡಿದ್ದ ವಿಶ್ವ ಮಧುಮೇಹ ದಿನಾಚರಣೆ ನಿಮಿತ್ತ ಹಮ್ಮಿಕೊಂಡಿದ್ದ ಜಾಗೃತಿ ಜಾಥಾ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಜೀವನ ಶೈಲಿಯಲ್ಲಿ, ಆಹಾರದಲ್ಲಿ ಬದಲಾವಣೆ, ಫಾಸ್ಟಫುಡ್, ಜಂಕು ಫುಡ್‌ಗಳ ಸೇವನೆ, ಸೋಮಾರಿತನ, ದೈಹಿಕ ಚಟುವಟಿಕೆಗಳ ಕೊರತೆ, ಅತಿಯಾದ ಮಾನಸಿಕ ಒತ್ತಡದಿಂದ ಮಧುಮೇಹ ವಿಶ್ವದೆಲ್ಲಡೆ ವ್ಯಾಪಿಸಿದೆ ಎಂದರು.

10 ಕೋಟಿಗೂ ಹೆಚ್ಚು ಮಧುಮೇಹ ರೋಗಿಗಳು, 10 ಕೋಟಿ ಪ್ರಿಡಯಾಬೆಟಿಕ್ರೋಗಿಗಳು ನಮ್ಮ ದೇಶದಲ್ಲಿದ್ದಾರೆ. ಮನೆಯಲ್ಲಿ ತಯಾರಿಸಿದ ಶುದ್ಧವಾದ ಆಹಾರ ಸೇವನೆ, ನಿಯಮಿತ ವ್ಯಾಯಾಮ, ಜಂಕಪುಡ್ ಬಳಕೆ ನಿಲ್ಲಿಸುವ ಮೂಲಕ ಮಧುರ್ಮೇಹ ಬರದಂತೆ ನೋಡಿಕೊಳ್ಳುವುದು ಅವಶ್ಯಕವಾಗಿದೆ. ಇಂದಿನ ದಿನಮಾನದಲ್ಲಿ ಚಿಕ್ಕಮಕ್ಕಳಲ್ಲಿ ಮಧುಮೇಹದ ತೊಂದರೆ ಕಾಣುತ್ತಿರುವುದು



ವಿಪರ್ಯಾಸವಾಗಿದೆ. ಸಕ್ಕರೆ ಕಾಯಿಲೆಯಿಂದ ಅನೇಕ ಆರೋಗ್ಯ ಸಮಸ್ಯೆಗಳು ಎದುರಾಗುತ್ತವೆ. ಕಣ್ಣು, ನರಮಂಡಲ, ಹೃದಯ, ಕಿಡ್ನಿ ಮುಂತಾದ ಸಮಸ್ಯೆಗಳು ಎದುರಾಗುತ್ತವೆ. ಇದರಿಂದ ಮಾನವನ ಆಯಸ್ಸು ಕ್ಷೀಣಿಸುತ್ತದೆ ಎಂದರು.

ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ ಜಾಥಾಗೆ ಚಾಲನೆ ನೀಡಿದರು. ಲಯನ್ಸ ಸಂಸ್ಥೆಯ ಅಧ್ಯಕ್ಷ ಚಿನ್ಮಯ ಜಿರಲಿ, ಕಾರ್ಯದರ್ಶಿ ಮೈಗೂರ ಪ್ರವೀಣ, ಖಜಾಂಚಿ ಸುನೀಲ ಮುರಗೋಡ, ಡಾ.ವಿ.ಎಸ್.ಬಿರಾದಾರ, ನೌಕರ ಸಂಘದ ಅಧ್ಯಕ್ಷ ಶೆಟ್ಟರ, ಡಾ. ವಿಜಯಲಕ್ಷ್ಮೀ ತುಂಗಳ, ಡಾ.ದೇವರಡ್ಡಿ, ಪ್ರಭು ಜನವಾಡ, ಸಂಗಮೇಶ. ಕೌಜಲಗಿ ಡಾ. ರಾಜಶೇಖರ, ಡಾ.ಉತ್ತಮ, ಡಾ.ತಿಪ್ಪೇಸ್ವಾಮಿ, ಬಸವಲಿಂಗ ಬೃಂಗೀಮಠ ಸಹಿತ ಹಲವರು ಇದ್ದರು.

ಕಾರ್ಯಕ್ರಮಕ್ಕೂ ಮುಂಚೆ ನಗರದ ಎ.ಜಿ.ದೇಸಾಯಿ ವೃತ್ತದಲ್ಲಿ ಚಾಲನೆಗೊಂಡ ಜಾಥಾ ಪ್ರಮುಖ ರಸ್ತೆಗಳಲ್ಲಿ ಮಧುಮೇಹ ಜಾಗೃತಿ ಜಾಥಾ ಸಂಚರಿಸಿತು.. ಜಾಥಾದಲ್ಲಿ ಭಾರತೀಯ ವೈದ್ಯಕೀಯ ಸಂಸ್ಥೆ, ಬಿ.ಎಲ್.ಡಿ.ಇ.ಸಂಸ್ಥೆ ನರ್ಸಿಂಗ ಕಾಲೇಜು, ಬಾಗಲಕೋಟೆ ವಿಶ್ವ ವಿದ್ಯಾಲಯ ವಿದ್ಯಾರ್ಥಿಗಳ ಸಹಿತ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

BELAGINA SURYODHYA KANNADA DAILY MORNING Editor, Printer, PUblisher and Owned By GURURAJ IRAPPA KADAM Plot No.2743 NEAR KEB POWER HOUSE RAMTEERTH NAGAR, SHIVAJI NAGAR BELAGAVI-590016
DIST-BELAGAVI,STATE KARNATAKA PRINTED At M/S LAXMI PRINTERS, No. 627,Auto Nagar,Belagavi,Dist- Belagavi Karnataka, RNI No. KARKAN/2019/77640, Volume : 06, Issue : 243, Postal Reg No. PMG/KA/NK/BM/135/22-24 / POST AT Vantamury Colony Post Office